ಸೋಮವಾರ, ಜುಲೈ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 203 | ಪುಟ 12
www.prajavani.net
prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿ ನೀಡುವ ಪಶುಸಂಗೋಪನೆ ಡಿಪ್ಲೊಮಾ


ಆಳ-ಅಗಲ
'ನಗರ ನಕ್ಸಲ'ರ ನಿಗ್ರಹಕ್ಕೆ ಪ್ರತ್ಯೇಕ ಕಾಯ್ದೆ ಬೇಕೆ?

ಪೇಸ್, ಅಮೃತರಾಜ್‌ಗೆ ಟೆನಿಸ್ ಹಾಲ್ ಆಫ್ ಫೇಮ್ ಗೌರವ 10

ಬಾಂಗ್ಲಾ: ಉದ್ಯೋಗದಲ್ಲಿ ಕೋಟಾ ಕಡಿತಗೊಳಿಸಿದ 'ಸುಪ್ರೀಂ' 9

## ಒಳಪುಟಗಳಲ್ಲಿ

ಭಾರಿ ಮಳೆ: ಜನಜೀವನ ಅಸ್ತವ್ಯಸ್ತ 9

ವಿಂಡೋಸ್ ದೋಷ: 85 ಲಕ್ಷ ಸಾಧನಗಳ ಕಾರ್ಯಕ್ಕೆ ಅಡ್ಡಿ 8

ಸ್ಪರ್ಧೆಯಿಂದ ಹಿಂದೆ ಸರಿದ ಅಧ್ಯಕ್ಷ ಜೋ ಬೈಡನ್ 9


ಇಂದಿನಿಂದ ಸಂಸತ್‌ನ ಬಜೆಟ್ ಅಧಿವೇಶನ • ವಿವಾದಾತ್ಮಕ ವಿಷಯಗಳ ಪ್ರಸ್ತಾಪ

# ಸದನದಲ್ಲಿ ಸಂಘರ್ಷ: ವಿಪಕ್ಷ ಸಜ್ಜು

**ನವದೆಹಲಿ (ಪಿಟಿಐ):** 'ನೀಟ್-ಯುಜಿ' ಹಾಗೂ ವಿವಿಧ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ, ಕಾವಡ್ ಯಾತ್ರೆಗೆ ಸಂಬಂಧಿಸಿ ಉತ್ತರ ಪ್ರದೇಶ ಸರ್ಕಾರ ಹೊರಡಿಸಿರುವ ಆದೇಶ ಸೇರಿದಂತೆ ವಿವಾದಾತ್ಮಕ ವಿಷಯಗಳನ್ನು ಪ್ರಸ್ತಾಪಿಸಲು ವಿರೋಧ ಪಕ್ಷಗಳು ಸಜ್ಜಾಗಿವೆ. ಹೀಗಾಗಿ, ಸೋಮವಾರದಿಂದ ಆರಂಭವಾಗಲಿರುವ ಸಂಸತ್‌ನ ಬಜೆಟ್ ಅಧಿವೇಶನವು ಕಾವೇರಿದ ಚರ್ಚೆ, ಕೋಲಾಹಲಕ್ಕೆ ಸಾಕ್ಷಿಯಾಗುವ ಎಲ್ಲ ಸಾಧ್ಯತೆಗಳಿವೆ.

ಬಜೆಟ್ ಅಧಿವೇಶನವು ಸುಸೂತ್ರವಾಗಿ ನಡೆಯಲು ಎಲ್ಲ ಪಕ್ಷಗಳು ಸಹಕಾರ ನೀಡಬೇಕು. ಇದು ಸಾಮೂಹಿಕ ಹೊಣೆಗಾರಿಕೆ ಎಂಬುದಾಗಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಮನವಿ ಮಾಡಿದರು.

ಆದರೆ, ಹಲವು ವಿವಾದಾತ್ಮಕ ವಿಚಾರಗಳ ಕುರಿತು ಚರ್ಚೆಗೆ ಅವಕಾಶ ನೀಡಲೇಬೇಕು ಎಂಬುದಾಗಿ ಸರ್ವಪಕ್ಷಗಳ ಸಭೆಯಲ್ಲಿ ಪಾಲ್ಗೊಂಡಿದ್ದ ವಿಪಕ್ಷಗಳ ನಾಯಕರು ಖಂಡತುಂಡವಾಗಿ ಹೇಳುವ ಮೂಲಕ, ಸದನದಲ್ಲಿ ಹೋರಾಟಕ್ಕೆ ತಾವು ಸಜ್ಜಾಗಿದ್ದೇವೆ ಎಂಬ ಸಂದೇಶ ರವಾನಿಸಿದ್ದಾರೆ.

### ಮುಖ್ಯಾಂಶಗಳು

- ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಂದ ಮಂಗಳವಾರ ಬಜೆಟ್ ಮಂಡನೆ
- ಆಗಸ್ಟ್ 12ರ ವರೆಗೆ ಬಜೆಟ್ ಅಧಿವೇಶನ
- 6 ಮಸೂದೆಗಳ ಮಂಡನೆ ನಿರೀಕ್ಷೆ

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆ ವಹಿಸಿದ್ದ ಸರ್ವಪಕ್ಷಗಳ ಸಭೆಯು ಮೂರು ಗಂಟೆ ನಡೆಯಿತು. ಇದೇ ಮೊದಲ ಬಾರಿಗೆ, ಏಕೈಕ ಸಂಸದರನ್ನು ಹೊಂದಿರುವ ಪಕ್ಷಗಳಿಗೂ ಸಭೆಗೆ ಆಹ್ವಾನ ನೀಡಲಾಗಿತ್ತು. 44 ಪಕ್ಷಗಳ 55 ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪಕ್ಷದ ವತಿಯಿಂದ ಹಮ್ಮಿಕೊಂಡಿದ್ದ 'ಹುತಾತ್ಮರ ದಿನ' ರ್‍ಯಾಲಿ ಕಾರಣದಿಂದ ಟಿಎಂಸಿ ನಾಯಕರು ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ.

**ಹಲವು ಬೇಡಿಕೆ–ವಿಷಯ ಪ್ರಸ್ತಾಪ:** ಲೋಕಸಭೆಯ ಉಪ ಸ್ಪೀಕರ್ ಸ್ಥಾನವನ್ನು ವಿರೋಧ ಪಕ್ಷಗಳಿಗೆ ಬಿಟ್ಟುಕೊಡಬೇಕು. ಇದು ಮೊದಲಿನಿಂದಲೂ ಪಾಲಿಸಿಕೊಂಡು ಬಂದಿರುವ ಸಂಪ್ರದಾಯ ಎಂದು ಕಾಂಗ್ರೆಸ್ ಪ್ರತಿಪಾದಿಸಿತು. 'ಇಂಡಿಯಾ' ಒಕ್ಕೂಟದ ಅಂಗಪಕ್ಷಗಳು ಈ ಬೇಡಿಕೆಯನ್ನು ಬೆಂಬಲಿಸಿದವು ಎಂದು ಕಾಂಗ್ರೆಸ್ ನಾಯಕ ಕೆ.ಸುರೇಶ್, ಸಭೆ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

'ಜಮ್ಮು–ಕಾಶ್ಮೀರದಲ್ಲಿ ಮುಂದುವರಿದ ಉಗ್ರರ ದಾಳಿ, ಮಣಿಪುರದಲ್ಲಿನ ಪರಿಸ್ಥಿತಿ, ರೈಲು ಅಪಘಾತಗಳು, ನಿರುದ್ಯೋಗ, ಅಗತ್ಯ ವಸ್ತುಗಳ ಬೆಲೆ ಏರಿಕೆಯಂತಹ ವಿಷಯಗಳ ಕುರಿತು ಅಧಿವೇಶನದಲ್ಲಿ ಚರ್ಚೆ ನಡೆಸುವ ಅಗತ್ಯವನ್ನು ಸಭೆಯಲ್ಲಿ ವಿವರಿಸಿದ್ದೇವೆ' ಎಂದೂ ಹೇಳಿದರು.

'ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ರಾಜೀನಾಮೆ, ವಿವಿಧ ಪರೀಕ್ಷೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆಯೂ ಚರ್ಚೆ ನಡೆಯಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟೆವು' ಎಂದರು.

ಕಾವಡ್ ಯಾತ್ರೆ ಸಾಗುವ ಮಾರ್ಗದಲ್ಲಿರುವ ತಿಂಡಿ–ತಿನಿಸುಗಳ ಮಳಿಗೆಗಳ ಮಾಲೀಕರು ತಮ್ಮ ಹೆಸರುಗಳನ್ನು ಪ್ರದರ್ಶಿಸಬೇಕು ಎಂಬುದಾಗಿ ಉತ್ತರ ಪ್ರದೇಶ ಹೊರಡಿಸಿರುವ ಆದೇಶವು ವಿರೋಧ ಪಕ್ಷಗಳ ಕೈಗೆ ದೊಡ್ಡ ಅಸ್ತ್ರವಾಗಿದೆ. ಇದನ್ನು ಪ್ರಸ್ತಾಪಿಸುವ ಮೂಲಕ ಕೇಂದ್ರ ಸರ್ಕಾರದ ಮೇಲೆ ಚಾಟಿ ಬೀಸಲು ಕಾಂಗ್ರೆಸ್, ಡಿಎಂಕೆ, ಎಎಪಿ ಸೇರಿದಂತೆ 'ಇಂಡಿಯಾ' ಒಕ್ಕೂಟದ ಅಂಗಪಕ್ಷಗಳು ಸಜ್ಜಾಗಿವೆ.

ಎನ್‌ಡಿಎ ಅಂಗಪಕ್ಷಗಳು ಸಹ ಈ ಆದೇಶ ಕುರಿತಂತೆ ಈಗಾಗಲೇ ಅಸಮಾಧಾನ ವ್ಯಕ್ತಪಡಿಸಿವೆ. ಹೀಗಾಗಿ, ಈ ವಿಚಾರವು ಕಲಾಪದಲ್ಲಿ ಕಾವೇರಿದ ಚರ್ಚೆಗೆ ಕಾರಣವಾಗುವ ಎಲ್ಲ ಸಾಧ್ಯತೆಗಳೂ ಇವೆ.

### ವಿಶೇಷ ಸ್ಥಾನ: ಟಿಡಿಪಿ ಮೌನ

ತಮ್ಮ ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡಬೇಕು ಎಂದು ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ವಿವಿಧ ಪಕ್ಷಗಳು ಬೇಡಿಕೆ ಮುಂದಿಟ್ಟವು.

ಬಿಹಾರ, ಆಂಧ್ರಪ್ರದೇಶ ಹಾಗೂ ಒಡಿಶಾ ರಾಜ್ಯಗಳಿಗೆ ವಿಶೇಷ ಸ್ಥಾನಮಾನ ನೀಡಬೇಕು ಎಂದು ಕ್ರಮವಾಗಿ ಜೆಡಿಯು, ವೈ.ಎಸ್.ಆರ್. ಕಾಂಗ್ರೆಸ್ ಪಕ್ಷ ಹಾಗೂ ಬಿಜೆಡಿ ಆಗ್ರಹಿಸಿದವು. ಆದರೆ, ಆಂಧ್ರಪ್ರದೇಶದಲ್ಲಿ ಇತ್ತೀಚೆಗಷ್ಟೆ ಅಧಿಕಾರಕ್ಕೆ ಬಂದಿರುವ ಟಿಡಿಪಿ, ಈ ವಿಚಾರವಾಗಿ ಮೌನ ವಹಿಸಿತ್ತು.

ಈ ನಿಲುವನ್ನು ಪ್ರಸ್ತಾಪಿಸಿ, 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, 'ರಾಜ್ಯಕ್ಕೆ ವಿಶೇಷ ಸ್ಥಾನಮಾನ ಬೇಕು ಎಂಬ ವಿಚಾರವಾಗಿ ಟಿಡಿಪಿ ಮೌನವಹಿಸಿದ್ದು ಅಚ್ಚರಿದಾಯಕ' ಎಂದು ಕುಟುಕಿದ್ದಾರೆ.

ಎನ್‌ಡಿಎ ಹಾಗೂ ವಿಪಕ್ಷಗಳ ಒಕ್ಕೂಟ 'ಇಂಡಿಯಾ'ದ ಅಂಗಪಕ್ಷಗಳು ಕೂಡ ಬಿಹಾರಕ್ಕೆ ವಿಶೇಷ ಸ್ಥಾನಮಾನ ನೀಡುವಂತೆ ಒತ್ತಾಯಿಸಿದವು.

ಬಿಜೆಪಿ ಮಿತ್ರಪಕ್ಷಗಳಾದ ಜೆಡಿಯುನ ಸಂಜಯಕುಮಾರ್ ಝಾ, ಎಲ್‌ಜೆಪಿಯ ನಾಯಕ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ಅವರು ವಿಶೇಷ ಸ್ಥಾನಮಾನದ ಬೇಡಿಕೆಗೆ ಬೆಂಬಲಿಸಿದರು. ಈ ಮಾತಿಗೆ ಆರ್‌ಜೆಡಿ ಕೂಡ ದನಿಗೂಡಿಸಿತು.

'ವಿಶೇಷ ಸ್ಥಾನಮಾನ ಕೊಡಲು ಸಾಧ್ಯವಿಲ್ಲ ಎಂದಾದಲ್ಲಿ, ವಿಶೇಷ ಹಣಕಾಸು ನೆರವು ನೀಡಬೇಕು' ಎಂದು ಝಾ ಹೇಳಿದರು.

**ಬೃಹತ್ ರ್‍ಯಾಲಿ** 'ಟಿಎಂಸಿ ಹುತಾತ್ಮರ ದಿನ' ಅಂಗವಾಗಿ ತೃಣಮೂಲ ಕಾಂಗ್ರೆಸ್ ಪಕ್ಷದ ವತಿಯಿಂದ ಕೋಲ್ಕತ್ತದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರ್‍ಯಾಲಿಯಲ್ಲಿ ಪಕ್ಷದ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪ್ರಬಲ ಸಮುದಾಯದ 18 ಮಂದಿಗೆ ಆಯಕಟ್ಟಿನ ಹುದ್ದೆ: ಸಿ.ಎಂಗೆ ದೂರು

# ಕೆಪಿಟಿಸಿಎಲ್; ಒಕ್ಕಲಿಗರಿಗೇ ಮಣೆ

• ಜಯಸಿಂಹ ಆರ್.

**ಬೆಂಗಳೂರು:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ (ಕೆಪಿಟಿಸಿಎಲ್) 33 ಕಾರ್ಯನಿರ್ವಾಹಕ ಎಂಜಿನಿಯರ್‌ಗಳನ್ನು (ಇಇ) ವರ್ಗಾವಣೆ ಮಾಡಿದ್ದು, ಅದರಲ್ಲಿ 18 ಹುದ್ದೆಗಳನ್ನು ಒಕ್ಕಲಿಗ ಅಧಿಕಾರಿಗಳಿಗೇ ನೀಡಲಾಗಿದೆ.

ಬೆಸ್ಕಾಂ ಸೇರಿ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ (ಎಸ್ಕಾಂ) ಆಯಕಟ್ಟಿನ ಹುದ್ದೆಗಳನ್ನು ಒಕ್ಕಲಿಗ ಸಮುದಾಯದ ಕಾರ್ಯನಿರ್ವಾಹಕ ಎಂಜಿನಿಯರ್‌ಗಳಿಗೆ ನೀಡಿದ್ದು, ಇದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದೂರು ಸಲ್ಲಿಕೆಯಾಗಿದೆ.

'ಇದೇ 12ರಂದು ಕೆಪಿಟಿಸಿಎಲ್, ಇಇಗಳ ವರ್ಗಾವಣೆ ಸಂಬಂಧ ಎರಡು ಆದೇಶಗಳನ್ನು ಹೊರಡಿಸಿತ್ತು. ಒಟ್ಟು 33 ಇಇಗಳಲ್ಲಿ, ಬೆಸ್ಕಾಂ ಮತ್ತು ಬೆಂಗಳೂರಿನ ವ್ಯಾಪ್ತಿಯಲ್ಲೇ 19 ಮಂದಿ ವರ್ಗಾವಣೆಯಾಗಿದ್ದಾರೆ. ಈ 19 ಮಂದಿಯ ಪೈಕಿ ಒಕ್ಕಲಿಗ ಸಮುದಾಯದ 17 ಮಂದಿ ಇದ್ದಾರೆ. ಇವರೆಲ್ಲರಿಗೂ ಬೆಸ್ಕಾಂ ಮತ್ತು ಕೆಪಿಟಿಸಿಎಲ್‌ನಲ್ಲಿ ಆಯಕಟ್ಟಿನ ಹುದ್ದೆ ನೀಡಲಾಗಿದೆ. ಒಬ್ಬ ಒಕ್ಕಲಿಗ ಅಧಿಕಾರಿ ಇದ್ದ ಹುದ್ದೆಗೆ, ಮತ್ತೊಬ್ಬ ಒಕ್ಕಲಿಗ ಅಧಿಕಾರಿಯನ್ನೇ ತರಲಾಗಿದೆ. ಆಯಕಟ್ಟಿನ ಹುದ್ದೆಗಳು ಬೇರೆ ಸಮುದಾಯದ ಅಧಿಕಾರಿಗಳಿಗೆ ಸಿಗದಂತೆ ಮಾಡಲಾಗಿದೆ' ಎಂದು ದೂರಿನಲ್ಲಿ ವಿವರಿಸಿದ್ದಾರೆ.

> **ಸಾಮಾಜಿಕ ನ್ಯಾಯ ಎಂಬುದನ್ನು ಬದಿಗೊತ್ತಿ, ಈ ವರ್ಗಾವಣೆ ಪ್ರಕ್ರಿಯೆ ನಡೆಸಲಾಗಿದೆ. ಇದನ್ನು ರದ್ದುಪಡಿಸದೇ ಇದ್ದರೆ, ತೀವ್ರ ಹೋರಾಟ ನಡೆಸುತ್ತೇವೆ**
> **ಎಂ.ರಮೇಶ್,** ಜಿಲ್ಲಾ ಸಂಚಾಲಕ, ದಲಿತ ಸಂಘರ್ಷ ಸಮಿತಿ ಬೆಂಗಳೂರು ಜಿಲ್ಲಾ ಸಮಿತಿ

> **ಬೆಸ್ಕಾಂ ವ್ಯಾಪ್ತಿಯಲ್ಲಿ ವರ್ಗಾವಣೆ ಆಗಿರುವ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ಜಾತಿಗೆ ಸಂಬಂಧಿಸಿದ ಮಾಹಿತಿ ಗೊತ್ತಿಲ್ಲ**
> **ಮಹಾಂತೇಶ ಬೀಳಗಿ,** ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ

ಸೆಸ್ಕ್ ವ್ಯಾಪ್ತಿಯಲ್ಲಿ ಮತ್ತೊಬ್ಬ ಒಕ್ಕಲಿಗ ಇಇ ವರ್ಗಾವಣೆ ನಡೆದಿದೆ. ಮುಖ್ಯಮಂತ್ರಿಗೆ ನೀಡಲಾದ ದೂರಿನಲ್ಲಿ, ವರ್ಗಾವಣೆಯಾದ ಅಧಿಕಾರಿಗಳ ಜಾತಿ ಸಂಬಂಧಿತ ದಾಖಲೆಗಳನ್ನೂ ಸಲ್ಲಿಸಲಾಗಿದೆ. 'ವರ್ಗಾವಣೆಯಲ್ಲಿ ಪ್ರಬಲ ಒಕ್ಕಲಿಗ ಸಮುದಾಯಕ್ಕೇ ಮಣೆ ಹಾಕಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದ ಅಧಿಕಾರಿಗಳನ್ನು ಕಡೆಗಣಿಸಲಾಗಿದೆ. ಈ ಮೂಲಕ ಈ ಸಮುದಾಯಗಳಿಗೆ ಅನ್ಯಾಯ ಮಾಡಲಾಗಿದೆ' ಎಂದು ದಲಿತ ಸಂಘರ್ಷ ಸಮಿತಿಯ (ಸಂಯೋಜಿತ) ಬೆಂಗಳೂರು ಜಿಲ್ಲಾ ಸಮಿತಿಯು ಮುಖ್ಯಮಂತ್ರಿಯವರಿಗೆ ದೂರು ನೀಡಿದೆ.

5ನೇ ಪುಟ ನೋಡಿ

### ಸಿ.ಎಂ ಅನುಮೋದನೆ ಕಡತಕ್ಕೆ ಕೊಕ್

ವಿವಿಧ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯನಿರ್ವಾಹಕ ಎಂಜಿನಿಯರ್‌ಗಳ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಡಿದ್ದ ಟಿಪ್ಪಣಿಗಳು ಹಾಗೂ ಮುಖ್ಯಮಂತ್ರಿಯವರು ಅನುಮೋದಿಸಿದ್ದ ಕಡತವನ್ನು ಕಡೆಗಣಿಸಿ ಆದೇಶ ಹೊರಡಿಸಲಾಗಿದೆ ಎಂಬ ಆರೋಪ ದೂರಿನಲ್ಲಿದೆ.

'ಎಲ್ಲ ಸಮುದಾಯಗಳ ಅಧಿಕಾರಿಗಳನ್ನು ಒಳಗೊಂಡಿದ್ದ ವರ್ಗಾವಣೆ ಕಡತವನ್ನು ಮುಖ್ಯಮಂತ್ರಿ ಅನುಮೋದಿಸಿದ್ದರು. ಆದರೆ ಇಂಧನ ಇಲಾಖೆಯಲ್ಲಿರುವ ಒಕ್ಕಲಿಗ ಸಮುದಾಯದ ಪ್ರಬಲ ಅಧಿಕಾರಿಯು ಆ ಕಡತವನ್ನು ಕೈಬಿಟ್ಟು, ಯಾರ ಅನುಮೋದನೆಯನ್ನೂ ಪಡೆಯದೆ ಈ ವರ್ಗಾವಣೆ ಪ್ರಕ್ರಿಯೆಯನ್ನು ಮಾಡಿದ್ದಾರೆ' ಎಂದು ಪತ್ರದಲ್ಲಿ ದೂರಲಾಗಿದೆ.

# ಶಿರೂರು ಗುಡ್ಡಕ್ಕೆ ಮುಖ್ಯಮಂತ್ರಿ ಭೇಟಿ

## ಕಣ್ಮರೆಯಾದವರ ಕುಟುಂಬ ಸದಸ್ಯರ ಭೇಟಿಯಾಗದೆ ತೆರಳಿದ್ದಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

**ಶಿರೂರು (ಉತ್ತರ ಕನ್ನಡ ಜಿಲ್ಲೆ):** ಗುಡ್ಡ ಕುಸಿತ ಸಂಭವಿಸಿದ ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಭೇಟಿ ನೀಡಿ, ಪರಿಹಾರ ಕಾರ್ಯಗಳನ್ನು ಪರಿಶೀಲಿಸಿದರು. ದುರಂತದಲ್ಲಿ ಕಣ್ಮರೆಯಾದ ಕುಟುಂಬದ ಸದಸ್ಯರನ್ನು ಭೇಟಿ ಮಾಡದೆ ತೆರಳಿದ್ದರಿಂದ ಆ ಕುಟುಂಬಗಳ ಸದಸ್ಯರು ಹಾಗೂ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

ದುರ್ಘಟನೆಯಲ್ಲಿ ಕಣ್ಮರೆಯಾದ ಜಗನ್ನಾಥ ನಾಯ್ಕ ಅವರ ಪುತ್ರಿಯರು ಮುಖ್ಯಮಂತ್ರಿ ಅವರು ಸಾಗುತ್ತಿದ್ದ ಮಾರ್ಗದಲ್ಲೇ ಭೇಟಿಗೆ ತಾಸುಗಟ್ಟಲೆ ಕಾದಿದ್ದರು. ಬೆಟ್ಟ ಕುಸಿತದ ಸ್ಥಳಕ್ಕೆ ಭೇಟಿ ನೀಡಿ ವಾಪಸ್ಸಾಗುವ ವೇಳೆ ಬಿರುಸಿನ ಮಳೆ ಸುರಿದಿದ್ದರಿಂದ ಮುಖ್ಯಮಂತ್ರಿ ಕಾರು ನಿಲ್ಲದೆಯೇ ಸಾಗಿತು.

5ನೇ ಪುಟ ನೋಡಿ

### ಕಣ್ಮರೆಯಾದವರ ಸಂಖ್ಯೆ 11ಕ್ಕೆ ಏರಿಕೆ?

ಶಿರೂರು ಗುಡ್ಡ ಕುಸಿತ ದುರಂತದಲ್ಲಿ ಈವರೆಗೆ 10 ಮಂದಿ ಕಣ್ಮರೆಯಾಗಿದ್ದಾಗಿ ಜಿಲ್ಲಾಡಳಿತ ತಿಳಿಸಿತ್ತು. ಕುಮಟಾ ತಾಲ್ಲೂಕಿನ ಗಂಗೆಕೊಳ್ಳದ ಲೋಕೇಶ ನಾಯ್ಕ ಎಂಬ ಯುವಕ ಗುಡ್ಡ ಕುಸಿತ ನಡೆದ ಸ್ಥಳದಲ್ಲೇ ಕಣ್ಮರೆಯಾಗಿದ್ದಾಗಿ ಆತನ ಕುಟುಂಬವು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದೆ. ದುರ್ಘಟನೆಯಲ್ಲಿ 11 ಮಂದಿ ಕಣ್ಮರೆಯಾಗಿದ್ದಾಗಿ ಮುಖ್ಯಮಂತ್ರಿ ಕೂಡ ಘೋಷಿಸಿದ್ದಾರೆ. ಈವರೆಗೆ ಏಳು ಮಂದಿಯ ಮೃತದೇಹ ಸಿಕ್ಕಿದೆ.

# ನಿಫಾ ಸೋಂಕಿತ ಬಾಲಕ ಸಾವು

**ಕೋಯಿಕ್ಕೋಡ್ (ಪಿಟಿಐ):** ಕೇರಳದ ಮಲಪ್ಪುರದಲ್ಲಿ ನಿಫಾ ವೈರಸ್ ಸೋಂಕಿಗೆ ಒಳಗಾಗಿದ್ದ 14 ವರ್ಷದ ಬಾಲಕ ಭಾನುವಾರ ಮೃತಪಟ್ಟಿದ್ದಾನೆ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಸಚಿವೆ ವೀಣಾ, 'ಪಾಂಡಿಕ್ಕಾಡ್‌ನ ಬಾಲಕನಿಗೆ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಬಾಲಕ ಹೃದಯ ಸ್ತಂಭನದಿಂದ ಭಾನುವಾರ ಮೃತಪಟ್ಟಿದ್ದಾನೆ. ಅಂತರ ರಾಷ್ಟ್ರೀಯ ಮಾರ್ಗದರ್ಶಿ ಸೂತ್ರಗಳ ಅನ್ವಯ ಬಾಲಕನ ಅಂತ್ಯಸಂಸ್ಕಾರ ನೆರವೇರಿಸಲಾಗುವುದು' ಎಂದು ತಿಳಿಸಿದರು.

'ಬಾಲಕನ ಜೊತೆಗೆ ಒಟ್ಟಾರೆ 246 ಮಂದಿ ಸಂಪರ್ಕಕ್ಕೆ ಬಂದಿದ್ದು, ಇವರಲ್ಲಿ 63 ಮಂದಿಯನ್ನು ಸೋಂಕು ತಗಲುವ ಅಪಾಯ ಹೆಚ್ಚು ಇರುವವರು ಎಂದು ಗುರುತಿಸಲಾಗಿದೆ. ಇವರೆಲ್ಲರನ್ನೂ ಪರೀಕ್ಷೆಗೆ ಒಳಪಡಿಸಲಾಗುವುದು. ಆದರೆ, ನಿಫಾ ವೈರಸ್ ರೀತಿಯ ಸೋಂಕು ಕಂಡುಬಂದವರನ್ನು ಮಾತ್ರವೇ ಮೊದಲಿಗೆ ಪರೀಕ್ಷಿಸಲಾಗುವುದು' ಎಂದು ಮಾಹಿತಿ ನೀಡಿದರು.

9ನೇ ಪುಟ ನೋಡಿ

# ಉಜ್ಜಯಿನಿ: ಅಂಗಡಿಗಳ ಮಾಲೀಕರ ಹೆಸರು ಪ್ರದರ್ಶಿಸಿ

**ಭೋಪಾಲ್ (ಪಿಟಿಐ):** ಮಧ್ಯಪ್ರದೇಶದ ಪ್ರಾಚೀನ ನಗರ ಉಜ್ಜಯಿನಿಯಲ್ಲಿನ ಅಂಗಡಿಗಳ ಮುಂದೆ ಮಾಲೀಕರ ಹೆಸರು, ಮೊಬೈಲ್ ಸಂಖ್ಯೆಯನ್ನು ಪ್ರದರ್ಶಿಸಬೇಕು ಎಂದು ಅಲ್ಲಿನ ಮಹಾನಗರ ಪಾಲಿಕೆ ಆದೇಶಿಸಿದೆ.

ಈ ಆದೇಶ ಉಲ್ಲಂಘಿಸುವವರು ಮೊದಲ ಬಾರಿಗೆ ₹2,000 ದಂಡ ಪಾವತಿಸಬೇಕು. ಎರಡನೇ ಬಾರಿಯೂ ಆದೇಶ ಉಲ್ಲಂಘಿಸಿದರೆ ₹5,000 ದಂಡ ಪಾವತಿಸಬೇಕಾಗುತ್ತದೆ ಎಂದು ಉಜ್ಜಯಿನಿಯ ಮೇಯರ್ ಮುಕೇಶ್ ತತ್ವಾಲ್ ತಿಳಿಸಿದ್ದಾರೆ.

ಈ ಆದೇಶವು ಸುರಕ್ಷತೆ ಮತ್ತು ಪಾರದರ್ಶಕತೆಯನ್ನು ಖಾತರಿಪಡಿಸುವ ಗುರಿಯನ್ನು ಹೊಂದಿದೆಯೇ ಹೊರತು, ಮುಸ್ಲಿಂ ಅಂಗಡಿಗಳನ್ನು ಗುರಿಯಾಗಿಸುವ ಉದ್ದೇಶ ಹೊಂದಿಲ್ಲ ಎಂದು ಮೇಯರ್ ಸ್ಪಷ್ಟಪಡಿಸಿದ್ದಾರೆ.

ಉಜ್ಜಯಿನಿಯು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರ ತವರೂರು. ಇಲ್ಲಿನ ಮಹಾಕಾಳ್ ದೇವಾಲಯ ಬಹಳ ಪ್ರಸಿದ್ಧಿ ಪಡೆದಿದೆ. ಸೋಮವಾರದಿಂದ ಆರಂಭವಾಗುವ ಶ್ರಾವಣ ಮಾಸದಲ್ಲಿ ವಿವಿಧೆಡೆಯಿಂದ ಅಪಾರ ಭಕ್ತರು ಇಲ್ಲಿಗೆ ಬರುತ್ತಾರೆ.

ಉತ್ತರ ಪ್ರದೇಶದಲ್ಲಿ ಕಾವಡ್ ಯಾತ್ರಾ ಮಾರ್ಗದಲ್ಲಿನ ಎಲ್ಲ ತಿನಿಸು ಅಂಗಡಿಗಳ ಮಾಲೀಕರ ಹೆಸರುಗಳನ್ನು ಪ್ರದರ್ಶಿಸುವಂತೆ ಇತ್ತೀಚೆಗೆ ನಿರ್ದೇಶಿಸಲಾಗಿತ್ತು. ಅದರ ಬೆನ್ನಲ್ಲೇ ಉಜ್ಜಯಿನಿ ಯಲ್ಲಿ ಇದೇ ರೀತಿಯ ಆದೇಶ ಹೊರಬಿದ್ದಿದೆ.

ಇದು ಮುಸ್ಲಿಂ ವ್ಯಾಪಾರಿಗಳನ್ನು ಗುರಿಯಾಗಿಸಿರುವ ಆದೇಶ ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಜಮ್ಮು: 4,000 ಯೋಧರು, 500 ಕಮಾಂಡೊ ನಿಯೋಜನೆ

# ಉಗ್ರರ ಹತ್ತಿಕ್ಕಲು ಹೆಚ್ಚುವರಿ ಪಡೆ

ಪ್ರಜಾವಾಣಿ ವಾರ್ತೆ

**ಶ್ರೀನಗರ:** ಜಮ್ಮುವಿನಲ್ಲಿ ಒಂದು ತಿಂಗಳಿನಿಂದ ಭಯೋತ್ಪಾದನಾ ಚಟುವಟಿಕೆಗಳು ತೀವ್ರಗೊಂಡಿರುವುದರಿಂದ, ಶಾಂತಿ ಸ್ಥಾಪಿಸುವುದಕ್ಕಾಗಿ ಹೆಚ್ಚುವರಿ ಸೇನಾ ತುಕಡಿಗಳನ್ನು ನಿಯೋಜಿಸಿ ಭದ್ರತೆಯನ್ನು ಬಲಪಡಿಸಲಾಗುತ್ತಿದೆ.

ಜಮ್ಮು ವಲಯದ ದಟ್ಟ ಕಾಡಿನಲ್ಲಿ ನೆಲೆಯೂರಿರುವ ಭಯೋತ್ಪಾದಕರನ್ನು ಹತ್ತಿಕ್ಕಲು ಹಾಗೂ ಅವರ ಕೃತ್ಯಗಳಿಗೆ ಕಡಿವಾಣ ಹಾಕಲು ಹೆಚ್ಚುವರಿಯಾಗಿ 3,500 ಯೋಧರು, 500 ಅರೆ ಸೇನಾಪಡೆ ಯೋಧರನ್ನು ನಿಯೋಜಿಸಲಾಗಿದೆ.

ಜಮ್ಮು ವಲಯದ ರಾಜೌರಿ, ಪೂಂಛ್, ರಿಯಾಸಿ, ಡೋಡಾ, ಕಠುವಾ ಜಿಲ್ಲೆಗಳಲ್ಲಿ ಕಳೆದ ಕೆಲವು ತಿಂಗಳಲ್ಲಿ ಸೇನೆ ಮತ್ತು ನಾಗರಿಕರನ್ನು ಗುರಿಯಾಗಿಸಿ ನಡೆದ ಭಯೋತ್ಪಾದಕ ಕೃತ್ಯಗಳು ನಾಗರಿಕರಲ್ಲಿ ಭೀತಿ ಮೂಡಿಸಿದೆ.

ಗುಪ್ತದಳದ ಮಾಹಿತಿ ಅನುಸಾರ, ನೆಲೆಯೂರಿರುವ ಭಯೋತ್ಪಾದಕರು ಹೆಚ್ಚು ತರಬೇತಿ ಪಡೆದವರಲ್ಲ, ಆದರೆ, ಅವರ ಬಳಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಹೀಗಾಗಿ, ಅವರು ಪ್ರತಿರೋಧ ಒಡ್ಡಲು ಸಾಧ್ಯವಾಗಿದೆ. ಅವರ ದಾಳಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ಸೇನೆ ಕೂಡಾ ಈಗ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಿ, ಭದ್ರತೆ ಬಿಗಿಗೊಳಿಸಿದೆ.

'ಜಮ್ಮುವಿನ ಕಾಡುಗಳಲ್ಲಿ ಅಡಗಿರುವ ಉಗ್ರರ ಚಟುವಟಿಕೆ ನಿರ್ಮೂಲನೆಗೆ 4,000 ಯೋಧರನ್ನು ನಿಯೋಜಿಸಿದ್ದು, ಗುಂಡುನಿರೋಧಕ ವಾಹನಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿದೆ. ಭಯೋತ್ಪಾದಕರು ಅರಣ್ಯದಲ್ಲಿ ಪ್ರಕೃತಿ ಸಹಜ ಗುಹೆಗಳನ್ನೇ ನೆಲೆ ಮಾಡಿಕೊಂಡಿದ್ದಾರೆ. ಉಗ್ರರು ನೆಲೆಯೂರಿರುವ ಈ ವಲಯಗಳಲ್ಲಿ ಕಾರ್ಯಾಚರಣೆಗೆ ಕ್ಷಿಪ್ರ ಪ್ರತಿರೋಧ ಪಡೆಯ (ಕ್ಯುಆರ್‌ಟಿ) 37 ತುಕಡಿಗಳು ತೆರಳಿವೆ' ಎಂದು ಮೂಲಗಳು ವಿವರಿಸಿವೆ.

'ಯೋಧರ ಹೊರತಾಗಿ 500 ಮಂದಿ ಉನ್ನತ ತರಬೇತಿ ಪಡೆದ ಕಮಾಂಡೊಗಳನ್ನೂ ವಿಶೇಷ ಕಾರ್ಯಾಚರಣೆಗಾಗಿ ನಿಯೋಜಿಸಲಾಗಿದೆ. ಈ ಕಮಾಂಡೊಗಳಿಗೆ ವಿಶೇಷ ಕೌಶಲವಿದೆ. ದಟ್ಟ ಕಾಡುಗಳಲ್ಲಿ ಸಂಕೀರ್ಣ ಕಾರ್ಯಾಚರಣೆಯನ್ನು ನಡೆಸಿರುವ ಅನುಭವವಿದೆ' ಎಂದು ಮೂಲಗಳು ವಿವರಿಸಿವೆ.

ಉಗ್ರರು ಗುಹೆಗಳನ್ನೇ ಅಡಗುದಾಣವಾಗಿ ಮಾಡಿಕೊಂಡಿದ್ದು, ಇದೇ ಸೇನೆಗೆ ಕಾರ್ಯಾಚರಣೆಯಲ್ಲಿ ಎದುರಾಗಿರುವ ದೊಡ್ಡ ಸವಾಲು ಎಂಬುದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.

'ಈ ಗುಹೆಗಳು ಪ್ರಕೃತಿ ಸಹಜವಾದ ರಕ್ಷಣೆ ಹೊಂದಿದ್ದು, ಎದ್ದು ಕಾಣುವುದಿಲ್ಲ. ಇಂತಹ ಅಡಗುತಾಣಗಳನ್ನು ಗುರುತಿಸಿ, ಉಗ್ರರ ನೆಲೆಯನ್ನು ನಿಷ್ಕ್ರಿಯಗೊಳಿಸುವುದೇ ಸವಾಲಾಗಿದೆ' ಎಂದರು.

ಗಡಿ ಭದ್ರತಾ ಪಡೆಯ ಪ್ರಧಾನ ನಿರ್ದೇಶಕ ನಿತಿನ್ ಅಗರವಾಲ್ ನೇತೃತ್ವದಲ್ಲಿ ಜಮ್ಮುವಿನಲ್ಲಿ ಭಾನುವಾರ ಭದ್ರತೆ ಕುರಿತು ಅಧಿಕಾರಿಗಳ ಸಭೆ ನಡೆಯಿತು –ಪಿಟಿಐ ಚಿತ್ರ

## ಚಿನಕುರುಳಿ

ಪ್ರಕಾಶ್ ಶೆಟ್ಟಿ

ರಾಜ್ಯದ ನಾಲ್ಕು ಯೋಜನೆ ವಿಳಂಬ: ರಾಜ್ಯದ ವೆಚ್ಚವೂ ₹649 ಕೋಟಿ ಏರಿಕೆ

# ₹2,432 ಕೋಟಿ ಹೆಚ್ಚುವರಿ ಹೊರೆ

• ಜಯಸಿಂಹ ಆರ್.

ಪ್ರಜಾವಾಣಿ ವಿಶೇಷ

**ಬೆಂಗಳೂರು:** ಕರ್ನಾಟಕದಲ್ಲಿ ನೈರುತ್ಯ ರೈಲ್ವೆ ಕೈಗೊಂಡಿರುವ ನಾಲ್ಕು ಯೋಜನೆಗಳು ವಿಳಂಬವಾದುದರಿಂದ ಯೋಜನಾ ವೆಚ್ಚದಲ್ಲಿ ₹2,432 ಕೋಟಿಯಷ್ಟು ಏರಿಕೆಯಾಗಿದೆ. ಇವುಗಳಲ್ಲಿ ಎರಡು ಯೋಜನೆಗಳ ವಿಳಂಬದಿಂದ ರಾಜ್ಯ ಸರ್ಕಾರದ ವೆಚ್ಚವೂ ₹649.52 ಕೋಟಿಯಷ್ಟು ಹೆಚ್ಚಾಗಿದೆ.

ರೈಲ್ವೆ ಇಲಾಖೆಯು ಪದೇ-ಪದೇ ಲೇನ್ ಅಲೈನ್‌ಮೆಂಟ್ ಬದಲಿಸಿದ್ದು ಮತ್ತು ಕೇಂದ್ರ ಪರಿಸರ ಸಚಿವಾಲಯದಿಂದ ಪರಿಸರ ಅನುಮತಿ ದೊರೆಯದೇ ಇದ್ದದ್ದೇ ವಿಳಂಬಕ್ಕೆ ಕಾರಣ. ಇದರಿಂದ ರೈಲ್ವೆ ಇಲಾಖೆಯ ವೆಚ್ಚವೂ ಏರಿಕೆಯಾಗಿದೆ ಎಂಬುದನ್ನು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ 'ಯೋಜನಾ ಆನ್‌ಲೈನ್ ಮೇಲ್ವಿಚಾರಣಾ ವ್ಯವಸ್ಥೆ'ಯ ಡ್ಯಾಶ್‌ಬೋರ್ಡ್ ಹೇಳುತ್ತದೆ.

ಬಾಗಲಕೋಟೆ-ಕುಡಚಿ, ಕಡೂರು-ಸಕಲೇಶಪುರ, ಹೊಸಪೇಟೆ-ವಾಸ್ಕೋಡ ಗಾಮಾ ಮತ್ತು ಮಾರಿಕುಪ್ಪಂ-ಕುಪ್ಪಂ ಮಾರ್ಗಗಳ ಕಾಮಗಾರಿ ಮೂಲ ವೆಚ್ಚ ಒಟ್ಟು ₹4,037.08 ಕೋಟಿಯಷ್ಟಿತ್ತು. ವಿಳಂಬದ ಕಾರಣದಿಂದ ಈ ವೆಚ್ಚ ಈಗಾಗಲೇ ₹6,463.94 ಕೋಟಿಗೆ ಏರಿಕೆಯಾಗಿದೆ. ಈ ಯೋಜನೆಗಳು ಮತ್ತಷ್ಟು ವಿಳಂಬವಾಗುವ ಸಾಧ್ಯತೆ ಇರುವುದರಿಂದ ವೆಚ್ಚ ಇನ್ನಷ್ಟು ಏರಿಕೆಯಾಗುವ ಸಂಭವವಿದೆ ಎಂದು ಡ್ಯಾಶ್‌ಬೋರ್ಡ್ ಹೇಳುತ್ತದೆ.

**ರಾಜ್ಯದ ವೆಚ್ಚವೂ ಏರಿಕೆ:** ಬಾಗಲಕೋಟೆ-ಕುಡಚಿ ನೂತನ ಮಾರ್ಗ ನಿರ್ಮಾಣ ಯೋಜನೆಗೆ 2010ರಲ್ಲೇ ಅನುಮತಿ ದೊರೆತಿತ್ತು. ಅಗತ್ಯವಿರುವ ಭೂಮಿಯನ್ನು ತಾನೇ ಒದಗಿಸಿಕೊಡಲು ಮತ್ತು ಶೇ 50ರಷ್ಟು ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರವು ನೈರುತ್ಯ ರೈಲ್ವೆ ಒಟ್ಟಿಗೆ ಒಪ್ಪಂದ ಮಾಡಿಕೊಂಡಿತ್ತು. ರಾಜ್ಯ ಸರ್ಕಾರವು ಈ ಯೋಜನೆಗೆ ಅಗತ್ಯವಿದ್ದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು, ರೈಲ್ವೆಗೆ ಹಸ್ತಾಂತರಿಸಿತ್ತು.

ಯೋಜನೆಯು 2016ರ ಮಾರ್ಚ್‌ನಲ್ಲೇ ಪೂರ್ಣಗೊಳ್ಳಬೇಕಿತ್ತು. ಆದರೆ, ನೈರುತ್ಯ ರೈಲ್ವೆಯು ಪದೇ-ಪದೇ ಲೇನ್ ಲೈನ್‌ಮೆಂಟ್ ಬದಲಿಸಿ, ಹೆಚ್ಚುವರಿ ಭೂಮಿಗೆ ಬೇಡಿಕೆ ಸಲ್ಲಿಸಿದೆ. ಪರಿಣಾಮವಾಗಿ ಯೋಜನೆ ವಿಳಂಬವಾಗಿದೆ. ಯೋಜನೆ ಪೂರ್ಣಗೊಂಡಿರುವುದು ಶೇಕಡ 33ರಷ್ಟು ಮಾತ್ರ. ಯೋಜನೆ ಆರಂಭವಾದಾಗ ಕರ್ನಾಟಕವು ₹493.15 ಕೋಟಿಯಷ್ಟನ್ನು ಒದಗಿಸಬೇಕಿತ್ತು. ಆದರೆ ಈಗ ₹824.65 ಕೋಟಿ ಒದಗಿಸಬೇಕಿದೆ. ಈ ಯೋಜನೆಯಲ್ಲಿ ರಾಜ್ಯದ ವೆಚ್ಚ ₹331.5 ಕೋಟಿಯಷ್ಟು ಏರಿಕೆಯಾಗಿದೆ.

ಕಡೂರು-ಚಿಕ್ಕಮಗಳೂರು-ಸಕಲೇಶಪುರ ನೂತನ ಮಾರ್ಗ ನಿರ್ಮಾಣ ಯೋಜನೆಯ ಮೂಲ ವೆಚ್ಚ ₹644.78 ಕೋಟಿಯಷ್ಟು ಇತ್ತು. ಇದರಲ್ಲಿ ರಾಜ್ಯವು ₹322.9 ಕೋಟಿ ಭರಿಸಬೇಕಿತ್ತು. ಆದರೆ ಪರಿಸರ ಅನುಮತಿ ದೊರೆಯದೇ ಇದ್ದುದು ಮತ್ತು ಯೋಜನೆ ಆರ್ಥಿಕವಾಗಿ ಕಾರ್ಯಸಾಧುವಲ್ಲ ಎಂಬ ಕಾರಣಕ್ಕೆ ಚಿಕ್ಕಮಗಳೂರು-ಸಕಲೇಶಪುರ ಮಾರ್ಗ ರದ್ದಾಯಿತು. ಬದಲಿಗೆ ಚಿಕ್ಕಮಗಳೂರು-ಬೇಲೂರು-ಹಾಸನ ಮಾರ್ಗವನ್ನು ಯೋಜನೆಗೆ ಹೊಸದಾಗಿ ಸೇರಿಸಲಾಯಿತು. ಇದರಿಂದ ಕಾಮಗಾರಿ ವಿಳಂಬವಾಗಿದೆ. ಪರಿಣಾಮವಾಗಿ ಯೋಜನೆಯ ಒಟ್ಟು ವೆಚ್ಚ ₹1,282 ಕೋಟಿಗೆ ಏರಿಕೆಯಾಗಿದೆ. ರಾಜ್ಯ ಸರ್ಕಾರದ ವೆಚ್ಚವು ₹641 ಕೋಟಿಗೆ ಏರಿಕೆಯಾಗಿ, ₹318 ಕೋಟಿ ಹೆಚ್ಚುವರಿ ಹೊರೆ ಬಿದ್ದಿದೆ.

**ವೆಚ್ಚ ಏರಿಕೆ**

| ಯೋಜನೆ | ವಿಳಂಬ | ಮೂಲ ವೆಚ್ಚ | ಪರಿಷ್ಕೃತ ವೆಚ್ಚ |
|---|---|---|---|
| ಬಾಗಲಕೋಟೆ-ಕುಡುಚಿ | 129 ತಿಂಗಳು | ₹986.3 ಕೋಟಿ | ₹1,649.31 ಕೋಟಿ |
| ಹೊಸಪೇಟೆ-ವಾಸ್ಕೋಡಗಾಮ | 45 ತಿಂಗಳು | ₹2,127 ಕೋಟಿ | ₹3,692 ಕೋಟಿ |
| ಕಡೂರು-ಹಾಸನ ಮಾರ್ಗ | 105 ತಿಂಗಳು | ₹644.78 ಕೋಟಿ | ₹825.31 ಕೋಟಿ |
| ಮಾರಿಕುಪ್ಪಂ-ಕುಪ್ಪಂ ಮಾರ್ಗ | 123 ತಿಂಗಳು | ₹279.54 ಕೋಟಿ | ₹296.72 ಕೋಟಿ |

ಬೆಂಗಳೂರಿನ ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕ್ವೀನ್ಸ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ಸ್ ಆದ ಕೋಲಾರ ಕ್ವೀನ್ಸ್ ತಂಡದ ನಾಯಕಿ ಭವ್ಯಾ ಗೌಡ ಮತ್ತು ಉಪ ನಾಯಕಿ ಧನ್ಯಾ ರಾಮ್‌ಕುಮಾರ್ ಅವರು ಟ್ರೋಫಿ ಹಿಡಿದು ಸಹ ಆಟಗಾರ್ತಿಯರೊಂದಿಗೆ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ.

'ಕ್ವೀನ್ಸ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಟೂರ್ನಿ

# 'ಕೋಲಾರ ಕ್ವೀನ್ಸ್'ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ವಿಜೇತ ತಂಡಕ್ಕೆ ₹6 ಲಕ್ಷ ಬಹುಮಾನ– ರನ್ನರ್ ಅಪ್ ತಂಡಕ್ಕೆ ₹3 ಲಕ್ಷ ಬಹುಮಾನ
- ಟೂರ್ನಿಯಲ್ಲಿ 10 ತಂಡಗಳು ಸೆಣಸಾಟ
- ಕೋಲಾರ ತಂಡದ ಹೇಮಾ ಟೂರ್ನಿಯ ಶ್ರೇಷ್ಠ ಆಟಗಾರ್ತಿ

**ಬೆಂಗಳೂರು:** ಸಾಂಘಿಕ ಆಟ ಪ್ರದರ್ಶಿಸಿದ ಕೋಲಾರ ಕ್ವೀನ್ಸ್ ತಂಡವು ಭಾನುವಾರ 'ಕ್ವೀನ್ಸ್ ಪ್ರೀಮಿಯರ್ ಲೀಗ್' ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬೆಂಗಳೂರು ಕ್ವೀನ್ಸ್ ತಂಡವನ್ನು ಮಣಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಕ್ರಿಯೇಟಿವ್ ಫ್ರೆಂಡ್ಸ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಕೋಲಾರ ತಂಡವು 5 ಓವರ್‌ಗಳಲ್ಲಿ ಒಂದು ವಿಕೆಟ್‌ಗೆ 88 ರನ್ ಗಳಿಸಿತ್ತು. ಈ ಮೊತ್ತಕ್ಕೆ ಉತ್ತರವಾಗಿ ಬೆಂಗಳೂರು ತಂಡವು ಐದು ಓವರ್‌ಗಳಲ್ಲಿ ಮೂರು ವಿಕೆಟ್‌ಗಳಿಗೆ 53 ರನ್‌ಗಳಿಸಿ ಹೋರಾಟವನ್ನು ಮುಗಿಸಿತು.

ಕೋಲಾರ ಕ್ವೀನ್ಸ್ ತಂಡವು ಆಕರ್ಷಕ ಟ್ರೋಫಿಯೊಂದಿಗೆ ₹6 ಲಕ್ಷ ಬಹುಮಾನವನ್ನು ತನ್ನದಾಗಿಸಿಕೊಂಡಿತು. ರನ್ನರ್ ಅಪ್ ಬೆಂಗಳೂರು ಕ್ವೀನ್ಸ್ ತಂಡವು ₹3 ಲಕ್ಷ ಬಹುಮಾನ ಪಡೆಯಿತು.

ಟೂರ್ನಿಯಲ್ಲಿ ಕಿರುತೆರೆ ಹಾಗೂ ಹಿರಿತೆರೆ ಕಲಾವಿದೆಯರ ಜೊತೆಯಲ್ಲಿ ನಿರೂಪಕಿಯರು, ರೂಪದರ್ಶಿಯರು ಭಾಗವಹಿಸಿದ್ದರು. ಟೂರ್ನಿಯಲ್ಲಿ ಒಟ್ಟು ಹತ್ತು ತಂಡಗಳು ಸೆಣಸಾಡಿದವು.

ಕೋಲಾರ ಕ್ವೀನ್ಸ್ ತಂಡದ ಹೇಮಾ ಟೂರ್ನಿಯ ಶ್ರೇಷ್ಠ ಆಟಗಾರ್ತಿ, ಬೆಂಗಳೂರು ಕ್ವೀನ್ಸ್ ತಂಡದ ಅನುಪಮಾ ಗೌಡ ಹೆಚ್ಚು ವಿಕೆಟ್ ಪಡೆದ ಬೌಲರ್ ಹಾಗೂ ಬೆಳಗಾವಿ ಕ್ವೀನ್ಸ್ ತಂಡದ ಕವಿತಾ ಗೌಡ ಅವರು ಉತ್ತಮ ಬ್ಯಾಟರ್ ಪ್ರಶಸ್ತಿ ಪಡೆದರು.

'ಈ ಟೂರ್ನಿಯನ್ನು ಮತ್ತಷ್ಟು ದೊಡ್ಡ-ಮಟ್ಟದಲ್ಲಿ ಮಾಡಲು ಬೇರೆ ಬೇರೆ ರಾಜ್ಯಗಳ ತಂಡಗಳನ್ನೂ ಸೇರ್ಪಡೆ ಮಾಡಿಕೊಳ್ಳುತ್ತೇವೆ. ಐಪಿಎಲ್ ಮಟ್ಟಕ್ಕೆ ಬೆಳೆಸುವುದು ನಮ್ಮ ಗುರಿ' ಎಂದು ಸಂಘಟಕರಾದ ಮಹೇಶ್ ಗೌಡ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಪ್ರಮೋದ್ ಶೆಟ್ಟಿ, ರೂಪಿಕಾ, ಭವ್ಯಾ ಗೌಡ, ಪ್ರೇಮ್ ಮಾಲೂರ್, ಸ್ವಸ್ತಿಕ್ ಆರ್ಯಾ, ಚೇತನ್ ಪಾರೀಕ್, ಸಂತೋಷ್ ಬಿಲ್ಲವ, ಸಚಿನ್ ಸಚದೇವ್ ಹಾಜರಿದ್ದರು.

'ಪ್ರಜಾವಾಣಿ' ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕಾ ಬಳಗವು ಈ ಟೂರ್ನಿಯ ಮಾಧ್ಯಮ ಸಹಭಾಗಿತ್ವ ವಹಿಸಿತ್ತು.

# ನಗರದಲ್ಲಿ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹಲವೆಡೆ ಭಾನುವಾರ ಮಳೆಯಾಯಿತು. ಹಲವೆಡೆ ಚರಂಡಿ ವ್ಯವಸ್ಥೆ ಸರಿ ಇಲ್ಲದೇ ನೀರು ರಸ್ತೆಯಲ್ಲೇ ಹರಿಯಿತು.

ದೊಡ್ಡನೆಕುಂದಿ, ಕೆ.ಆರ್.ಪುರ, ಎಂ.ಜಿ. ರಸ್ತೆ, ರಾಜಾಜಿನಗರ, ಸುಬ್ರಹ್ಮಣ್ಯನಗರ, ಯಶವಂತಪುರ, ಪೀಣ್ಯ, ಹೆಬ್ಬಾಳ, ಕೆಂಗೇರಿ, ಪದ್ಮನಾಭನಗರ, ನಾಯಂಡಹಳ್ಳಿ, ಮೆಜೆಸ್ಟಿಕ್, ಯಲಹಂಕ, ಜಯನಗರ, ಶಿವಾಜಿನಗರ, ಹಂಪಿನಗರ, ಕೋರಮಂಗಲ, ಜ್ಞಾನಭಾರತಿ, ವಿಶ್ವೇಶ್ವರಪುರ, ವಿಜಯನಗರ, ಬನಶಂಕರಿ ಸಹಿತ ನಗರದ ವಿವಿಧೆಡೆ ಮಧ್ಯಾಹ್ನದ ವೇಳೆಗೆ ಮಳೆ ಸುರಿಯಿತು.

ಮಾರತ್ತಹಳ್ಳಿ, ಹೆಬ್ಬಾಳ ಸರ್ಕಲ್, ಕ್ವೀನ್ಸ್ ರಸ್ತೆ, ವೀರಣ್ಣ ಪಾಳ್ಯ, ಪ್ಯಾಲೆಸ್ ಕ್ರಾಸ್ ಇನ್ನಿತರ ಪ್ರದೇಶಗಳಲ್ಲಿ ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕು ಉಂಟಾಯಿತು.

ನಗರದ ಕ್ವೀನ್ಸ್ ರಸ್ತೆಯಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ತೊಡಕುಂಟಾಯಿತು

# ಬಿಬಿಎಂಪಿ: 39 ಹೆಲ್ತ್ ಸೂಪರ್‌ವೈಸರ್ ಹುದ್ದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ 39 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಪಾಲಿಕೆ ವ್ಯಾಪ್ತಿಯ 75 ಉಪ ವಿಭಾಗಗಳಲ್ಲಿ ಸದ್ಯ 36 ಹೆಲ್ತ್ ಸೂಪರ್‌ವೈಸರ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವಿಭಾಗಕ್ಕೆ ತಲಾ ಒಬ್ಬರು ಹೆಲ್ತ್ ಸೂಪರ್ ವೈಸರ್ ನೇಮಿಸಲು ಇನ್ನೂ 39 ಹುದ್ದೆಗಳನ್ನು ಸೃಜಿಸುವಂತೆ ಬಿಬಿಎಂಪಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಅದರಂತೆ 39 ಹಿರಿಯ ಆರೋಗ್ಯ ನಿರೀಕ್ಷಕರ (ಗ್ರೂಪ್ ಸಿ) ಹುದ್ದೆಯನ್ನು ಹೆಲ್ತ್ ಸೂಪರ್‌ವೈಸರ್ (ಗ್ರೂಪ್ ಬಿ) ಹುದ್ದೆಗೆ ಉನ್ನತೀಕರಿಸಿ ಆದೇಶ ಹೊರಡಿಸಲಾಗಿದೆ.

ಉನ್ನತೀಕರಿಸಲಾದ 39 ಹುದ್ದೆಗಳಿಗೆ ಉಂಟಾಗುವ ವೆಚ್ಚವನ್ನು ಬಿಬಿಎಂಪಿ ತನ್ನ ಸ್ವಂತ ನಿಧಿಯಿಂದ ಭರಿಸಬೇಕು. ಪಾಲಿಕೆಯ ಆರೋಗ್ಯ ವಿಭಾಗದಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆಯಲ್ಲಿ ಬದಲಾವಣೆ ಮಾಡಬಾರದು ಎಂದು ನಗರಾಭಿವೃದ್ಧಿ ಇಲಾಖೆ ಷರತ್ತು ವಿಧಿಸಿದೆ.

ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ, ಸಾಂಕ್ರಾಮಿಕ ರೋಗ ನಿಯಂತ್ರಣ ಚಟುವಟಿಕೆ, ಘನತ್ಯಾಜ್ಯ ನಿರ್ವಹಣೆಯ ಮೇಲುಸ್ತುವಾರಿ ಸೇರಿ ವಿವಿಧ ಜವಾಬ್ದಾರಿಗಳನ್ನು ಹೆಲ್ತ್ ಸೂಪರ್ ವೈಸರ್‌ಗಳು ನಿರ್ವಹಿಸಬೇಕು ಎಂದು ಹೇಳಲಾಗಿದೆ.

## ನಗರದಲ್ಲಿ ಇಂದು

**ನೂತನ ಕಟ್ಟಡದ ಉದ್ಘಾಟನಾ ಸಮಾರಂಭ:** ಆಯೋಜನೆ: ಅಕ್ಷಯ ಪಾತ್ರೆ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಲಕ್ಷ್ಮೀಪುರ, ಬೆಳಿಗ್ಗೆ 10.30

**'ದಲಿತ ಚಳವಳಿ ಮತ್ತು ಸಮಕಾಲೀನ ಕರ್ನಾಟಕ' ವಿಚಾರಸಂಕಿರಣ: ಚಾಲನೆ:** ಹಂಸಲೇಖ, ಅಧ್ಯಕ್ಷತೆ:ಮಾವಳ್ಳಿ ಶಂಕರ್, ಅತಿಥಿಗಳು: ದಿನೇಶ್ ಅಮೀನ್‌ಮಟ್ಟು, ಗೊಲ್ಲಹಳ್ಳಿ ಶಿವಪ್ರಸಾದ್, ಪಲ್ಲವಿ, ದಲಿತ ಚಳವಳಿಯ ಅನುಭವ ಹಂಚಿಕೊಳ್ಳುವವರು: ರಾಮದೇವ ರಾಕೆ, ವಿ. ನಾಗರಾಜ್, ಎನ್. ಮುನಿಸ್ವಾಮಿ, ಕುಂದೂರು ತಿಮ್ಮಯ್ಯ, ಚಂದ್ರಶೇಖರಯ್ಯ, ಆಯೋಜನೆ: ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ), ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

**ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಸುವರ್ಣ ಮಹೋತ್ಸವ:** ಅತಿಥಿಗಳು: ಜಯಕರ ಎಸ್.ಎಂ., ಬಿ.ಕೆ. ರವಿ, ಶೇಖ್ ಲತೀಫ್, ಶ್ರೀನಿವಾಸ್ ಚೌಡಪ್ಪ, ಸುನಿತಾ ಎಂ., ಬಿ. ಶೈಲಶ್ರೀ, ವಸುಂಧರಾ ಪ್ರಿಯದರ್ಶಿನಿ, ಪ್ರಶಾಂತ್ ವಿ., ಸ್ಥಳ: ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11

**ಫ್ಯಾಮಿಲಿ ಪ್ಲಾನಿಂಗ್ ಅಸೋಸಿಯೇಷನ್ ಆಫ್ ಇಂಡಿಯಾದ ಸಂಸ್ಥಾಪಕರ ದಿನಾಚರಣೆ:** ಅತಿಥಿಗಳು: ಜಿ. ಶೋಭಾ, ಶಾಂತಿ ಆರ್. ಬಾಳಿಗ, ಕೆ. ಪಾರ್ಥಸಾರಥಿ ನಾಯ್ಡು, ಅಧ್ಯಕ್ಷತೆ: ಪದ್ಮಿನಿ ಪ್ರಸಾದ್, ಆಯೋಜನೆ: ಎಫ್‌ಪಿಎ, ಸ್ಥಳ: ಹೋಟೆಲ್ ಆಶ್ರಯ ಇಂಟರ್ ನ್ಯಾಷನಲ್, ಶಾಂತಲಾ ಹಾಲ್, ಇನ್‌ಫೆಂಟ್ರಿ ರಸ್ತೆ, ಮಧ್ಯಾಹ್ನ 3

**41ನೇ ಅಂತರ ವಿಭಾಗ ನಾಟಕ ಸ್ಪರ್ಧೆಯ ಬಹುಮಾನ ವಿತರಣೆ:** ರಾಜೇಂದ್ರ ಐವಳೆ, ಅಧ್ಯಕ್ಷತೆ: ಸುಂದರರಾಜ್ ಕೆ., ಅತಿಥಿ: ಟಿ.ಎಸ್. ನಾಗಾಭರಣ, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್ ಜಾಲಹಳ್ಳಿ, ಸಂಜೆ 5.30

**ಪದಾಧಿಕಾರಿಗಳ ಪದಗ್ರಹಣ ಸಮಾರಂಭ:** ಉಮಾ ಭಾರಧ್ವಾಜ್, ಉಪಸ್ಥಿತಿ: ಎನ್.ಎಸ್. ಮಹಾದೇವ ಪ್ರಸಾದ್, ಶ್ರೀನಾಥ್, ಉಷಾ ಭಟ್, ಆಯೋಜನೆ: ರೋಟರಿ ಕ್ಲಬ್ ಭುವನೇಶ್ವರಿ ನಗರ, ಸ್ಥಳ: ಶ್ರೀ ಕನ್ವೆನ್ಷನ್ ಹಾಲ್, ದಾಸರಹಳ್ಳಿ ಮುಖ್ಯರಸ್ತೆ, ಭುವನೇಶ್ವರಿನಗರ, ಸಂಜೆ 6

**ಸಮಾಜದ 225ನೇ ತಿಂಗಳ ಸಮಾವೇಶ:** ಅತಿಥಿ: ಶಶಿಧರ್ ಕೋಟೆ, 'ಸಿದ್ಧಯ್ಯ ಪುರಾಣಿಕ ವಚನಾಮೃತ' ಉಪನ್ಯಾಸ: ಸ್ವಾಮಿ ಆದಿತ್ಯಾನಂದಜೀ, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, ಸದಾಶಿವನಗರ ಕ್ಲಬ್, ಸದಾಶಿವನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

## ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

### 'ರಸ್ತೆ ದುರಸ್ತಿಗೊಳಿಸಿ'

ಬಿಬಿಎಂಪಿ ವ್ಯಾಪ್ತಿಯ ಅಬ್ಬಿಗೆರೆ 'ಎಫ್' ಬಸ್ ತಂಗುದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣವಾಗಿ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಆದರೆ, ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವ ಕಾರಣ ಸಂಚಾರ ದಟ್ಟಣೆಯ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ಸರ್ಕಾರ ಮೂಲಸೌಕರ್ಯ ಅಭಿವೃದ್ಧಿಗೆ ಸಾರ್ವಜನಿಕರಿಂದ ತೆರಿಗೆ ಭರಿಸಿಕೊಳ್ಳುತ್ತದೆ. ಆದರೆ, ಅಭಿವೃದ್ಧಿ ಕೆಲಸಗಳನ್ನು ಮಾತ್ರ ಮಾಡುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

**ಸುರೇಶ್**, ಅಬ್ಬಿಗೆರೆ

### 'ಉಲ್ಲಾಳು: ರಸ್ತೆಗೆ ಡಾಂಬರು ಹಾಕಿ'

ಉಲ್ಲಾಳು ಮುಖ್ಯರಸ್ತೆಯ ಜ್ಞಾನಭಾರತಿ ಎರಡನೇ ಬ್ಲಾಕ್‌ನ ನಗೆಮನೆ ಎದುರಿನ ರಸ್ತೆಗೆ ಹಾಕಿದ್ದ ಡಾಂಬರು ಸಂಪೂರ್ಣವಾಗಿ ಕಿತ್ತುಹೋಗಿದ್ದು, ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಮಳೆಗಾಲದಲ್ಲಿ ರಸ್ತೆಯ ಗುಂಡಿಗಳಲ್ಲಿ ನೀರು ನಿಲ್ಲುತ್ತದೆ. ಬೇಸಿಗೆಯಲ್ಲಿ ವಾಹನ ಸವಾರರಿಗೆ ದೂಳಿನ ಮಜ್ಜನವಾಗುತ್ತಿದೆ. ಕೂಡಲೇ ಬಿಬಿಎಂಪಿ ಇಲ್ಲಿನ ರಸ್ತೆಗೆ ಡಾಂಬರೀಕರಣ ಮಾಡಬೇಕು.

**ಗೌಡಯ್ಯ**, ಜ್ಞಾನಭಾರತಿ

### ಕಸ ತೆರವು

ಅರಕೆರೆ ಗೇಟಿನಿಂದ ಮೈಕೊ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಯ ಓಂಕಾರ ಬಡಾವಣೆಯ ಹತ್ತಿರದ ಪಾದಚಾರಿ ಮಾರ್ಗದಲ್ಲಿ ಹಾಕಿದ್ದ ಕಸವನ್ನು ತೆರವುಗೊಳಿಸಲಾಗಿದೆ. 'ಪ್ರಜಾವಾಣಿ'ಯ ಕುಂದು ಕೊರತೆ ವಿಭಾಗದಲ್ಲಿ ಜುಲೈ 15ರಂದು 'ಕಸದ ರಾಶಿ ತೆರವುಗೊಳಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ವರದಿ ಪ್ರಕಟವಾಗಿತ್ತು. ಇದರಿಂದ ಎಚ್ಚೆತ್ತ ಬಿಬಿಎಂಪಿ ಸಿಬ್ಬಂದಿ ಕಸವನ್ನು ತೆರವು ಗೊಳಿಸಿದ್ದಾರೆ.

ಪೀಣ್ಯ ದಾಸರಹಳ್ಳಿ ಸಮೀಪದ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಶನ್ ಕಚೇರಿಯಲ್ಲಿ ಭಾನುವಾರ ಗುರು ಪೂರ್ಣಿಮೆ ಅಂಗವಾಗಿ ಗುರು ರಾಘವೇಂದ್ರ ಸ್ವಾಮಿಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು. ಫೌಂಡೇಶನ್ ಅಧ್ಯಕ್ಷೆ ಲತಾ ಕುಂದರಗಿ, ಗೌರವ ಅಧ್ಯಕ್ಷ ಗುರುನಾಥ್, ಸಲಹಾ ಸಮಿತಿ ಸದಸ್ಯರಾದ ಸುರೇಶ್ ಬಿರಾದಾರ್, ಶರಣಬಸವ ಭಗವತಿ ಸಾಹಿತಿ ವೈ.ಬಿ.ಎಚ್. ಜಯದೇವ್, ಕನ್ನಡ ಸೇನೆ ಖಜಾಂಚಿ ರಾಜೇಂದ್ರ ಕೊಣ್ಣೂರ, ಚೈತ್ರಾ, ಮಂಜು ಭಾಷಿಣಿ, ಗೀತಾ, ಚಿತ್ರನಟ ವಿಷ್ಣು ಭಾಗವಹಿಸಿದ್ದರು.


**ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No: ಕಹಾಮ/ಅಭಿ/CFPR-Slat Conveyor/1894/2024–25 ದಿನಾಂಕ: 20–07–2024

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಹಕಾರ ಹಾಲು ಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

| ಕ್ರಮ ಸಂಖ್ಯೆ | ಕೆಲಸದ ಹೆಸರು | ಸಂಖ್ಯೆ | ಇ.ಎಂ.ಡಿ. ರೂ. | ಮುಕ್ತಾಯದ ಅವಧಿ |
|---|---|---|---|---|
| 1 | ರಾಜಾನುಕುಂಟೆಯ ಪಶು ಆಹಾರ ಘಟಕಕ್ಕೆ Slat Conveyor ವಿನ್ಯಾಸ, ತಯಾರಿಕೆ, ಸರಬರಾಜು, ಚಾಲನೆಗೊಳಿಸುವ ಹಾಗೂ ಸಂಬಂಧಿಸಿದ ಮತ್ತಿತರೆ ಕೆಲಸಗಳು. | 1 ಜಾಬ್ | 60,000/– | 3 ತಿಂಗಳು |

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 22–07–2024 ರಿಂದ 29–7–2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29–7–2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 30–7–2024 ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

**ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು–560 029. ಫೋನ್: 25536625, 25536789

IFT No: ಕಹಾಮ/ಅಭಿ/Mother Diary-FFS/1886/2024–25 ದಿನಾಂಕ: 20–07–2024

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ (2ನೇ ಕರೆ)**

ಕರ್ನಾಟಕ ಸಹಕಾರ ಹಾಲು ಮಂಡಳವು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

| ಕ್ರಮ ಸಂಖ್ಯೆ | ಕೆಲಸದ ಹೆಸರು | ಸಂಖ್ಯೆ | ಇ.ಎಂ.ಡಿ. ರೂ. | ಮುಕ್ತಾಯದ ಅವಧಿ |
|---|---|---|---|---|
| 1 | ಮದರ್ ಡೇರಿ ಘಟಕದಲ್ಲಿ ಟರ್ನ್ ಕೀ ಆಧಾರದಲ್ಲಿ mechanical type automatic high speed forms fill seal twin head Pouch Packing machines (2 no's) with accessories and discharge trays and supporting stands ಯಂತ್ರೋಪಕರಣಗಳ ವಿನ್ಯಾಸ, ತಯಾರಿಕೆ, ಸರಬರಾಜು, ಚಾಲನೆಗೊಳಿಸುವ ಕೆಲಸಗಳು (2ನೇ ಕರೆ). | 1 ಜಾಬ್ | 64,000/– | 3 ತಿಂಗಳು |

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 22–07–2024 ರಿಂದ 30–7–2024 ರ ಸಾಯಂಕಾಲ 4:00 ಗಂಟೆಯವರೆಗೆ. 2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–7–2024 ಸಾಯಂಕಾಲ 4:00 ಗಂಟೆಯವರೆಗೆ. 3) ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 31–7–2024 ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

**ನೈಋುತ್ಯ ರೈಲ್ವೆ**

ಇ–ಟೆಂಡರು ಸೂಚನೆ ಸಂ.: 31/2024
ದಿನಾಂಕ: 16.07.2024

ಕಾಮಗಾರಿಯ ವಿವರ

ಬೆಂಗಳೂರು ಸಿಟಿ ಕೋಚಿಂಗ್ ಡಿಪೋನಲ್ಲಿ ಪಿಟ್ ಲೈನ್‌ಗಳಲ್ಲಿ ಹೆಚ್ಚಿನ ಒತ್ತಡವುಳ್ಳ ಜೆಟ್ ಕೋಚ್ ಕ್ಲೀನಿಂಗ್ ಪ್ಲಾಂಟ್‌ನ ಪೂರೈಕೆ, ಸ್ಥಾಪನೆ & ಕಾರ್ಯಾರಂಭಗೊಳಿಸುವಿಕೆ.
(ಟೆಂಡರು ಉಲ್ಲೇಖ ಸಂ. L8245966 ರ ತಿದ್ದುಪಡಿ, ಪರಿಮಾಣ: 02 ಸೆಟ್‌ಗಳು)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24.07.2024, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ ಬೆಂಗಳೂರು
PUB/283/AAMO/PRB/SWR/2024-25
South Western Railway - SWR | SWRRLY | SWRRLY

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

**ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ**

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು–560 029
ದೂರವಾಣಿ : 25536625, 25536789

IFT No.: ಕಹಾಮ/ಅಭಿ/CFPH-Solar Water heater/1892/2024–25 ದಿನಾಂಕ: 20–07–2024

**ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸಹಕಾರ ಹಾಲು ಮಂಡಳ ವತಿಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ ಹಾಗೂ ಚಾಲನೆಗೊಳಿಸುವ ಕೆಲಸಗಳಿಗಾಗಿ KPP portal ಮುಖೇನ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

| ಕ್ರ. ಸಂ. | ಕೆಲಸದ ಹೆಸರು | ಪರಿಮಾಣ | ಇ.ಎಂ.ಡಿ. ರೂ.ಗಳಲ್ಲಿ | ಮುಕ್ತಾಯದ ಅವಧಿ |
|---|---|---|---|---|
| 1 | ಹಾಸನದ ಪಶು ಆಹಾರ ಘಟಕಕ್ಕೆ 12000 LPD ಸೋಲಾರ್ ವಾಟರ್ ಹೀಟರ್, ಪೈಪಿಂಗ್‌ನ ವಿನ್ಯಾಸ, ತಯಾರಿಕೆ, ಸರಬರಾಜು, ಅನುಷ್ಠಾನ, ಚಾಲನೆಗೊಳಿಸುವ ಮತ್ತು ಮತ್ತಿತರೆ ಕೆಲಸಗಳು. | 1 ಜಾಬ್ | 60,000/– | 2 ತಿಂಗಳು |

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 22–07–2024 ರಿಂದ 29–7–2024 ರ ಸಾಯಂಕಾಲ 4:00 ಗಂಟೆಯವರೆಗೆ. 2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29–7–2024 ಸಾಯಂಕಾಲ 4:00 ಗಂಟೆಯವರೆಗೆ. 3. ಟೆಂಡರುಗಳನ್ನು (Cover - 1)ತೆರೆಯುವ ದಿನಾಂಕ: 30–7–2024 ಸಾಯಂಕಾಲ 4:30 ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಅಭಿಯಂತರ–2)

**ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ**

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂ:ಅಇಂವಿ/ಪ್ರ(ನಿ)/ಬೆಂ.ಮ.ಕ್ಷೇ.ವ.(ಉ)/ಕಾನಿಇಂ(ತ)/ಸಇಂ/F-98(5), 98(6), 98(7) & 82(10)/ 23-24/2646-50 ದಿನಾಂಕ: 20.07.2024

**ಟೆಂಡರ್ ಪ್ರಕಟಣೆ**
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯ ಅನ್ವಯ ಅಸ್ತಿತ್ವದಲ್ಲಿರುವ 220ಕೆವಿ ಮತ್ತು 66ಕೆವಿ ಮಾರ್ಗಗಳಿಗೆ ಇನ್‌ಟರ್‌ಮೀಡಿಯಟ್ ಗೋಪುರಗಳನ್ನು ಅಳವಡಿಸಿ ಹಾಗೂ ಗೋಪುರಗಳನ್ನು ಸ್ಥಳಾಂತರಿಸಿ ಲಂಬಾಂತರವನ್ನು ಹೆಚ್ಚಿಸುವ ಕೆಲಸಗಳಿಗಾಗಿ ಟಿ.ಎಲ್.ಎಂ ಉಪ ವಿಭಾಗ, ವ್ಯಾಪ್ತಿ ಅಡಿಯಲ್ಲಿ ಬರುವ ಹಲವು ಅಪಾಯಕಾರಿ ಸ್ಥಳಗಳಿಗೆ ವಿವಿಧ ಪ್ಯಾಕೇಜ್‌ಗಳ ಅಡಿ ಬಿಡ್‌ಗಳನ್ನು ಆಹ್ವಾನಿಸಿದೆ.

ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು ದಿನಾಂಕ 22.07.2024 ರಂದು ಅಥವಾ ಆನಂತರ ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ "E Procurement KPTCL" ಹೈಪರ್‌ಲಿಂಕ್‌ನಲ್ಲಿ ಅಥವಾ https://kppp.karnataka.gov.in ಇಲ್ಲಿಗೆ ಲಾಗ್‌ಇನ್ ಆಗಿ ಪಡೆದುಕೊಳ್ಳಬಹುದು.

ಸಹಿ/-, ಅಧೀಕ್ಷಕ ಇಂಜಿನಿಯರ್, ವಿದ್ಯುತ್, ಪ್ರಸರಣ (ನಿರ್ವಹಣೆ), ಬೆಂ.ಮ.ಕ್ಷೇ.ವ., ಉತ್ತರ ವೃತ್ತ, ನೆಲಮಹಡಿ, ಕವಿಪ್ರನಿನಿ ಕಛೇರಿ ಸಂಕೀರ್ಣ, ಕವಿಪ್ರನಿನಿ, ಆನಂದರಾವ್ ವೃತ್ತ, ಬೆಂಗಳೂರು-560 009.

ಗರುಡಾಚಾರ್ ಪಾಳ್ಯದ ಅಂಗಡಿ ಮೇಲೆ ಸಿಸಿಬಿ ದಾಳಿ • ₹8 ಲಕ್ಷ ಮೌಲ್ಯದ ವಸ್ತುಗಳ ವಶ

# ‘ಆ್ಯಪಲ್’ ಹೆಸರಿನಲ್ಲಿ ನಕಲಿ ಉತ್ಪನ್ನಗಳ ಮಾರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆ್ಯಪಲ್ ಕಂಪನಿಯ ಹೆಸರಿನಲ್ಲಿ ನಕಲಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಚಿಕ್ಕಪೇಟೆ ಅಂಗಡಿಯೊಂದರ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಗೋದಾಮಿನಲ್ಲಿ ಕಂಪನಿಯ ಬ್ರ್ಯಾಂಡ್ ಮುದ್ರಿಸಿದ್ದ ನಕಲಿ ಉತ್ಪನ್ನಗಳನ್ನು ದಾಸ್ತಾನು ಮಾಡಿಕೊಂಡು, ಅಸಲಿ ಎಂದು ನಂಬಿಸಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿತ್ತು.

ಖಚಿತ ಮಾಹಿತಿ ಆಧರಿಸಿ ಸಿಸಿಬಿಯ ಆರ್ಥಿಕ ಅಪರಾಧ ದಳದ ಸಿಬ್ಬಂದಿ ಅಂಗಡಿ ಮೇಲೆ ದಾಳಿ ನಡೆಸಿ, ವ್ಯಕ್ತಿಯನ್ನು ಬಂಧಿಸಿ, ₹8 ಲಕ್ಷ ಮೌಲ್ಯದ ನಕಲಿ ಏರ್‌ಪಾಡ್ಸ್ ಪ್ರೊ, ಯುಎಸ್‌ಬಿ–ಸಿ ಲೈಟ್ನಿಂಗ್ ಕೇಬಲ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಸಿಟಿ ಮಾರುಕಟ್ಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

**ಲಕ್ಷಾಂತರ ಮೌಲ್ಯದ ತಾಮ್ರದ ವೈರ್ ವಶ:** ಪ್ರತಿಷ್ಠಿತ ಕಂಪನಿಗಳ ಬ್ರ್ಯಾಂಡ್ ನಮೂದಿಸಿ ತಾಮ್ರದ ವಿದ್ಯುತ್ ತಂತಿಗಳನ್ನು ಮಾರಾಟ ಮಾಡುತ್ತಿದ್ದ ಗರುಡಾಚಾರ್ ಪಾಳ್ಯದ ಮಹದೇವಪುರ ವ್ಯಾಪ್ತಿಯ ಅಂಗಡಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ.

ಎವಿ ಗಾರ್ಡ್, ಆರ್‌ಆರ್, ಆ್ಯಂಕರ್, ಗ್ರೇಟ್ ವೈಟ್, ಹವೇಲಿ ಕಂಪನಿಗಳ ತಾಮ್ರದ ತಂತಿಗಳನ್ನು ಮಾರಾಟ ಮಾಡಲಾಗುತ್ತಿತ್ತು. ಆರೋಪಿಯಿಂದ ₹6.20 ಲಕ್ಷ ಮೌಲ್ಯದ ವಸ್ತು ವಶಪಡಿಸಿಕೊಳ್ಳಲಾಗಿದೆ. ಮಹದೇವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ದುರುಗುಟ್ಟಿ ನೋಡಿದ್ದಕ್ಕೆ ಯುವಕನ ಕೊಲೆ

**ಬೆಂಗಳೂರು:** ಒಬ್ಬನನ್ನು ಮತ್ತೊಬ್ಬ ದುರುಗುಟ್ಟಿ ನೋಡಿದ ಎಂಬ ಕಾರಣಕ್ಕೆ ನಡೆದ ಜಗಳದಲ್ಲಿ ಅಪರಿಚಿತ ಗುಂಪೊಂದು ಯುವಕನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದೆ.

ಹೊಯ್ಸಳ ನಗರದ ನಿವಾಸಿ, ಖಾಸಗಿ ಸಂಸ್ಥೆಯ ಉದ್ಯೋಗಿ ಮನೋಜ್ (22) ಮೃತ ಯುವಕ. ಘಟನೆಯಲ್ಲಿ ಗಾಯಗೊಂಡಿರುವ ಅಂಥೋಣಿ (23) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಭಾನುವಾರ ಬೆಳಿಗ್ಗೆ ಮನೋಜ್ ತನ್ನ ಸ್ನೇಹಿತ ಅಂಥೋಣಿ ಜತೆ ಮನೆಗೆ ಹಿಂದಿರುಗುವ ವೇಳೆ ರಾಮಮೂರ್ತಿ ನಗರದ ರಸ್ತೆಯಲ್ಲಿ ಜನರ ಗುಂಪು ಗಲಾಟೆ ಮಾಡುತ್ತಿರುವುದನ್ನು ನೋಡಿದರು. ಆಗ ಮನೋಜ್ ಏನು ನಡೆಯುತ್ತಿದೆ ಎಂಬುದನ್ನು ಕುತೂಹಲದಿಂದ ನೋಡುತ್ತ ನಿಂತರು.

ಗಲಾಟೆ ನಡೆಯುತ್ತಿದ್ದ ಸ್ಥಳದಲ್ಲಿ ಮನೋಜ್ ತಮ್ಮನ್ನು ದುರುಗುಟ್ಟಿ ನೋಡಿದರು ಎಂದು ತಕರಾರು ತೆಗೆದ ಅಪರಿಚಿತರ ಗುಂಪು ಅವರೊಂದಿಗೆ ಜಗಳಕ್ಕೆ ಇಳಿಯಿತು. ಎರಡೂ ಕಡೆಯವರ ಮಧ್ಯೆ ಮಾತಿನ ಚಕಮಕಿ ನಡೆದಿದ್ದು, ಎದುರಾಳಿ ಗುಂಪಿನವರು ಮನೋಜ್ ಮತ್ತು ಅಂಥೋಣಿಗೆ ಚೂರಿಯಿಂದ ಇರಿದಿದ್ದಾರೆ. ಮನೋಜ್ ಆಸ್ಪತ್ರೆಯಲ್ಲಿ ಮೃತಪಟ್ಟರೆ, ಅಂಥೋಣಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಮಮೂರ್ತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಬಸ್ ಮೇಲೆ ಕಲ್ಲು ತೂರಾಟ:** ತಮಿಳುನಾಡಿಗೆ ತೆರಳುತ್ತಿದ್ದ ಖಾಸಗಿ ಬಸ್ ಮೇಲೆ ಕಲ್ಲು ತೂರಾಟ ನಡೆಸಿದ 24 ವರ್ಷದ ಮಹಾರಾಜ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡು ಮೂಲದ ಮಹಾರಾಜ ಅವರು ಕಲಾಸಿಪಾಳ್ಯದಲ್ಲಿರುವ ತನ್ನ ಕೆಲಸದ ಸ್ಥಳಕ್ಕೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು.

ನಗರದ ಪುರಭವನದ ಬಳಿ ಮಧ್ಯರಾತ್ರಿ ಮಹಾರಾಜ ಅವರು ಇಳಿಯುತ್ತಿದ್ದಂತೆ ಬಸ್ ಚಲಿಸಿತು. ನಿಯಂತ್ರಣ ತಪ್ಪಿ ಅವರು ಕೆಳಗೆ ಬಿದ್ದು, ಸಣ್ಣಪುಟ್ಟ ಗಾಯಗಳಾಗಿವೆ. ಇದರಿಂದ ಕೋಪಗೊಂಡ ಅವರು ಬಸ್ ಮೇಲೆ ಕಲ್ಲು ತೂರಾಟ ಮಾಡಿ, ಗಾಜಿಗೆ ಹಾನಿ ಮಾಡಿದರು.

ನಂತರ ಬಸ್ ನಿರ್ವಾಹಕ ಮತ್ತು ಇತರ ಪ್ರಯಾಣಿಕರು ಅವರನ್ನು ಹಿಡಿದು ಎಸ್‌. ಜೆ ಪಾರ್ಕ್ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ.

## ಬೈಕ್‌ನಿಂದ ಬಿದ್ದು ಸವಾರ ಸಾವು

**ಬೆಂಗಳೂರು:** ಮೈಸೂರು ರಸ್ತೆಯ ಬಿಜಿಎಸ್ ಮೇಲ್ಸೇತುವೆ ಬಳಿ ದ್ವಿಚಕ್ರ ವಾಹನದಲ್ಲಿ ತೆರಳುವಾಗ ನಿಯಂತ್ರಣ ತಪ್ಪಿ ಬಿದ್ದು ಸವಾರ ಮೃತಪಟ್ಟು, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದಾರೆ.

ವಾಲ್ಮೀಕಿನಗರದ ವಿಘ್ನೇಶ್ (26) ಮೃತ ವ್ಯಕ್ತಿ. ಹಿಂಬದಿ ಸವಾರ ಕೆಂಗೇರಿಯ ಶ್ರೀನಿವಾಸ್ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಖಾಸಗಿ ಕಂಪನಿ ಉದ್ಯೋಗಿಗಳಾದ ಈ ಇಬ್ಬರೂ ಶನಿವಾರ ತಡರಾತ್ರಿ ಸಿಟಿ ಮಾರುಕಟ್ಟೆ ಬಳಿ ಊಟ ಮಾಡಿದ ಬಳಿಕ ದ್ವಿಚಕ್ರ ವಾಹನದಲ್ಲಿ ಕೆಂಗೇರಿ ಕಡೆಗೆ ಹೊರಟಿದ್ದರು. ಆಗ ನಿಯಂತ್ರಣ ತಪ್ಪಿ ವಾಹನ ಸಹಿತ ಸವಾರರಿಬ್ಬರೂ ರಸ್ತೆ ಮೇಲೆ ಬಿದ್ದಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಇಬ್ಬರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತು.

ಚಿಕಿತ್ಸೆಗೆ ಸ್ಪಂದಿಸದೆ ವಿಘ್ನೇಶ್ ಮೃತಪಟ್ಟರು. ಶ್ರೀನಿವಾಸ ಅವರ ಕೈ ಮತ್ತು ಕಾಲಿಗೆ ತೀವ್ರ ಪೆಟ್ಟು ಬಿದ್ದಿದ್ದು, ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಚಿಕ್ಕಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅವಧಿ ಮೀರಿ ವಹಿವಾಟಿಗೆ ಕಡಿವಾಣ

ಅಪರಾಧ ಸುದ್ದಿ

**ಬೆಂಗಳೂರು:** ನಗರದ ವಿವಿಧೆಡೆ ಅವಧಿ ಮೀರಿ ವಹಿವಾಟು ನಡೆಸುತ್ತಿದ್ದ ಬಾರ್, ಪಬ್, ರೆಸ್ಟೋರೆಂಟ್‌ಗಳನ್ನು ಪೊಲೀಸರು ಶನಿವಾರ ರಾತ್ರಿ ದಿಢೀರ್ ತಪಾಸಣೆ ನಡೆಸಿ, ಬಾಗಿಲು ಮುಚ್ಚಿಸಿದ್ದಾರೆ.

ವಾರಾಂತ್ಯದಲ್ಲಿ ನಿಗದಿತ ಅವಧಿಗಿಂತ ಹೆಚ್ಚಿನ ಸಮಯದವರೆಗೆ ಗ್ರಾಹಕರಿಗೆ ಮದ್ಯ ಮತ್ತು ಆಹಾರ ಸೇವನೆಗೆ ಅವಕಾಶ ನೀಡಲಾಗುತ್ತಿತ್ತು. ಇದರಿಂದ ತೊಂದರೆ ಅನುಭವಿಸಿದ ಅಕ್ಕ-ಪಕ್ಕದ ನಿವಾಸಿಗಳು ಪೊಲೀಸರಿಗೆ ಹಲವು ಬಾರಿ ದೂರು ನೀಡಿದ್ದರು.

ಕೇಂದ್ರ ವಿಭಾಗದ ಡಿಸಿಪಿ ಎಚ್‌.ಟಿ.ಶೇಖರ್ ನೇತೃತ್ವದಲ್ಲಿ ಪೊಲೀಸರು ಶನಿವಾರ ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿದರು.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ವಿವಿಧೆಡೆ ಸರ್ಕಾರ ನಿಗದಿಪಡಿಸಿದ್ದ ಸಮಯವನ್ನೂ ಮೀರಿ ಅನಧಿಕೃತವಾಗಿ ವಹಿವಾಟಿನಲ್ಲಿ ತೊಡಗಿದ್ದ ಎಲ್ಲಾ ಪಬ್, ಬಾರ್, ರೆಸ್ಟೋರೆಂಟ್‌ಗಳ ಮಾಲೀಕರಿಗೆ ಎಚ್ಚರಿಕೆ ನೀಡಿ ಬಂದ್ ಮಾಡಿಸಲಾಯಿತು. ಕೆಲವೆಡೆ ನಿಗದಿತ ಸಮಯಕ್ಕೆ ಸರಿಯಾಗಿ ಮದ್ಯದಂಗಡಿಗಳನ್ನು ಬಂದ್ ಮಾಡಲಾಗಿತ್ತು.

‘ಅವಧಿ ಮೀರಿ ವಹಿವಾಟು ನಡೆಸುತ್ತಿದ್ದ ಪಬ್, ಬಾರ್, ರೆಸ್ಟೋರೆಂಟ್‌ಗಳ ವಿರುದ್ಧ ಎರಡು ವಾರಗಳಿಂದ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಳೆದ ವಾರ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಐದು ಪ್ರಕರಣ ದಾಖಲಿಸಲಾಗಿತ್ತು. ನಿಗದಿತ ಸಮಯಕ್ಕೆ ಬಾರ್, ಪಬ್, ರೆಸ್ಟೋರೆಂಟ್‌ಗಳ ವಹಿವಾಟು ಸ್ಥಗಿತವಾಗುತ್ತಿದೆಯೇ ಎಂಬುದನ್ನು ನಿತ್ಯ ರಾತ್ರಿ ಗಸ್ತು ಸಿಬ್ಬಂದಿ ಪರಿಶೀಲಿಸುತ್ತಿದ್ದಾರೆ. ಸರ್ಕಾರ ನಿಗದಿಪಡಿಸಿದ ಸಮಯ ಮೀರಿ ಯಾವುದೇ ಪಬ್, ಬಾರ್, ರೆಸ್ಟೋರೆಂಟ್‌ಗಳು ವಹಿವಾಟಿನಲ್ಲಿ ತೊಡಗಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಕೇಂದ್ರ ವಿಭಾಗದ ಶೇಖರ್ ತಿಳಿಸಿದರು.

ಅವಧಿ ಮೀರಿ ಪಬ್ ತೆರೆದು ನಿಯಮ ಉಲ್ಲಂಘಿಸಿದ್ದ ಆರೋಪದಡಿ ಕ್ರಿಕೆಟಿಗ ವಿರಾಟ್ ಕೊಹ್ಲಿ ಅವರು ಸಹ ಪಾಲುದಾರ ಆಗಿರುವ ಕಸ್ತೂರಬಾ ರಸ್ತೆಯ ‘ಒನ್–8’ ಪಬ್ ವ್ಯವಸ್ಥಾಪಕ ಹಾಗೂ ಬ್ರಿಗೇಡ್ ರಸ್ತೆಯಲ್ಲಿರುವ ಪೋರಂ ರೆಕ್ಸ್‌ವಾಲ್ಕ್ ಕಟ್ಟಡದ ನಾಲ್ಕನೇ ಮಹಡಿಯಲ್ಲಿರುವ ಪ್ಯಾಂಜಿಯೊ ಬಾರ್ ಆ್ಯಂಡ್ ರೆಸ್ಟೋರೆಂಟ್ ವಿರುದ್ಧ ಜುಲೈ 9ರಂದು ಪ್ರಕರಣ ದಾಖಲಾಗಿತ್ತು.

ಪಿಇಎಸ್ ವಿಶ್ವವಿದ್ಯಾಲಯದ ಹೊಸ ಕೋರ್ಸ್‌ನ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ವಿಶ್ವವಿದ್ಯಾಲಯದ ಸಹಕುಲಾಧಿಪತಿ ಎಂ.ಆರ್‌. ದೊರೆಸ್ವಾಮಿ, ಕುಲಪತಿ ಜೆ. ಸೂರ್ಯಪ್ರಸಾದ್, ಕುಲಸಚಿವ ಕೆ.ಎಸ್‌. ಶ್ರೀಧರ್, ಸಿಒಒ ಅಜಯ್ ಕುಮಾರ್, ಎಫ್‌ಒಎಂಸಿ ಡೀನ್ ಶೈಲಶ್ರೀ ಹರಿದಾಸ್ ಉಪಸ್ಥಿತರಿದ್ದರು.

## ಪಿಇಎಸ್ ವಿಶ್ವವಿದ್ಯಾಲಯದಲ್ಲಿ ವಿವಿಧ ಕೋರ್ಸ್‌ಗಳ ಉದ್ಘಾಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಅಪ್ಲಿಕೇಶನ್, ವಾಣಿಜ್ಯ, ಅರ್ಥಶಾಸ್ತ್ರ, ಕಾನೂನು, ನಿರ್ವಹಣೆ, ಮನೋವಿಜ್ಞಾನ, ಪ್ರದರ್ಶನ ಕಲೆಗಳು ಸೇರಿದಂತೆ ವಿವಿಧ ಕೋರ್ಸ್‌ಗಳನ್ನು ಭಾನುವಾರ ಉದ್ಘಾಟಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಅವರು ಮಾತನಾಡಿ, ‘ಉದ್ಯೋಗದಲ್ಲಿ ಉತ್ತಮ ವೇತನವನ್ನು ಬಯಸುವುದು ಸಹಜ. ಅಷ್ಟಕ್ಕೇ ಸೀಮಿತಗೊಳ್ಳದೆ ಮೌಲ್ಯಗಳಿಗೂ ಒತ್ತು ನೀಡಬೇಕು. ಕ್ಯಾಂಪಸ್‌ನಲ್ಲಿ ಮೌಲ್ಯಾಧಾರಿತ ಶಿಕ್ಷಣ ದೊರೆಯುವಂತಹ ವಾತಾವರಣ ನಿರ್ಮಿಸಬೇಕು’ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಭಾರತದ ಸಂಸ್ಕೃತಿ, ಪರಂಪರೆ, ಸಂಪ್ರದಾಯಗಳನ್ನು ಅರ್ಥಮಾಡಿಕೊಳ್ಳಬೇಕು. ನೈತಿಕ ಮೌಲ್ಯಗಳ ಕೊರತೆಯಿಂದಾಗಿಯೇ ಅಪರಾಧಗಳ ಪ್ರಮಾಣ ಹೆಚ್ಚುತ್ತಿದೆ ಎಂದು ಅವರು ವಿಶ್ಲೇಷಿಸಿದರು.

ವಿದ್ಯಾರ್ಥಿಗಳು ಜ್ಞಾನದ ಜೊತೆಗೆ, ಯಶಸ್ಸಿನ ಬೆನ್ನು ಹತ್ತಬೇಕು. ಸ್ಪರ್ಧೆ ಮತ್ತು ಮಹತ್ವಾಕಾಂಕ್ಷೆಯ ಜೊತೆಗೆ ಸಹೋದರ ತತ್ವವನ್ನು ಕಾಪಾಡಿಕೊಳ್ಳಬೇಕು. ಘನತೆಯ ಬದುಕು ಮತ್ತು ಸಹ ನಾಗರಿಕರನ್ನು ಗೌರವಿಸುವ ಗುಣ ಇರಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಭಾರತ ಸರ್ಕಾರದ ರೈಲ್ವೆ ಸಚಿವಾಲಯದ ಹಿರಿಯ ವಿಭಾಗೀಯ ಹಣಕಾಸು ವ್ಯವಸ್ಥಾಪಕ ಶ್ರೇಯಸ್ ಹೊಸೂರ್ ಅವರು ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು.

## ಪ್ರತಿಭಟನಾನಿರತ ಮಹಿಳೆಯರ ಮೇಲೆ ಮರಳು ಸುರಿದರು

**ರೇವಾ, ಮಧ್ಯಪ್ರದೇಶ (ಪಿಟಿಐ):** ಪ್ರತಿಭಟನೆ ನಡೆಸುತ್ತಿದ್ದ, ರಸ್ತೆ ನಿರ್ಮಾಣ ಕಾಮಗಾರಿಯ ಮಹಿಳಾ ಕಾರ್ಮಿಕರ ಮೇಲೆ ಟಿಪ್ಪರ್‌ನಲ್ಲಿದ್ದ ಮರಳು ಸುರಿದು, ಭಾಗಶಃ ಹೂತುಹಾಕಿದ್ದ ಪ್ರಕರಣದ ಸಂಬಂಧ ಪೊಲೀಸರು ಒಬ್ಬನನ್ನು ಬಂಧಿಸಿದ್ದಾರೆ.

ರೇವಾ ಜಿಲ್ಲೆಯಲ್ಲಿ ನಡೆದ ಈ ಕೃತ್ಯ ಉಲ್ಲೇಖಿಸಿ ಪ್ರತಿಪಕ್ಷ ಕಾಂಗ್ರೆಸ್, ಆಡಳಿತಾರೂಢ ಬಿಜೆಪಿ ವಿರುದ್ಧ ಹರಿಹಾಯ್ದಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂದು ಟೀಕಿಸಿದೆ. ಹಿನೋಟಾ ಜೊರೋಟ್ ಗ್ರಾಮದಲ್ಲಿ ನಡೆದಿದ್ದ ಈ ಕೃತ್ಯದ ಸಂಬಂಧ ಪೊಲೀಸರು ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ. ಮಹಿಳೆಯರು ಭಾಗಶಃ ಹೂತುಹೋಗಿದ್ದ ದೃಶ್ಯದ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದೆ.

ಭಾಗಶಃ ಹೂತುಹೋಗಿದ್ದ ಮಹಿಳೆಯರನ್ನು ಗ್ರಾಮಸ್ಥರು ಹೊರಗೆಳೆದು, ರಕ್ಷಿಸಿದ್ದಾರೆ. ಎಡಿಜಿ ಜೈದೀಪ್ ಪ್ರಸಾದ್ ಅವರು, ‘ಘಟನೆಗೆ ಕೌಟುಂಬಿಕ ವಿವಾದ ಕಾರಣ. ಮೂವರ ವಿರುದ್ಧ ದೂರು ದಾಖಲಾಗಿದೆ. ಟಿಪ್ಪರ್ ಚಾಲಕನನ್ನು ಬಂಧಿಸಿದ್ದು, ತಲೆಮರೆಸಿಕೊಂಡಿರುವ ಇತರ ಇಬ್ಬರಿಗಾಗಿ ಶೋಧ ನಡೆದಿದೆ’ ಎಂದು ತಿಳಿಸಿದ್ದಾರೆ.

## ವೈಷ್ಣೋದೇವಿ ಮಂದಿರದ ಧರ್ಮಾಧಿಕಾರಿ ದೇವಪ್ಪಜ್ಜ ಕೊಲೆ

ಪ್ರಜಾವಾಣಿ ವಾರ್ತೆ

**ಹುಬ್ಬಳ್ಳಿ:** ಅಚ್ಚ ಕನ್ನಡದ ಸಂಭಾಷಣೆ ಮೂಲಕ ಜನರ ಗಮನ ಸೆಳೆದಿದ್ದ ಇಲ್ಲಿನ ಈಶ್ವರ ನಗರದ ದಕ್ಷಿಣ ವೈಷ್ಣೋದೇವಿ ಮಂದಿರದ ಧರ್ಮಾಧಿಕಾರಿ ದೇವಪ್ಪಜ್ಜ (60) ಅವರನ್ನು ದುಷ್ಕರ್ಮಿಗಳು ಭಾನುವಾರ ರಾತ್ರಿ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ.

ದೇವಸ್ಥಾನದ ಆವರಣದಲ್ಲಿ ದುಷ್ಕರ್ಮಿಗಳು ದೇವಪ್ಪಜ್ಜ ಅವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ, ಪರಾರಿಯಾಗಿದ್ದಾರೆ. ಸ್ಥಳೀಯರು ಅವರನ್ನು ಕಿಮ್ಸ್ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್, ಡಿಸಿಪಿಗಳಾದ ರವೀಶ್ ಸಿ.ಆರ್, ಮಹಾನಿಂಗ ನಂದಗಾವಿ ಸೇರಿದಂತೆ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಲಿಂಗತ್ವ ತಟಸ್ಥ ಪ್ರಸ್ತಾವಕ್ಕೆ ವಿರೋಧ

ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್ ರಾಜ್ಯ ಮಂಡಳಿ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅತ್ಯಾಚಾರ ಮತ್ತು ಇತರ ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಪಟ್ಟಂತೆ ಕಾನೂನುಗಳನ್ನು ಲಿಂಗತ್ವ ತಟಸ್ಥ (ಜೆಂಡರ್ ನ್ಯೂಟ್ರಲ್) ಮಾಡಬೇಕೆಂದು ರಾಜ್ಯ ಸರ್ಕಾರ ಮುಂದಿಟ್ಟಿರುವ ಸಲಹೆಯನ್ನು ಹಿಂಪಡೆಯಬೇಕು ಎಂದು ನ್ಯಾಷನಲ್ ಫೆಡರೇಷನ್ ಆಫ್ ಇಂಡಿಯನ್ ವಿಮೆನ್ (ಎನ್‌ಎಫ್‌ಐಡಬ್ಲ್ಯು) ರಾಜ್ಯ ಮಂಡಳಿ ಆಗ್ರಹಿಸಿದೆ.

ಎನ್‌ಎಫ್‌ಐಡಬ್ಲ್ಯು ನೇತೃತ್ವದಲ್ಲಿ ಭಾನುವಾರ ನಗರದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಸಮಾಲೋಚನಾ ಸಭೆ ನಡೆಯಿತು.

‘ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳಲ್ಲಿ ಲಿಂಗತ್ವ ತಟಸ್ಥ ಎನ್ನುವುದು ಸ್ತ್ರೀದ್ವೇಷ ಮತ್ತು ಪುರುಷಪ್ರಧಾನ ಮನಃಸ್ಥಿತಿಯ ಉತ್ಪನ್ನವಾಗಿದೆ. ಮಹಿಳೆಯರ ಹಕ್ಕುಗಳನ್ನು ಮೊಟಕುಗೊಳಿಸುವ ಹುನ್ನಾರ ಇದು. ಹೊಸ ಕ್ರಿಮಿನಲ್ ಕಾನೂನಿನಲ್ಲಿ ಲೈಂಗಿಕ ಅಲ್ಪಸಂಖ್ಯಾತರ ಪರವಾಗಿ ಪ್ರತ್ಯೇಕ ಅಧ್ಯಾಯ ರೂಪಿಸಬೇಕು’ ಎಂದು ಹಿರಿಯ ವಕೀಲ ಬಿ.ಟಿ. ವೆಂಕಟೇಶ್ ಒತ್ತಾಯಿಸಿದರು.

ಎನ್‌ಎಫ್‌ಐಡಬ್ಲ್ಯು ನೇತೃತ್ವದಲ್ಲಿ ಭಾನುವಾರ ನಡೆದ ವಿವಿಧ ಸಂಘಟನೆಗಳ ಪದಾಧಿಕಾರಿಗಳ ಸಮಾಲೋಚನಾ ಸಭೆಯಲ್ಲಿ ವಕೀಲ ಬಿ.ಟಿ. ವೆಂಕಟೇಶ್ ಮಾತನಾಡಿದರು

‘ಅತ್ಯಾಚಾರ ವಿರೋಧಿ ಕಾನೂನುಗಳನ್ನು ಸತ್ವಹೀನಗೊಳಿಸಬಾರದು. ನಮ್ಮ ಸಮಾಜವು ಕಾನೂನಿನ ಬದಲಾವಣೆಗಳಿಗೆ ತೆರೆದುಕೊಂಡಿಲ್ಲ’ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಜೀಜಾ ಹರಿಸಿಂಗ್ ಬೇಸರ ವ್ಯಕ್ತಪಡಿಸಿದರು.

‘ಶಾಸನಗಳ ಕುರಿತು ಚರ್ಚಿಸಲು ಲಿಂಗತ್ವ ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯವೇ ಇಲ್ಲ’ ಎಂದು ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಒಕ್ಕೂಟದ ಅಧ್ಯಕ್ಷೆ ಅಕ್ಕೈ ಪದ್ಮಶಾಲಿ ದೂರಿದರು.

‘ಲಿಂಗತ್ವ ತಟಸ್ಥ ನೀತಿಯನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಅಖಿಲಾ ತಿಳಿಸಿದರು.

‘ಈಗ ಇರುವ ಕಾನೂನುಗಳನ್ನು ಬಲಿಷ್ಠಗೊಳಿಸುವುದನ್ನು ಬಿಟ್ಟು, ಅನಗತ್ಯ ವಿಚಾರಗಳನ್ನು ತರುವುದು ಸರಿಯಲ್ಲ’ ಎಂದು ದಲಿತ ಚಳವಳಿಯ ಪ್ರಮುಖರಾದ ಇಂದಿರಾ ಕೃಷ್ಣಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಮಹಿಳೆಯರಿಗೆ ದೂರು ದಾಖಲಿಸಲು ಸುರಕ್ಷಿತ ವಾತಾವರಣ ಇರಬೇಕು. ಮಹಿಳೆಯರು, ಲಿಂಗತ್ವ ಅಲ್ಪಸಂಖ್ಯಾತರ ಕೇಂದ್ರಿತ ಕಾನೂನು ರಚನೆ ಮಾಡಬೇಕು. ಮಾಧ್ಯಮಗಳೇ ಅಪರಾಧಿಗಳ ಸೃಷ್ಟಿಗೆ ಕಾರಣವಾಗುತ್ತಿರುವುದನ್ನು ನಿಯಂತ್ರಿಸಬೇಕು. ವೈವಾಹಿಕ ಅತ್ಯಾಚಾರ ಮತ್ತು ಮರ್ಯಾದೆಗೇಡು ಹತ್ಯೆಯನ್ನು ಕಾನೂನಿನಡಿ ಸೇರಿಸಬೇಕು ಎಂದು ಎಐಎಂಎಸ್‌ಎಸ್ ಕಾರ್ಯಕರ್ತೆ ಹೇಮಾವತಿ, ಗಾಟು ಸಂಘಟನೆಯ ಪ್ರತಿಭಾ, ಗಮನ ಸಂಸ್ಥೆಯ ಮಧುಭೂಷಣ್, ಕರ್ನಾಟಕ ಲೇಖಕಿಯರ ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಡಿಎಸ್‌ಎಸ್‌ನ ನಿರ್ಮಲಾ ಆಗ್ರಹಿಸಿದರು.

ಎನ್‌ಎಫ್‌ಐಡಬ್ಲ್ಯು ರಾಜ್ಯ ಘಟಕದ ಅಧ್ಯಕ್ಷೆಜ್ಯೋತಿ ಎ.ಅಧ್ಯಕ್ಷತೆವಹಿಸಿದ್ದರು. ಪದಾಧಿಕಾರಿಗಳಾದ ರೇಣುಕಾ ಕೆ., ದಿವ್ಯಾ ಎಸ್‌. ಬಿರಾದಾರ್, ಉಮಾ, ರಾಜಲಕ್ಷ್ಮಿ, ವಿಜಯಮ್ಮ ಭಾಗವಹಿಸಿದ್ದರು.

## ಲಿಂಗತ್ವ ಅಲ್ಪಸಂಖ್ಯಾತರನ್ನು ಒಳಗೊಳ್ಳದ ಕರಡು ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಲಿಂಗತ್ವ ಅಲ್ಪಸಂಖ್ಯಾತರನ್ನು ಒಳಗೊಳ್ಳದೇ ಭಾರತೀಯ ನ್ಯಾಯ ಸಂಹಿತೆ ಕಾನೂನಿನಲ್ಲಿ ಬದಲಾವಣೆ ತರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರೂಪಿಸಿರುವ ಕರಡನ್ನು ತಕ್ಷಣವೇ ತಡೆ ಹಿಡಿಯಬೇಕು ಎಂದು ಕರ್ನಾಟಕ ರಾಜ್ಯ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಒಕ್ಕೂಟ ಸೇರಿದಂತೆ ವಿವಿಧ ಸಂಘಟನೆಗಳು ಕಾನೂನು ಸಚಿವರನ್ನು ಆಗ್ರಹಿಸಿವೆ.

ಲಿಂಗತ್ವ ಹಾಗೂ ಲೈಂಗಿಕ ಅಲ್ಪಸಂಖ್ಯಾತ ಸಮುದಾಯವು ಶತಮಾನಗಳಿಂದ ಸಾಮಾಜಿಕ ಬಹಿಷ್ಕಾರ, ಶೋಷಣೆ, ಹಿಂಸೆಗಳನ್ನು ಅನುಭವಿಸುತ್ತಾ ಬಂದಿದೆ. ಈ ಸಮುದಾಯದ ಪರವಾಗಿ ಹಲವು ಮಹತ್ವದ ತೀರ್ಪುಗಳನ್ನು ಸುಪ್ರೀಂ ಕೋರ್ಟ್, ಹೈಕೋರ್ಟ್ ನೀಡಿದ್ದರೂ ಈವರೆಗೆ ಅನುಷ್ಠಾನವಾಗಿಲ್ಲ ಎಂದು ವಿವಿಧ ಸಂಘಟನೆಗಳ ಪ್ರತಿನಿಧಿಗಳಾದ ಅಕ್ಕೈ ಪದ್ಮಶಾಲಿ, ಮಾಯಾ ಎಸ್‌.ಆರ್‌. ನಾಯಕ್, ಪ್ರಕಾಶ್ ರಾಜ್, ಲಕ್ಷ್ಮಣ್ (ಮಾಳವಿಕಾ),ರಕ್ಷಿತಾ, ಪೃಥ್ವಿ,ಭಗತ್ (ಆದಿತ್ಯ) ಬಂಡಗೆ, ಪೆದ್ದಣ್ಣ ವಿ.ಕೋನಾಪುರ್, ಕಾವ್ಯಾ (ಭೀಮಯ್ಯ), ಸಮೀರ್ ಎಂ. ಕರ್ಜಗಿ, ಮಹಮ್ಮದ್ ಸೈಫುಲ್ಲಾ (ಪ್ಯಾರೂದಾ), ಸಂಜೀವನಿ (ಸಂಜೀವ),ಕೃಷ್ಣಮೂರ್ತಿ(ಕವಿತಾ) ಬೇಸರ ವ್ಯಕ್ತಪಡಿಸಿದ್ದಾರೆ.

ಅಕ್ಕೈ ಪದ್ಮಶಾಲಿ

ಈ ಸಮುದಾಯದ ಬಗ್ಗೆ ಚರ್ಚಿಸಲು, ಕಾನೂನಿನ ಅಡೆತಡೆಗಳ ಬಗ್ಗೆ ವಿಮರ್ಶೆ ನಡೆಸಲು, ಸಮುದಾಯದ ಜೀವನ ಶೈಲಿ ಹಾಗೂ ಇನ್ನಿತರ ಸೂಕ್ಷ್ಮ ವಿಚಾರಗಳ ಕುರಿತು ತಿಳಿಯಲು ಕಾನೂನು ಸಚಿವ ಎಚ್‌.ಕೆ. ಪಾಟೀಲ ಅವರು ತುರ್ತಾಗಿ ಸಭೆ ನಿಗದಿಪಡಿಸಬೇಕು. ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಧ್ವನಿಯನ್ನು ಆಲಿಸಬೇಕು. ಈ ಸಮುದಾಯವನ್ನು ಕಾಪಾಡುವ ಅಂಶಗಳನ್ನು ಸೇರಿಸಿದ ಬಳಿಕವಷ್ಟೇ ಕೇಂದ್ರ ಸರ್ಕಾರಕ್ಕೆ ಕರಡು ಕಳುಹಿಸಿಕೊಡಬೇಕು ಎಂದು ಕಾನೂನು ಸಚಿವರಿಗೆ ಬರೆದಿರುವ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034

Ph : 080-25526266 / 25526288 | Website : www.csbank.in

ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆ

ನಮ್ಮ ಬ್ಯಾಂಕಿನ 24ನೇ ವಾರ್ಷಿಕ ಅಂದರೆ 2023–24 ರ ಸಾಲಿನ ಸರ್ವಸದಸ್ಯರ ಸಭೆಯನ್ನು ದಿನಾಂಕ 28ನೇ ಜುಲೈ 2024ರ ಭಾನುವಾರ ಬೆಳಿಗ್ಗೆ 10.30 ಘಂಟೆಗೆ ಸೈಂಟ್ ಜಾನ್ಸ್ ಆಡಿಟೋರಿಯಂ, ಮಹಾಯೋಗಿ ವೇಮನ ರಸ್ತೆ, ಬಿಡಿಎ ಕಾಂಪ್ಲೆಕ್ಸ್ ಎದುರು, ಕೋರಮಂಗಲ, ಬೆಂಗಳೂರು–560034 ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸದಸ್ಯರು ಈ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ಸೂಚನಾ ಪತ್ರವನ್ನು ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಲಾಗಿದ್ದು, ತಲುಪದಿದ್ದಲ್ಲಿ ಈ ಪ್ರಕಟಣೆಯನ್ನು ಸೂಚನಾ ಪತ್ರವೆಂದು ತಿಳಿದು ಸರ್ವಸದಸ್ಯರ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ. ವಾರ್ಷಿಕ ವರದಿಯನ್ನು ಬ್ಯಾಂಕಿನ ವೆಬ್‌ಸೈಟ್ (www.csbank.in) ನಲ್ಲಿ ಪ್ರಕಟಿಸಿದ್ದು ತಾವುಗಳು ವೀಕ್ಷಿಸಬಹುದು.

| INTEREST RATES ON DEPOSITS | |
|---|---|
| PERIOD | R.O.I. |
| 31 Days to 90 Days | 4.00% |
| 91 Days to 179 Days | 4.50% |
| 6 Months to 11 Months | 5.75% |
| 12 Months to 24 Months | 7.25% |
| 25 Months to 120 Months | 7.00% |

| INTEREST RATES ON LOANS | |
|---|---|
| TYPE OF LOAN | INTEREST RATE |
| Housing Loan | 8.25% |
| Vehicle Loan | 8.75% |
| Education Loan (Under Mortgage) | 9.00% |
| Mortgage Loan | 10.00% |
| Overdraft | 10.25% |

(Senior citizen 0.50% extra for deposits held for one year and above)

ಆಡಳಿತ ಮಂಡಳಿಯ ಪರವಾಗಿ
ಸಹಿ/–
(ಶಿವಣ್ಣ ಕೆ.ಬಿ.)
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ದಿನಾಂಕ : 20–07–2024
ಸ್ಥಳ : ಬೆಂಗಳೂರು



ಹಿಟಾಚಿ ಎನರ್ಜಿ ಇಂಡಿಯಾ ಸಂಸ್ಥೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ದಿ ಎನರ್ಜಿ ರನ್’ನಲ್ಲಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್‌. ವೇಣು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು

## ‘ವಿದ್ವತ್ತಿನ ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಎಲ್ಲ ಕ್ಷೇತ್ರಗಳಲ್ಲಿ ಅಭಿವೃದ್ಧಿಯಾಗುತ್ತಿದ್ದರೂ, ವಿದ್ವತ್ತಿನ ಕ್ಷೇತ್ರದಲ್ಲಿ ಮಾತ್ರ ಅಭಿವೃದ್ಧಿ ಕುಂಠಿತವಾಗುತ್ತಿದೆ’ ಎಂದು ಸಾಹಿತಿ ಹಂ.ಪ. ನಾಗರಾಜಯ್ಯ ಬೇಸರ ವ್ಯಕ್ತಪಡಿಸಿದರು.

ಬಿ.ಎಂ.ಶ್ರೀ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸಾಹಿತಿ ಎಂ.ಎ. ಜಯಚಂದ್ರ ಅವರಿಗೆ ‘ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು. ಪ್ರಶಸ್ತಿಯು ₹25 ಸಾವಿರ ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ.

‘ಜಲಕ್ಷಾಮ ಉಂಟಾದರೆ ಮಳೆಗಾಲದಲ್ಲಿ ನೀರು ಉಕ್ಕುತ್ತದೆ. ವಾಯುಮಾಲಿನ್ಯ ಸೇರಿ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಆದರೆ, ವಿದ್ವತ್ತಿನ ಬರಗಾಲ ಉಂಟಾದಲ್ಲಿ ನೂರು ವರ್ಷಗಳಾದರೂ ಅದನ್ನು ತುಂಬುವುದು ಕಷ್ಟ. ಈಗ ವಿದ್ವತ್ತಿನ ಕ್ಷೇತ್ರ ಅವಸರ್ಪಿಣಿ ಯುಗದಲ್ಲಿದೆ. 50–100 ವರ್ಷಗಳು ಹಿಂದಕ್ಕೆ ಹೋದಲ್ಲಿ ವಿದ್ವತ್ತಿನ ಪ್ರಕಾಶ ಕಾಣಬಹುದು. ವಿದ್ವತ್ ಕೂಡ ಒಂದು ರೀತಿಯ ಬೆಳಕಾಗಿದೆ. ವಿದ್ಯುತ್ ಹೋದರೆ ಬೆಳಕು ಕೂಡ ಹೋಗುತ್ತದೆ. ವಿದ್ವತ್ ಒಮ್ಮೆ ಸೃಷ್ಟಿಯಾದರೆ ಅದು ನಾಶವಾಗುವುದಿಲ್ಲ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಎಂ.ಎ. ಜಯಚಂದ್ರ ಅವರಿಗೆ ‘ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ’ಯನ್ನು ಹಂ.ಪ. ನಾಗರಾಜಯ್ಯ ಪ್ರದಾನ ಮಾಡಿದರು. ಕೆ.ಜೆ. ಪಾರ್ಶ್ವನಾಥ, ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು, ಅಧ್ಯಕ್ಷ ಬೈರಮಂಗಲ ರಾಮೇಗೌಡ ಹಾಗೂ ಪ್ರಕಾಶಕ ಪ್ರಕಾಶ್ ಕಂಬತ್ತಳ್ಳಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಮಾತನಾಡಿ, ‘ವಿದ್ವತ್ ಹಾಗೂ ಸಂಶೋಧನೆಯಲ್ಲಿ ಪ್ರಾಮಾಣಿಕತೆ, ಶಿಸ್ತು ಮತ್ತು ಶ್ರದ್ಧೆ ಅಗತ್ಯ. ಈ ಮೂರೂ ವಿಚಾರಗಳನ್ನು ಕ್ರೋಡೀಕರಿಸಿಕೊಂಡು ಸಂಶೋಧನೆ ಮಾಡುವವರ ಸಂಖ್ಯೆ ಇತ್ತೀಚೆಗೆ ವಿರಳ. ಇಂತಹ ಸಂದರ್ಭದಲ್ಲಿಯೂ ಹೊಸ ವಿದ್ವಾಂಸರು ಹುಟ್ಟಿಕೊಳ್ಳುತ್ತಿದ್ದಾರೆ. ಅಂತಹವರಿಗೆ ಆದರ್ಶಪ್ರಾಯವಾಗಿರುವ ಕೆಲಸವನ್ನು ಜಯಚಂದ್ರ ಮಾಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಮಾತನಾಡಿ, ‘ಜೈನ ಸಾಹಿತ್ಯ ಮತ್ತು ಸಂಸ್ಕೃತಿಗೆ ಸೇವೆ ಸಲ್ಲಿಸಿದ ಒಬ್ಬರಿಗೆ ದತ್ತಿ ಬಹುಮಾನ ಅಥವಾ ಪುರಸ್ಕಾರವನ್ನು ನೀಡಲಾಗುತ್ತಿದೆ’ ಎಂದು ಹೇಳಿದರು.

ಉನ್ನತ ಜನರು,
ಉನ್ನತ ಅಭಿರುಚಿ®

MRP ₹10 2g

MRP ₹15 3.5g

ಉನ್ನತ ಒಲವಿನ ಜನರಿಗೆ ಗೊತ್ತಿದೆ
ಅಸಲಿ-ನಕಲಿಯ ವ್ಯತ್ಯಾಸ

RMDಯ ಜನಪ್ರಿಯತೆಯ ಸದುಪಯೋಗ ಮಾಡಿಕೊಂಡು ಡ್ಯುಪ್ಲಿಕೇಟ್ RMD ಉತ್ಪಾದಿಸಿ ಮಾರಾಟ ಮಾಡಲಾಗುತ್ತಿದೆ. RMD ಸ್ವಾದದ ಪರಿಚಯ ನಿಮಗಿದ್ದು ವ್ಯತ್ಯಾಸದ ಅನುಭವವಾಗುತ್ತಿದ್ದರೆ ಮಾರಾಟಗಾರರಿಗೆ ಎಚ್ಚರಿಕೆ ನೀಡಿರಿ. ನಕಲಿ RMD ತಯಾರಿಸುವವರ ಮೇಲೆ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತದೆ.

Tiger/KAN

ಶಾಸನೀಯ ಎಚ್ಚರಿಕೆ : ಪಾನ್ ಮಸಾಲಾ ಸೇವನೆ ಆರೋಗ್ಯಕ್ಕೆ ಹಾನಿಕರ. ಅಪ್ರಾಪ್ತ ವಯಸ್ಕರಿಗೆ ಪ್ರತಿಬಂಧಿತ

NO TOBACCO, NO NICOTINE

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

ASSISTANT MANAGER ACCOUNTS PAYABLE

Qualification : Minimum Graduate in Commerce
Experience : 5-7 years (Max Age: 30 years)
Location : Kumbalgodu (Bangalore)

REQUIREMENT:
* Around 5 - 7 years' experience in payable management in organization having turnover of 200 Cr +
* Experience in working in SAP environment.
* Basic knowledge of taxation related to vendor payments.
* Working knowledge of excel.
* Basic communication skills in English.

SALARY: Open for Discussion

Please send your application for the above position mentioning the job applied for (subject of the e-mail) and along with updated resume to:

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

# ಪಶುಸಂಗೋಪನೆ ಡಿಪ್ಲೊಮಾ ಕೋರ್ಸ್

**ಯುವಜನತೆಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಪಶುಸಂಗೋಪನೆ ಡಿಪ್ಲೊಮಾ ಕೋರ್ಸ್ ಅಗತ್ಯ ತರಬೇತಿ ನೀಡಲಿದೆ.**

ಬೇದ್ರೆ ಮಂಜುನಾಥ, ಮೈಸೂರು

ಪಶುವೈದ್ಯರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಮತ್ತು ಪಶುಸಂಗೋಪನೆಯಲ್ಲಿ ನೆರವಾಗಲು ನುರಿತ ತಾಂತ್ರಿಕ ಕೌಶಲಗಳುಳ್ಳ ಡಿಪ್ಲೊಮಾ ಕೋರ್ಸ್ ಮಾಡಿದ ಅಭ್ಯರ್ಥಿಗಳ ಅಗತ್ಯವಿದೆ. ಈ ಡಿಪ್ಲೊಮಾ ತರಬೇತಿ ನೀಡಲು ಕರ್ನಾಟಕದ ಐದು ಸ್ಥಳಗಳಲ್ಲಿ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳನ್ನು ಆರಂಭಿಸಲಾಗಿದೆ.

ಪ್ರತಿಯೊಂದು ಪಾಲಿಟೆಕ್ನಿಕ್ ತನ್ನದೇ ಸಂಶೋಧನಾ ಕೇಂದ್ರವನ್ನು ಹೊಂದಿದ್ದು ಪಶುಸಂಗೋಪನೆಯಲ್ಲಿ ಹೊಸ ತಳಿಗಳ ಸಂಶೋಧನೆ ಮತ್ತು ಪರಂಪರಾಗತ ತಳಿಗಳ ಅಭಿವೃದ್ಧಿಯಲ್ಲಿ ತೊಡಗಿಕೊಂಡಿವೆ.

ಬೋಧನೆ ಸಂಪೂರ್ಣ ಕನ್ನಡ ಮಾಧ್ಯಮದಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗಾಗಿಯೇ ನಡೆಸಲಾಗುತ್ತಿರುವುದು ಇದರ ವಿಶೇಷ.

ಬೀದರಿನಲ್ಲಿರುವ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯ ಪಶುಸಂಗೋಪನಾ ಪಾಲಿಟೆಕ್ನಿಕ್‌ಗಳಲ್ಲಿ ಎರಡು ವರ್ಷ ಅವಧಿಯ ಪಶುಸಂಗೋಪನಾ ಡಿಪ್ಲೋಮಾ ಕೋರ್ಸಿನ ಪ್ರವೇಶಕ್ಕಾಗಿ ಎಸ್ಸೆಸ್ಸೆಲ್ಸಿಯಲ್ಲಿ ಕನಿಷ್ಠ ಶೇ 45ರಷ್ಟು ಅಂಕಗಳಿಸಿರುವ, 1 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ, ಗ್ರಾಮೀಣ ಪ್ರದೇಶದಲ್ಲಿ, ವ್ಯಾಸಂಗ ಮಾಡಿರುವ ಮತ್ತು 20 ವರ್ಷ ವಯೋಮಿತಿ ಮೀರಿರದ, ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸರ್ಕಾರದ ನಿಯಮಾವಳಿಯಂತೆ ಮೀಸಲಾತಿಯನ್ನು ನಿಗದಿಗೊಳಿಸಲಾಗಿರುತ್ತದೆ ಮತ್ತು ರೈತರ ಹಾಗೂ ಕೃಷಿ ಕಾರ್ಮಿಕರ ಮಕ್ಕಳಿಗೆ ಶೇ 50ರಷ್ಟು ಸೀಟುಗಳನ್ನು ಮೀಸಲಿಡಲಾಗಿದೆ. ಪ.ಜಾ./ಪ.ಪಂ./ಪ್ರ.ವರ್ಗ-1 ರ ಅಭ್ಯರ್ಥಿಗಳು ಶೇ 40ರಷ್ಟು ಅಂಕಗಳಿಸಿ ತೇರ್ಗಡೆಯಾಗಿರಬೇಕು.

**ಪಶುಸಂಗೋಪನಾ ಪಾಲಿಟೆಕ್ನಿಕ್ ಎಲ್ಲೆಲ್ಲಿವೆ?**

ತಿಪಟೂರು ತಾಲ್ಲೂಕಿನ ಕೊನೆಹಳ್ಳಿ, ಶಿಗ್ಗಾಂವ ತಾಲ್ಲೂಕಿನ ಕುನ್ನೂರು, ಹಾಸನ ತಾಲ್ಲೂಕು ಕೋರವಂಗಲ ಕ್ರಾಸ್, ಗುಂಡ್ಲುಪೇಟೆ ತಾಲ್ಲೂಕು ಬರ್ಗಿ ಹಾಗೂ ಶಹಪೂರ ತಾಲ್ಲೂಕು ಡರ್‍ನಹಳ್ಳಿಯ ಪಶುಸಂಗೋಪನಾ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಈ ಪಶುಸಂಗೋಪನಾ ಡಿಪ್ಲೊಮಾ ಕೋರ್ಸ್ ನಡೆಸಲಾಗುತ್ತಿದೆ.

ಪ್ರತಿ ಪಾಲಿಟೆಕ್ನಿಕ್‌ನಲ್ಲಿ 50ರಂತೆ ಒಟ್ಟು 250 ಸೀಟುಗಳು ಲಭ್ಯವಿವೆ. ಈ ಬಾರಿ ಆನ್‌ಲೈನ್‌ನಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು ಅಭ್ಯರ್ಥಿಗಳು ತಮ್ಮ ಆಯ್ಕೆ ಕೇಂದ್ರದ ಆದ್ಯತೆಯನ್ನು ಕಡ್ಡಾಯವಾಗಿ ನಮೂದಿಸಬೇಕಾಗಿರುತ್ತದೆ. ಜುಲೈ 31 ಕೊನೆಯ ದಿನವಾಗಿರುತ್ತದೆ. ವೆಬ್ ವಿಳಾಸ ಹೀಗಿದೆ: www.kvafsu.edu.in/admission.html

ಮೆರಿಟ್-ಕಂ-ರೋಸ್ಟರ್ ಪದ್ಧತಿಯ ಆಧಾರದಲ್ಲಿ ಆನ್‌ಲೈನ್ ಮೂಲಕವೇ ಸೀಟು ಹಂಚಿಕೆ ನಡೆಯಲಿದೆ. ದಾಖಲೆಗಳ ಪರಿಶೀಲನೆಯನ್ನು ಬರುವ ಆಗಸ್ಟ್ 6 ರಿಂದ 8 ರವರೆಗೆ ಬೀದರ್, ಬೆಂಗಳೂರು, ಗದಗ, ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯಗಳು ಮತ್ತು ಮಂಗಳೂರಿನ ಮೀನುಗಾರಿಕೆ ಮಹಾವಿದ್ಯಾಲಯದ ಆವರಣದಲ್ಲಿ ನಡೆಸಲಾಗುವುದು. ಪ್ರಥಮ ಆಯ್ಕೆ ಪಟ್ಟಿಯನ್ನು ಆಗಸ್ಟ್ 23ರಂದು ಪ್ರಕಟಿಸಲಾಗುವುದು. ಪ್ರವೇಶ ಪಡೆದ ಎಲ್ಲಾ ಅಭ್ಯರ್ಥಿಗಳಿಗೆ ಮಾಸಿಕ ₹ 1000 - ಶಿಷ್ಯವೇತನ ನೀಡಲಾಗುತ್ತದೆ.

**ವಿಶೇಷ ಸೂಚನೆ:** ಪಶುಸಂಗೋಪನೆ ಡಿಪ್ಲೊಮಾ ಕೋರ್ಸ್ ಯುವ ಜನತೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವಂತೆ ಅಗತ್ಯ ತರಬೇತಿ ನೀಡುವ ಉದ್ದೇಶವನ್ನು ಹೊಂದಿದೆ. ಸತತವಾಗಿ ಪಶುಸಂಗೋಪನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರೊಂದಿಗೆ ಪಶು ಸಂಬಂಧಿತ ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಜ್ಞಾನವನ್ನು ಪಡೆಯುವಲ್ಲಿ ನೆರವಾಗುತ್ತದೆ. ನೋಂದಾಯಿತ ಪಶುವೈದ್ಯಕೀಯ ವೈದ್ಯರ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಡಿಯಲ್ಲಿ 'ಅಪ್ರಧಾನ ಪಶುವೈದ್ಯಕೀಯ ಸೇವೆಗಳಿಗೆ'ಸೀಮಿತವಾದ ಸೇವೆಗಳನ್ನು ನಿರ್ವಹಿಸಲು ಮಾತ್ರ ಅವಕಾಶವಿರುತ್ತದೆ. ಈ ಕೋರ್ಸ್ ಮುಗಿಸಿದ ಅಭ್ಯರ್ಥಿಗಳಿಗೆ ಯಾವುದೇ ಖಚಿತ ಸರ್ಕಾರಿ ಉದ್ಯೋಗದ ಕುರಿತು ಭರವಸೆ ಇರುವುದಿಲ್ಲ.

ಹೆಚ್ಚಿನ ವಿವರಗಳಿಗೆ ನೋಡಿ: www.kvafsu.edu.in

❖

# ವಿದ್ಯಾರ್ಥಿ ವೇತನ ಕೈಪಿಡಿ

## ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್ಸ್

1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಂದ ಎಚ್‌ಡಿಎಫ್‌ಸಿ ಬ್ಯಾಂಕ್ ಅರ್ಜಿಗಳನ್ನು ಆಹ್ವಾನಿಸಿದೆ.
ಸಮಾಜದ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರತಿಭಾವಂತ ಮತ್ತು ಅಗತ್ಯವಿರುವ ವಿದ್ಯಾರ್ಥಿಗಳಿಗೆವಿದ್ಯಾರ್ಥಿವೇತನ ನೀಡುತ್ತದೆ.

**ಅರ್ಹತೆ:** ವಿದ್ಯಾರ್ಥಿವೇತನವು ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾಗಿದೆ.
ವಿದ್ಯಾರ್ಥಿಗಳು 1 ರಿಂದ 12ನೇ ತರಗತಿಯಲ್ಲಿ ಓದುತ್ತಿರಬೇಕು ಅಥವಾ ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಅಂಡರ್‌ಗ್ರಾಜುಯೇಟ್ ಅಥವಾ ಸ್ನಾತಕೋತ್ತರ (ಸಾಮಾನ್ಯ ಮತ್ತು ವೃತ್ತಿಪರ ಸೇರಿ ) ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಅವರ ಕುಟುಂಬದ ವಾರ್ಷಿಕ ಆದಾಯವು ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.
ತಮ್ಮ ಶಿಕ್ಷಣದ ವೆಚ್ಚವನ್ನು ಭರಿಸಲು ಅಶಕ್ತರಾದವರಿಗೆ, ಮೂರು ವರ್ಷಗಳಲ್ಲಿ ವೈಯಕ್ತಿಕ ಅಥವಾ ಕೌಟುಂಬಿಕ ಬಿಕ್ಕಟ್ಟುಗಳನ್ನು ಅನುಭವಿಸಿದ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು.
ಆರ್ಥಿಕ ಸಹಾಯ: ₹ 75,000ರವರೆಗೆ
ಅರ್ಜಿ ಸಲ್ಲಿಸಲು ಕೊನೆ ದಿನ: 04-09-2024
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/HDFC54

## ರತ್ತಿ ಛಾತ್ರ ಸ್ಕಾಲರ್‌ಶಿಪ್

ಪ್ಯಾನಸೋನಿಕ್ ಲೈಫ್ ಸಲ್ಯೂಷನ್ಸ್ ಇಂಡಿಯಾ (ಪಿಎಲ್‌ಎಸ್‌ಐಎನ್‌ಡಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ)ಯಲ್ಲಿ ಬಿ.ಇ. / ಬಿ. ಟೆಕ್. ಕೋರ್ಸ್‌ಗಳಿಗೆ ದಾಖಲಾಗುತ್ತಿರುವ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ.
**ಅರ್ಹತೆ:** 2024-25ರಲ್ಲಿ ಯಾವುದೇ ಐಐಟಿಗಳಲ್ಲಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಬಿ.ಇ/ಬಿ.ಟೆಕ್ ಕೋರ್ಸ್‌ಗಳಿಗಾಗಿ ಪ್ರವೇಶ ಪಡೆಯಲಿರುವವರಿಗೆ ಮುಕ್ತವಾಗಿದೆ.
ಅರ್ಜಿದಾರರು ತಮ್ಮ 12ನೇ ತರಗತಿ ಪರೀಕ್ಷೆಯನ್ನು ತೇರ್ಗಡೆ ಹೊಂದಿರಬೇಕು ಅಥವಾ ಅಂತಿಮ ಫಲಿತಾಂಶಗಳಿಗಾಗಿ ಎದುರು ನೋಡುತ್ತಿರುವವರಾಗಿರಬೇಕು. ಅರ್ಜಿದಾರರು 12ನೇ ತರಗತಿಯಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ವಾರ್ಷಿಕ ಕುಟುಂಬದ ಆದಾಯವು ಎಲ್ಲಾ ಮೂಲಗಳಿಂದ ₹ 8,00,000ಕ್ಕಿಂತ ಹೆಚ್ಚಿರಬಾರದು.
2024-25 ಬ್ಯಾಚ್‌ನ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು.
**ಆರ್ಥಿಕ ಸಹಾಯ:** ನಾಲ್ಕು ವರ್ಷಗಳವರೆಗೆ ವರ್ಷಕ್ಕೆ ₹ 70, 250
**ಅರ್ಜಿ ಸಲ್ಲಿಸಲು ಕೊನೆ ದಿನ:** 15-08-2024
**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/RCSP56

## ಕೋಟಕ್ ಕನ್ಯಾ ಸ್ಕಾಲರ್‌ಶಿಪ್

ಕೋಟಕ್ ಮಹೀಂದ್ರಾ ಗ್ರೂಪ್ ಕಂಪನೀಸ್, ಕೋಟಕ್ ಎಜುಕೇಶನ್ ಫೌಂಡೇಷನ್ ಶಿಕ್ಷಣ ಮತ್ತು ಜೀವನೋಪಾಯದ ಕುರಿತ ಸಿಎಸ್‌ಆರ್ ಪ್ರಾಜೆಕ್ಟ್‌ನ ಅಡಿಯಲ್ಲಿ, 12ನೇ ತರಗತಿಯ ನಂತರ ವೃತ್ತಿಪರ ಶಿಕ್ಷಣದಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಮುಂದುವರಿಸಲು ಸಹಾಯವಾಗುವಂತೆ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಂದ ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2024-25ಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.
**ಅರ್ಹತೆ:** ಭಾರತದಾದ್ಯಂತದ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಲಭ್ಯವಿರುತ್ತದೆ.
ಅಭ್ಯರ್ಥಿಗಳು 12ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಅಥವಾ ತತ್ಸಮಾನ ಸಿಜಿಪಿಎಯನ್ನು ಗಳಿಸಿರಬೇಕು.
ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ₹ 6,00,000ಕ್ಕಿಂತ ಕಡಿಮೆ ಇರಬೇಕು.
ಮಾನ್ಯತೆ ಪಡೆದ ಎನ್‌ಆರ್‌ಎಫ್/ ಎನ್‌ಎಎಸಿ ಯಂತಹ ಪ್ರತಿಷ್ಠಿತ ಸಂಸ್ಥೆಗಳಲ್ಲಿ 2024-25 ಶೈಕ್ಷಣಿಕ ವರ್ಷದಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಬಿಡಿಎಸ್, ಇಂಟಿಗ್ರೇಟೆಡ್ ಎಲ್‌ಎಲ್‌ಬಿ (5 ವರ್ಷಗಳು), ಬಿ.ಎಸ್‌ಸಿ ನರ್ಸಿಂಗ್, ಬಿ.ಫಾರ್ಮಸಿ, ಇಂಟಿಗ್ರೇಟೆಡ್ ಬಿಎಸ್-ಎಂಎಸ್/ಬಿಎಸ್-ರಿಸರ್ಚ್ ಇನ್ ಐಎಸ್‌ಇಆರ್, ಐಐಎಸ್‌ಸಿ (ಬೆಂಗಳೂರು) ಅಥವಾ (ಡಿಸೈನ್, ಆರ್ಕಿಟೆಕ್ಚರ್, ಇತ್ಯಾದಿ) ಇತರ ವೃತ್ತಿಪರ ಕೋರ್ಸ್‌ಗಳಿಗೆ ಮೊದಲ ವರ್ಷದ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರು ಅರ್ಹರಾಗಿರುತ್ತಾರೆ.
**ಆರ್ಥಿಕ ಸಹಾಯ:** ವರ್ಷಕ್ಕೆ ₹ 1.5* ಲಕ್ಷ
**ಅರ್ಜಿ ಸಲ್ಲಿಸಲು ಕೊನೆ ದಿನ:** 30-09-2024
**ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/KKGS3

❖

# ಆರ್ಕಿಟೆಕ್ಚರ್‌ಗೆ ಇರುವ ಅವಕಾಶಗಳೇನು?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

**ಆರ್ಕಿಟೆಕ್ಚರ್‌ಗೆ ಇರುವ ಅವಕಾಶಗಳ ಬಗ್ಗೆ ತಿಳಿಸಿ. ಹೆಸರು, ಊರು ತಿಳಿಸಿಲ್ಲ.**

ದೇಶದ ತ್ವರಿತವಾದ ಬೆಳವಣಿಗೆ ಮತ್ತು ಅಭಿವೃದ್ಧಿಯಿಂದ, ಆರ್ಕಿಟೆಕ್ಚರ್ ಕ್ಷೇತ್ರಕ್ಕೆ ಉತ್ತಮವಾದ ಬೇಡಿಕೆಯಿದೆ. ಸೃಜನಶೀಲತೆ, ಕಲ್ಪನಾ ಶಕ್ತಿ, ವಿನ್ಯಾಸದ ಕೌಶಲ, ಸಮಸ್ಯೆಗಳನ್ನು ಬಗೆಹರಿಸುವ ಕೌಶಲ, ಯೋಜನೆಯ ನಿರ್ವಹಣೆ, ಸಂವಹನ, ಅಂತರ್-ವೈಯಕ್ತಿಕ ನೈಪುಣ್ಯ ಹಾಗೂ ಆರ್ಕಿಟೆಕ್ಚರ್ ವಿಷಯದಲ್ಲಿ ಆಸಕ್ತಿಯಿರುವ ವಿದ್ಯಾರ್ಥಿಗಳು ಪಿಯುಸಿ ನಂತರ ಬ್ಯಾಚೆಲರ್ ಆರ್ಕಿಟೆಕ್ಚರ್ (ಬಿ.ಆರ್ಕ್) ಕೋರ್ಸ್ ಅನ್ನು ನ್ಯಾಷನಲ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಆರ್ಕಿಟೆಕ್ಚರ್ (ನಾಟಾ) ಪ್ರವೇಶ ಪರೀಕ್ಷೆಯ ಮೂಲಕ ಮಾಡಬಹುದು.

ಈ ಕೋರ್ಸ್ ನಂತರ ಆರ್ಕಿಟೆಕ್ಟ್, ಅರ್ಬನ್ ಪ್ಲಾನಿಂಗ್, ಇಂಟಿರಿಯರ್ ಡಿಸೈನಿಂಗ್, ಲ್ಯಾಂಡ್‌ಸ್ಕೇಪ್ ಡಿಸೈನಿಂಗ್, ಪ್ರಾಪರ್ಟಿ ಡೆವಲಪ್‌ಮೆಂಟ್ ಮುಂತಾದ ಕ್ಷೇತ್ರಗಳ ಪ್ರಮುಖ ಸಂಸ್ಥೆಗಳಲ್ಲಿ ವೃತ್ತಿಯನ್ನು ರೂಪಿಸಿಕೊಳ್ಳಬಹುದು. ಉನ್ನತ ಶ್ರೇಣಿಯ ಕಾಲೇಜುಗಳಲ್ಲಿ ಕ್ಯಾಂಪಸ್ ನೇರ ನೇಮಕಾತಿಯ ಸೌಲಭ್ಯವಿರುತ್ತದೆ. ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದಲ್ಲಿಯೂ ಅವಕಾಶಗಳಿವೆ. ಈ ಕ್ಷೇತ್ರದಲ್ಲಿ ಅನುಭವವನ್ನು ಗಳಿಸಿದ ನಂತರ ಸ್ವಂತವಾಗಿ ಪ್ರಾಕ್ಟೀಸ್ ಮಾಡಬಹುದು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

## ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

**ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು**
**ಪ್ರಶ್ನೋತ್ತರ:-**

**12) ಭಾರತದ ಭೂಗಡಿ ಹಾಗೂ ಜಲಗಡಿ(ಕರಾವಳಿ) ಎಷ್ಟಿದೆ?**
**ಉತ್ತರ:-** ಭಾರತವು 15200 ಕಿ.ಮೀ ಉದ್ದದ ಭೂಗಡಿಯನ್ನು, 6100 ಕಿ.ಮೀ ಉದ್ದದ ಕರಾವಳಿಯನ್ನು ಹೊಂದಿದೆ.

**13) ಭಾರತದ ಸುತ್ತಮುತ್ತ ಇರುವ ನೆರೆ ರಾಷ್ಟ್ರಗಳನ್ನು ಹೆಸರಿಸಿ.**
**ಉತ್ತರ:-** ಪಾಕಿಸ್ತಾನ, ಅಫ್ಘಾನಿಸ್ತಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾದೇಶ, ಮ್ಯಾನ್ಮಾರ್, ಶ್ರೀಲಂಕ, ಮಾಲ್ದೀವ್ಸ್

**14) ಭಾರತ ಮತ್ತು ಪಾಕಿಸ್ತಾನದ ನಡುವೆ ಎಳೆದಿರುವ ರೇಖೆ ಯಾವುದು?**
**ಉತ್ತರ:-** ರ್‍ಯಾಡ್‌ಕ್ಲಿಫ್ ಲೈನ್

**15) ಭಾರತ ಮತ್ತು ಚೀನಾದ ನಡುವೆ ಎಳೆದಿರುವ ರೇಖೆ ಯಾವುದು?**
**ಉತ್ತರ:-** 'ಮ್ಯಾಕ್‌ಮೋಹನ್' (McMohan line) ರೇಖೆ

**16) ಭಾರತ ಮತ್ತು ಅಫ್ಘಾನಸ್ಥಾನದ ನಡುವೆ ಎಳೆದಿರುವ ರೇಖೆ ಯಾವುದು?**
**ಉತ್ತರ:-** 'ಡ್ಯೂರ್‍ಯಾಂಡ್' (Durand line) ರೇಖೆ

**17) ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪ ವಿಭಾಗಳ ಹೆಸರನ್ನು ತಿಳಿಸಿ**
**ಉತ್ತರ:-** ಭಾರತದಲ್ಲಿರುವ ನಾಲ್ಕು ಪ್ರಧಾನ ಭೂಸ್ವರೂಪಗಳು
1) ಉತ್ತರದ ಪರ್ವತಗಳು
2) ಉತ್ತರದ ಮಹಾ ಮೈದಾನ
3) ಪರ್ಯಾಯ ಪ್ರಸ್ಥಭೂಮಿ
4) ಕರಾವಳಿ ಮೈದಾನಗಳು

**18) ಭಾರತದಲ್ಲಿರುವ ಉತ್ತರದ ಪರ್ವತದ ಬಗ್ಗೆ ಬರೆಯಿರಿ**
**ಉತ್ತರ:-** ಭಾರತದ ಉತ್ತರದಲ್ಲಿರುವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಜಗತ್ತಿನಲ್ಲಿಯೇ ಅತಿ ಎತ್ತರವಾದ ಶಿಖರಗಳನ್ನು, ಆಳವಾದ ಕಣಿವೆಗಳನ್ನು, ಹಿಮನದಿ ಮುಂತಾದವುಗಳನ್ನು ಹೊಂದಿದೆ. ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ಅರುಣಾಚಲದವರೆಗೆ ಸುಮಾರು 2500 ಕಿಮೀ ಉದ್ದವಾಗಿ ಹಬ್ಬಿದೆ. ಇದು ಮಡಿಕೆ ಪರ್ವತವಾಗಿದ್ದು, ಮೂರು ಪ್ರಮುಖ ಶ್ರೇಣಿಗಳನ್ನು ಒಳಗೊಂಡಿದೆ. ಇವುಗಳೆಂದರೆ (ಅ) ಶಿವಾಲಿಕ್ ಶ್ರೇಣಿ (ಹಿಮಾಲಯದ ಪಾದ ಬೆಟ್ಟಗಳು), (ಬ) ಹಿಮಾಚಲ (ಮಧ್ಯ ಹಿಮಾಲಯ),(ಕ) ಮಹಾಹಿಮಾಲಯ (ಹಿಮಾದ್ರಿ)

**19) ಹಿಮಾಲಯದ ಮಹತ್ವವೇನು?**
**ಉತ್ತರ:** ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ.
**ಇದರ ಮಹತ್ವ ಹೀಗಿವೆ**
1) ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2) ಉತ್ತರ ಏಷಿಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಹಿಡಿಯುತ್ತವೆ.
3) ನದಿಗಳ ಉಗಮ ಪ್ರದೇಶವಾಗಿವೆ. ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
4) ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
5) ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
6) ಪ್ರವಾಸೋದ್ಯಮ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ.........ಇತ್ಯಾದಿ

**20) ಹಿಮಾಲಯದಲ್ಲಿರುವ ಶಿವಾಲಿಕ್ಸ್ ಶ್ರೇಣಿಯ ಬಗ್ಗೆ ಬರೆಯಿರಿ**
**ಉತ್ತರ:-** ಇದು ಹಿಮಾಲಯ ಪರ್ವತದಲ್ಲಿ ಇತ್ತೀಚಿಗೆ ನಿರ್ಮಿತವಾದದ್ದು, ಶಿವಾಲಿಕ್ ಶ್ರೇಣಿಯು ಹಿಮಾಲಯದಲ್ಲಿ ಅತ್ಯಂತ ದಕ್ಷಿಣದಲ್ಲಿರುವ ಸರಣಿ ಹಾಗೂ ಅತಿಕಡಿಮೆ ಎತ್ತರವನ್ನು ಹೊಂದಿದೆ. ಇದನ್ನು ಹಿಮಾಲಯದ ಪಾದ ಬೆಟ್ಟಗಳು ಎಂದು ಕರೆಯುತ್ತಾರೆ.

ಇಲ್ಲಿ ಸಮತಟ್ಟಾದ ಕಿರಿದಾದ ಸಮ್ಮತಟ್ಟಾದ ಮೈದಾನಗಳಿವೆ ಈ ಮೈದಾನಗಳನ್ನು ಡೂನ್‌ಗಳು ಎಂದು ಕರೆಯುವರು. ಉದಾ : ಡೆಹರಾಡೂನ್, ಕೋಟಾ, ಪಾಟ್ಲಿ ಚೌಕಾಂಬಾ, ಉದಾಂಪೂರ ಮತ್ತು ಕೋಟ್ಲಾಗಳು. ಇವು ಸಮುದ್ರದಿಂದ 600–1500 ಮಿ.ಗಳಷ್ಟು ಎತ್ತರದಲ್ಲಿವೆ.

**21) ಹಿಮಾಚಲ/ ಮಧ್ಯ ಹಿಮಾಲಯದ ಬಗ್ಗೆ ಬರೆಯಿರಿ**
**ಉತ್ತರ:-** ಹಿಮಾಚಲ (ಮಧ್ಯ ಹಿಮಾಲಯ)ವು ಮಹಾ ಹಿಮಾಲಯ ಮತ್ತು ಶಿವಾಲಿಕ್ ಬೆಟ್ಟಗಳ ನಡುವೆ ಸುಮಾರು 3600 ಮೀಟರ್‌ಗಳಿಂದ 4500 ಮೀಟರ್‌ಗಳಷ್ಟು ಸರಾಸರಿ ಎತ್ತರವನ್ನು ಹೊಂದಿವೆ. ಇವು 60 ರಿಂದ 80 ಕಿ.ಮೀ ಅಗಲವಾಗಿವೆ. ಇಲ್ಲಿ ಅನೇಕ ಸಮಾನಾಂತರ ಪರ್ವತ ಶ್ರೇಣಿಗಳಿವೆ. ಉದಾಹರಣೆಗೆ ಪೀರ್‌ಪಂಜಾಲ, ಮಹಾಭಾರತ ಶ್ರೇಣಿ, ನಾಗತಿಬ್ಬ, ಮಸ್ಸೋರಿ ಇತ್ಯಾದಿ. ಕಂಗ್ರಾ, ಕುಲು ಇವು ಪ್ರಸಿದ್ಧ ಕಣಿವೆಗಳಾಗಿವೆ. ಶಿಮ್ಲಾ, ಮಸ್ಸೂರಿ, ನೈನಿತಾಲ್, ರಾಣಿಖೇಟ್, ಚಕ್ರಾತ ಮತ್ತು ಡಾರ್ಜಿಲಿಂಗ್ ಮೊದಲಾದ ಗಿರಿಧಾಮಗಳಿವೆ.

**22) ಮಹಾ ಹಿಮಾಲಯ (ಹಿಮಾದ್ರಿ) ಕುರಿತು ಬರೆಯಿರಿ**
**ಉತ್ತರ:** ಇದು ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿಯಾಗಿದೆ. ಇದು ಸಂಪೂರ್ಣವಾಗಿ ಹಿಮದಿಂದ ಆವೃತವಾಗಿದೆ. ಆದುದರಿಂದ ಇದನ್ನು ಹಿಮಾದ್ರಿ ಎಂದು ಕರೆಯುತ್ತಾರೆ. ಸಮುದ್ರ ಮಟ್ಟದಿಂದ ಈ ಶ್ರೇಣಿಯು 6000 ಮೀಟರ್‌ದಿಂದ 8000 ಮೀಟರ್‌ಗಿಂತಲೂ ಹೆಚ್ಚು ಎತ್ತರವಾಗಿದೆ. ಹಿಮಾಲಯದಲ್ಲಿ ಅತ್ಯಂತ ಎತ್ತರವಾದ ಶಿಖರಗಳು ಇವೆ. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ್ (8848 ಮೀ) ನೇಪಾಳ ಮತ್ತು ಟಿಬೆಟ್ ಮಧ್ಯದಲ್ಲಿದೆ. ಈ ಸರಣಿಯಲ್ಲಿರುವ ಇತರೆ ಮುಖ್ಯ ಶಿಖರಗಳೆಂದರೆ ಕಾಂಚನ ಗಂಗಾ, ಧವಳಗಿರಿ, ನಂದಾದೇವಿ ಗೌರಿಶಂಕರ. ಇವು ಅನೇಕ ಹಿಮನದಿಗಳನ್ನು ಹೊಂದಿವೆ. ಅವುಗಳಲ್ಲಿ ಗಂಗೋತ್ರಿ ಪ್ರಸಿದ್ಧವಾಗಿದ್ದು ಗಂಗಾನದಿಯ ಉಗಮ ಸ್ಥಾನವಾಗಿದೆ. ಕಾಶ್ಮೀರದ ಬುರ್ಜಿಲ್, ಜೋಜಿಲಾ, ಹಿಮಾಚಲ ಪ್ರದೇಶದ ಬಾರಾಲಾಚಲಾ, ಮುಂತಾದ ಕಣಿವೆ ಮಾರ್ಗಗಳು ಉತ್ತಮ ಸಂಚಾರ ಸೌಲಭ್ಯವನ್ನು ಒದಗಿಸಿರುವುದಲ್ಲದೆ, ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರಗಳಾಗಿವೆ.

ಇಲ್ಲಿ ಮಹಾ ಹಿಮಾಲಯ ಸರಣಿಯ ಉತ್ತರಕ್ಕಿರುವ ಮಡಿಕೆ ಪರ್ವತಗಳನ್ನು ಹೊರ ಹಿಮಾಲಯವೆಂದು ಕರೆಯುತ್ತಾರೆ. ಇದರಲ್ಲಿ ಕಾರಾಕೋರಮ್ ಪರ್ವತ ಶ್ರೇಣಿ ಹಾಗೂ ಕೈಲಾಸ ಪರ್ವತಗಳಿವೆ. ಗಾಡ್ವಿನ್‌ಆಸ್ಟಿನ್ ಅಥವಾ K2 ಎಂಬುದು ಭಾರತದಲ್ಲಿ ಅತಿ ಎತ್ತರವಾದ (8,611ಮೀ) ಶಿಖರವಾಗಿದೆ. 'ಲಡಾಖ್'' ಪ್ರಸ್ಥಭೂಮಿಯೂ ಇದೇ ಪ್ರದೇಶದಲ್ಲಿ ಕಂಡು ಬರುತ್ತದೆ

**23) ಸಟ್ಲೇಜ್ ಗಂಗಾ ಮೈದಾನಗಳೆಂದು ಯಾವುದನ್ನು ಕರೆಯುತ್ತಾರೆ?**
**ಉತ್ತರ:-** ಉತ್ತರ ಭಾರತದ ಮಹಾ ಮೈದಾನವನ್ನು ಸಟ್ಲೇಜ್ ಗಂಗಾ ಮೈದಾನವೆಂದು

**24) ಉತ್ತರ ಭಾರತದ ಮಹಾ ಮೈದಾನಗಳನ್ನು ಸಂಚಯನ ಮೈದಾನಗಳೆನ್ನಲು ಕಾರಣವೇನು?**
**ಉತ್ತರ:-** ಉತ್ತರ ಭಾರತದ ಮಹಾ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವುದರಿಂದ ಇವುಗಳನ್ನು ಸಂಚಯನ ಮೈದಾನಗಳೆನ್ನುವರು

**25) ಉತ್ತರದ ಮಹಾ ಮೈದಾನಗಳ ವಿಸ್ತರಣೆಯ ಬಗ್ಗೆ ಬರೆಯಿರಿ.**
**ಉತ್ತರ:-** ಈ ಮೈದಾನವು ಪಶ್ಚಿಮದಲ್ಲಿ ಸಿಂಧೂ ನದಿಯ ಮೈದಾನದಿಂದ ಪೂರ್ವದಲ್ಲಿ ಬ್ರಹ್ಮಪುತ್ರ ಕಣಿವೆಯ ತನಕ ವಿಸ್ತರಿಸಿದೆ, ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 2400 ಕಿ.ಮೀ ಉದ್ದವಾಗಿರುವ ಈ ಮೈದಾನವು 70ರಿಂದ 500 ಕಿ.ಮೀ ಅಗಲವಾಗಿದೆ. *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

## II PUC MATHS

## Inverse trigonometric functions

**20. Show that $\sin^{-1}x+\cos^{-1}x=\frac{\pi}{2}$; for $-1\le x\le 1$**

Soln :– Let, $\theta=\sin^{-1}x$;

when $-\frac{\pi}{2}\le\theta\le\frac{\pi}{2}$ & $-1\le x\le 1$

$\therefore \sin\theta = x$;

$\Rightarrow \cos\left(\frac{\pi}{2}-\theta\right)=x \quad \left(\because \sin\theta=\cos\left(\frac{\pi}{2}-\theta\right)\right)$

$\Rightarrow \frac{\pi}{2}-\theta=\cos^{-1}x \quad \left(\because 0\le\left(\frac{\pi}{2}-\theta\right)\le\pi\right)$

$\Rightarrow \frac{\pi}{2}-\sin^{-1}x=\cos^{-1}x \quad (\because \theta=\sin^{-1}x)$

$\Rightarrow \frac{\pi}{2}=\sin^{-1}x+\cos^{-1}x$

Hence, $\cos^{-1}x+\sin^{-1}x=\frac{\pi}{2}$

**21. Evaluate $\tan\left[\sin^{-1}\left(-\frac{1}{\sqrt5}\right)\right]$**

Soln :– Let $\sin^{-1}\left(-\frac{1}{\sqrt5}\right)=\theta$

$\therefore \sin\theta=-\frac{1}{\sqrt5}$ & $-\frac{\pi}{2}<\theta<0$



But $\sin\theta=\frac{MP}{OP}=-\frac{1}{\sqrt5}$

hence, $MP=-1$ and $OP=\sqrt5$

$\therefore OM=\sqrt{OP^2-MP^2}=\sqrt{5-1}=2$

Hence, $\tan\theta=\frac{MP}{OM}=-\frac{1}{2}$

$\therefore \tan\left[\sin^{-1}\left(-\frac{1}{\sqrt5}\right)\right]=-\frac{1}{2}$

**22. Evaluate $\cos\left[\tan^{-1}\frac{15}{8}-\sin^{-1}\frac{12}{13}\right]$**

Soln :– Let, $\tan^{-1}\frac{15}{8}=\alpha$,

$\sin^{-1}\frac{12}{13}=\beta$

$\therefore \tan\alpha=\frac{15}{8}$, $\sin\beta=\frac{12}{13}$

Both $\alpha$ and $\beta$ lie between 0 and $\frac{\pi}{2}$



From the above fig; we find that

$\therefore \cos\alpha=\frac{8}{17}$, $\sin\alpha=\frac{15}{17}$ & $\cos\beta=\frac{15}{13}$

Now consider,

$\cos\left[\tan^{-1}\frac{15}{8}-\sin^{-1}\frac{12}{13}\right]=\cos(\alpha-\beta)$

$\Rightarrow \cos\alpha\cos\beta+\sin\alpha\sin\beta$

$\Rightarrow \frac{8}{17}\cdot\frac{15}{13}+\frac{15}{17}\cdot\frac{12}{13}=\frac{220}{221}$

**23. Prove that**

$$\sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$$

Soln :–Let $\sin^{-1}\frac{3}{5}=\alpha$,

so that $\sin\alpha=\frac{3}{5}$ and $\cos^{-1}\frac{12}{13}=\beta$,

so that $\cos\beta=\frac{12}{13}$



From the above fig; we find that

$\therefore \cos(\alpha+\beta)=\frac{4}{5}$ and $\sin\beta=\frac{5}{13}$

Now consider,

$\cos(\alpha+\beta)=\cos\alpha\cos\beta-\sin\alpha\sin\beta$

$=\frac{4}{5}\cdot\frac{12}{13}-\frac{3}{5}\cdot\frac{5}{13}$

$=\frac{48}{65}-\frac{15}{65}=\frac{33}{65}$

$\therefore \alpha+\beta=\cos^{-1}\frac{33}{65}$

$\Rightarrow \sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$

**24. If $\tan^{-1}x+\tan^{-1}y+\tan^{-1}z=\pi$, prove that $x+y+z=xyz$.** (Contd....)

## ‘ಮಿಮ್ಸ್’ನಲ್ಲಿ ಅಂಗರಚನಾಶಾಸ್ತ್ರ ಅಧ್ಯಯನಕ್ಕೆ ಹೈಟೆಕ್ ಸಾಧನ

# ವಿದ್ಯಾರ್ಥಿಗಳಿಗೆ ‘ವಿಡಿಟಿ’ ವರ!

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಮಂಡ್ಯ: ವೈದ್ಯಕೀಯ ವಿದ್ಯಾರ್ಥಿಗಳು ಮಾನವ ಅಂಗರಚನಾಶಾಸ್ತ್ರ ಮತ್ತು ಶಸ್ತ್ರಚಿಕಿತ್ಸಾ ತಂತ್ರಗಳನ್ನು ಕಲಿಯಲು ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಮೃತದೇಹಗಳ ಕೊರತೆ ಕಾಡುತ್ತಿದೆ. ಈ ಬರ ನೀಗಿಸಲು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ (ಮಿಮ್ಸ್) ‘3ಡಿ’ ತಂತ್ರಜ್ಞಾನ ಆಧಾರಿತ ‘ವರ್ಚುವಲ್ ಡಿಸೆಕ್ಷನ್ ಟೇಬಲ್’ (ವಿ.ಡಿ.ಟಿ) ಅಳವಡಿಸಿದ್ದು, ವಿದ್ಯಾರ್ಥಿಗಳ ಪಾಲಿಗೆ ವರವಾಗಿದೆ.

ದಾನ ಮಾಡಿದವರ ಮೃತದೇಹಗಳನ್ನು ಸಂರಕ್ಷಿಸಿಟ್ಟುಕೊಂಡು, ಮಾನವನ ಅಂಗರಚನೆಯನ್ನು ಅಧ್ಯಯನ ಮಾಡುವುದು ಇದುವರೆಗಿನ ಪದ್ಧತಿ. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್.ಎಂ.ಸಿ) ಪ್ರಕಾರ 10 ವಿದ್ಯಾರ್ಥಿಗಳಿಗೆ ಒಂದು ಮೃತದೇಹ ಲಭ್ಯವಿರಬೇಕು. ಆದರೆ, ಬಹುತೇಕ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೃತದೇಹಗಳು ಲಭ್ಯವಿಲ್ಲ.

ಈ ಹಿನ್ನೆಲೆಯಲ್ಲಿ, ‘ಸಿಮ್ಯುಲೇಟೆಡ್ ವರ್ಚುವಲ್ ಲ್ಯಾಬ್’ ತೆರೆಯುವಂತೆ ಎನ್.ಎಂ.ಸಿ. ಈಚೆಗೆ ಸೂಚಿಸಿದ ಪ್ರಕಾರ ಮಂಡ್ಯದ ‘ಮಿಮ್ಸ್’ ಕಾಲೇಜಿನಅಂಗ ರಚನಾಶಾಸ್ತ್ರ ವಿಭಾಗದಲ್ಲಿ ₹2.80 ಕೋಟಿ ವೆಚ್ಚದ ‘ವರ್ಚುವಲ್ ಡಿಸೆಕ್ಷನ್ ಟೇಬಲ್’ ಅನ್ನು ಅಳವಡಿಸಲಾಗಿದೆ.

**ಏನಿದು ವಿ.ಡಿ.ಟಿ?:** ‘ಸುಧಾರಿತ ತಂತ್ರಜ್ಞಾನದ ಟೇಬಲ್ ಆಕಾರದ ಡಿಜಿಟಲ್ ಪರದೆಯಲ್ಲಿ ‘ಲೈಫ್ ಸೈಜ್’ನಲ್ಲಿ ಮಾನವ ದೇಹದ ಅಂಗರಚನೆಗಳು ನೈಜ ರೀತಿಯಲ್ಲಿ ಪ್ರದರ್ಶನಗೊಳ್ಳುತ್ತವೆ. ಈ ‘ಸ್ಪರ್ಶ ಪರದೆ’ಯಲ್ಲಿ ಮೂಡುವ ವರ್ಚುವಲ್ ಮಾದರಿಗಳನ್ನು 360 ಡಿಗ್ರಿಯಲ್ಲಿ ತಿರುಗಿಸಿಕೊಂಡು ಅಂಗರಚನಾ ಶಾಸ್ತ್ರವನ್ನು ಅನ್ವೇಷಿಸಲು ಮತ್ತು ಅಧ್ಯಯನ ಮಾಡಲು ಸಾಧ್ಯ. ಈ ತಂತ್ರಜ್ಞಾನವು ಡಿಜಿಟಲ್ ಸ್ವರೂಪದಲ್ಲಿ ಸಾಂಪ್ರದಾಯಿಕ ಶವ ಛೇದನದ ಅನುಭವವನ್ನು ಕಲ್ಪಿಸುತ್ತದೆ’ ಎನ್ನುತ್ತಾರೆ ‘ಮಿಮ್ಸ್’ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಗೀತಾಂಜಲಿ.

‘ವಿಭಾಗದಲ್ಲಿ ಮೊದಲ ಬಾರಿ ಶವದ ಅಂಗಾಂಗಗಳನ್ನು ಛೇದನ ಮಾಡಿ ಅಧ್ಯಯನ ಮಾಡುವಾಗ ಭಯವಾಗಿತ್ತು. ಈಗ ‘ವಿಡಿಟಿ’ ಒದಗಿಸಿರುವ ‘ಡಿಜಿಟಲ್ ಶವ’ದ ಅಂಗಾಂಗಗಳನ್ನು ಸುಲಭವಾಗಿ ಛೇದನ ಮಾಡಿ, ಆಳವಾದ ಅಧ್ಯಯನ ಮಾಡುತ್ತಿದ್ದೇವೆ’ ಎಂದು ವಿದ್ಯಾರ್ಥಿನಿಯರಾದ ಪುಣ್ಯಾ, ಪೂರ್ಣಿಮಾ, ಸೃಷ್ಟಿ ಅಭಿಪ್ರಾಯಪಟ್ಟರು.

‘ಏಕಕಾಲದಲ್ಲಿ ಮೂರು ಪರದೆಗಳಲ್ಲಿ ಮೂಡುವ ಚಿತ್ರ ಮತ್ತು ವಿಡಿಯೊಗಳು ಸ್ಪಷ್ಟವಾಗಿ ಕಾಣುತ್ತವೆ. ದೇಹದ ವಿವಿಧ ಪದರಗಳನ್ನು ಜೂಮ್ ಮಾಡಿ, ವಿವಿಧ ದಿಕ್ಕುಗಳಲ್ಲಿ ತಿರುಗಿಸಿ ಅಧ್ಯಯನ ಮಾಡಬಹುದು’ ಎಂದು ಹೇಳಿದರು.

**ಕೋವಿಡ್ ವೇಳೆ ಶವಗಳ ಕೊರತೆ:** ‘ಕೋವಿಡ್ ಸಂದರ್ಭ ಸೋಂಕು ಹರಡಬಾರದೆಂಬ ಕಾರಣಕ್ಕೆ ಮೃತದೇಹಗಳನ್ನು ಸುಡಲಾಗಿತ್ತು. ಆಗ ಅಧ್ಯಯನಕ್ಕೆ ಮೃತದೇಹಗಳ ಕೊರತೆ ತೀವ್ರವಾಗಿ ಕಾಡಿತು. ಪೋಷಕರು ದೇಹದಾನಕ್ಕೆ ನೋಂದಣಿ ಮಾಡಿಕೊಂಡಿದ್ದರೂ, ಸತ್ತ ಸಂದರ್ಭದಲ್ಲಿ ಅವರ ಮಕ್ಕಳು ದೇಹ ಕೊಡಲು ಒಪ್ಪುವುದಿಲ್ಲ. ದೇಹದಾನದ ಜಾಗೃತಿ ಕೊರತೆ ಸೇರಿದಂತೆ ಹಲವು ಕಾರಣಗಳಿಂದ ಮೃತದೇಹಗಳ ಕೊರತೆ ಕಾಡುತ್ತಿದೆ’ ಎನ್ನುತ್ತಾರೆ ಹುಬ್ಬಳ್ಳಿಯ ‘ಕಿಮ್ಸ್’ ಕಾಲೇಜಿನ ಪ್ರಾಧ್ಯಾಪಕರು.

ಮಂಡ್ಯದ ‘ಮಿಮ್ಸ್’ ಕಾಲೇಜಿನಲ್ಲಿ ‘ವರ್ಚುವಲ್ ಡಿಸೆಕ್ಷನ್ ಟೇಬಲ್’ ಮೂಲಕ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವ ಸಹ ಪ್ರಾಧ್ಯಾಪಕಿ ಡಾ.ಗೀತಾಂಜಲಿ

### ‘ರಾಸಾಯನಿಕಗಳ ವಾಸನೆಯಿಲ್ಲ’

‘ವರ್ಚುವಲ್ ಡಿಸೆಕ್ಷನ್ ಟೇಬಲ್ ವಿದ್ಯಾರ್ಥಿಗಳಿಗೆ ಅಗತ್ಯವಿರುವಷ್ಟು ಬಾರಿ ಕಾರ್ಯವಿಧಾನಗಳನ್ನು ಪುನರಾವರ್ತಿಸಲು ಅನುವು ಮಾಡುತ್ತದೆ. ಇದು ಶವಗಳ ನಿರಂತರ ಸಂಗ್ರಹಣೆಯ ಅಗತ್ಯವನ್ನು ಕಡಿಮೆ ಮಾಡುತ್ತದೆ’ ಎಂದು ‘ಮಿಮ್ಸ್’ ಕಾಲೇಜಿನ ಅಂಗರಚನಾಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ತ್ರಿನೇಶ್‌ಗೌಡ ತಿಳಿಸಿದರು.

‘ಮೃತದೇಹವನ್ನು ಮುಂದಿಟ್ಟುಕೊಂಡು ಅಧ್ಯಯನ ಮಾಡುವಾಗ ಸೋಂಕಿನ ಅಪಾಯವಿರುತ್ತದೆ. ಈ ಡಿಜಿಟಲ್ ಸಾಧನದಲ್ಲಿ ವ್ಯವಹರಿಸುವಾಗ ರಾಸಾಯನಿಕಗಳ ಅಹಿತಕರ ವಾಸನೆ ಇರುವುದಿಲ್ಲ. ಮೊದಲ ವರ್ಷದ ವಿದ್ಯಾರ್ಥಿಗಳು ಭಯವಿಲ್ಲದೆ ಮಾನವ ಶರೀರವನ್ನು ಅಧ್ಯಯನ ಮಾಡಬಹುದು’ ಎಂದರು.

> ಮಿಮ್ಸ್‌ನಲ್ಲಿ 28 ಮೃತದೇಹಗಳನ್ನು ಸಂರಕ್ಷಿಸಿಡಲಾಗಿದ್ದು, 195 ಮಂದಿ ದೇಹದಾನಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ
> **ಡಾ.ನರಸಿಂಹಸ್ವಾಮಿ,** ನಿರ್ದೇಶಕ, ಮಿಮ್ಸ್, ಮಂಡ್ಯ

### ಮುಖ್ಯಾಂಶಗಳು

- ಮಿಮ್ಸ್‌ನಲ್ಲಿ ₹2.80 ಕೋಟಿ ಮೌಲ್ಯದ ವಿಡಿಟಿ ಅಳವಡಿಕೆ
- ಭಯ ನಿವಾರಿಸುವ ‘ವರ್ಚುವಲ್ ಡಿಸೆಕ್ಷನ್ ಟೇಬಲ್’

# ‘ದರೋಡೆ ತಡೆಗೆ ಸೇನೆ ಬರುವ ಕಾಲ ಬರುತ್ತೆ’

## ಡಿ.ಕೆ. ಶಿವಕುಮಾರ್‌ಗೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ತಿರುಗೇಟು

ಪ್ರಜಾವಾಣಿ ವಾರ್ತೆ

ಹಾಸನ: ‘ರಾಜ್ಯದಲ್ಲಿ ದರೋಡೆ ನಿಲ್ಲಿಸಲು ಸೇನೆ ಬರುವ ಕಾಲ ಬರುತ್ತದೆ’ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

‘ಕುಮಾರಸ್ವಾಮಿ ಇಲ್ಲಿ ಏಕೆ ಬರುತ್ತಾರೆ. ಅವರು ಬಂದರೆ ಏನೂ ಪ್ರಯೋಜನವಾಗಲ್ಲ. ಮಿಲಿಟರಿ ಕರೆದುಕೊಂಡು ಬರಬೇಕಿತ್ತು’ ಎಂಬ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಭಾನುವಾರ ಮೇಲಿನಂತೆ ಪ್ರತಿಕ್ರಿಯಿಸಿದರು.

‘ಅವರು ಏಕೆ ಆ ರೀತಿ ಹೇಳಿಕೆ ಕೊಟ್ಟರು ಎಂದು ಯೋಚನೆ ಮಾಡಿದೆ. ದರೋಡೆ ಮಾಡುವುದನ್ನು ನಿಲ್ಲಿಸಲು ಮಿಲಿಟರಿ ಕರೆದುಕೊಂಡು ಬನ್ನಿ ಎಂದಿದ್ದಾರೆ. ಮಿಲಿಟರಿ ಬರುವ ಕಾಲ ಬರುತ್ತೆ, ಆಗ ಕರೆದುಕೊಂಡು ಬರೋಣ’ ಎಂದು ತಿರುಗೇಟು ನೀಡಿದರು.

ಸಕಲೇಶಪುರ ತಾಲ್ಲೂಕಿನಲ್ಲಿ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಅವರು, ‘ಸ್ಥಳ ಪರಿಶೀಲನೆ ಮಾಡುವುದು ಜನಪ್ರತಿನಿಧಿಯಾಗಿ ನನ್ನ ಕರ್ತವ್ಯ ಮತ್ತು ಧರ್ಮ. ನಾನು ರಾಜ್ಯಕ್ಕೆ ಬರುತ್ತೇನೆ ಎಂದರೆ ಅವರಿಗೆ ಕೈಕಾಲು ನಡುಗುತ್ತದೆ’ ಎಂದು ಟೀಕಿಸಿದರು.

‘ನಾನು ಡಿಪ್ರೆಷನ್‌ನಲ್ಲಿ ಇರುವಂತೆ ಕಾಣುತ್ತೇನೆ ಎಂದು ಹೇಳಿದ್ದಾರೆ. ಆ ರೀತಿ ಕಾಣುತ್ತೇನಾ? ನನಗೆ ಕೇಂದ್ರ ಸಂಪುಟದಲ್ಲಿ ಸಚಿವ ಸ್ಥಾನ ಸಿಕ್ಕಿರುವುದು, ಒಳ್ಳೆಯ ಖಾತೆಗಳು ಸಿಕ್ಕಿರುವುದನ್ನು ನೋಡಿ, ಅವರಿಗೇ ಡಿಪ್ರೆಷನ್ ಆಗಿದೆ’ ಎಂದು ತಿರುಗೇಟು ನೀಡಿದರು.

‘ದಲಿತರು ಎಂದು ಕರೆಯಬೇಡಿ ಎಂದು ಚರ್ಚೆ ನಡೆದಿದೆ. ಎಷ್ಟು ವರ್ಷದಿಂದ ಅಹಿಂದ ಎಂದು ಹೆಸರು ಇಟ್ಟುಕೊಂಡಿದ್ದೀರಾ? ಅಹಿಂದ ಹೆಸರು ಇಟ್ಟುಕೊಂಡು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಅವಮಾನ ಮಾಡುತ್ತಿದ್ದೀರಿ. ಅವರಿಗೆ ಮೀಸಲಿಟ್ಟಿದ್ದ ಹಣ ಉಪಯೋಗಿಸಿಕೊಂಡಿದ್ದೀರಿ. ದಾನ-ಧರ್ಮ ಮಾಡಿ ಬಂದವರಂತೆ ಇವರು. ಬಹಳ ನೀತಿವಂತರು ಇವರು’ ಎಂದು ಸಿದ್ದರಾಮಯ್ಯ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

‘ಇಲ್ಲಿನ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕುಮಾರಣ್ಣ ಹಾಸನ ಜಿಲ್ಲೆಗೆ ಬರಬೇಕೆಂದು ಕಾರ್ಯಕರ್ತರು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಸಂಸತ್ ಕಲಾಪ ಮುಗಿದ ನಂತರ ಹಾಸನದಲ್ಲಿ ರೇವಣ್ಣ ನೇತೃತ್ವದಲ್ಲಿ ಬೃಹತ್ ಸಮಾವೇಶ ಮಾಡಲು ಯೋಚಿಸಿದ್ದೇನೆ’ ಎಂದು ಕುಮಾರಸ್ವಾಮಿ ಹೇಳಿದರು.

**ಚನ್ನಪಟ್ಟಣದಲ್ಲಿ ಎನ್‌ಡಿಎ ಅಭ್ಯರ್ಥಿ ಸ್ಪರ್ಧೆ:** ‘ಚನ್ನಪಟ್ಟಣ ಉಪ ಚುನಾವಣೆ ಬಗ್ಗೆ ಕೇಂದ್ರ–ರಾಜ್ಯದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಚರ್ಚಿಸುತ್ತೇವೆ. ಸಿ.ಪಿ. ಯೋಗೇಶ್ವರ್ ಅವರಿಗೆ ಗೆಲ್ಲುವ ಅವಕಾಶ ಇದ್ದರೆ, ಅವರಿಗೆ ಟಿಕೆಟ್ ಕೊಡುತ್ತೇವೆ. ಇನ್ನೊಬ್ಬರು ಗೆಲ್ಲುವ ಅವಕಾಶವಿದ್ದರೆ, ಅವರಿಗೆ ಕೊಡುತ್ತೇವೆ. ಒಟ್ಟಾರೆ ಎನ್‌ಡಿಎ ಅಭ್ಯರ್ಥಿ ಸ್ಪರ್ಧಿಸುತ್ತಾರೆ. ನಮ್ಮ ಅಭ್ಯರ್ಥಿ ಗೆಲುವಿಗೆ ಏನು ಬೇಕೋ ಅದನ್ನು ಮಾಡುತ್ತೇವೆ’ ಎಂದು ಪ್ರತಿಕ್ರಿಯಿಸಿದರು.

ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಕೊಲ್ಲಹಳ್ಳಿ ಬಳಿ ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಕುಸಿತ ಉಂಟಾಗಿರುವ ಸ್ಥಳಕ್ಕೆ ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಭೇಟಿ ನೀಡಿ ಪರಿಶೀಲಿಸಿದರು

### ‘ಕಳ್ಳತನಕ್ಕೆ ಜಾತಿ ಇದೆಯಾ’

‘ಈ ಜಾತಿಯವನಾದರೆ ಕಳ್ಳತನ ಮಾಡಬಹುದು, ಈ ಜಾತಿಯವನಾದರೆ ಕಳ್ಳತನ ಮಾಡಬಾರದು ಎಂದು ಸಂವಿಧಾನದಲ್ಲಿ ಇದೆಯಾ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

‘ಈ ಸರ್ಕಾರ ಹಗರಣಗಳಲ್ಲಿ ಸಿಲುಕಿಕೊಂಡಿದೆ. ಹೊರಗಡೆ ಬರಲು ಆಗುತ್ತಿಲ್ಲ. ದಾರಿ ಕಾಣದಾಗಿದೆ. ಎಲ್ಲ ದಲಿತರ ಹಣ ಉಪಯೋಗಿಸಿಕೊಳ್ಳುತ್ತಿದ್ದಾರೆ. ವಾಲ್ಮೀಕಿ ಹಗರಣ, ಮುಡಾದಲ್ಲೂ ದಲಿತರ ಹಣವೇ ಲೂಟಿಯಾಗಿದೆ’ ಎಂದರು.

‘ದಲಿತರ ತಲೆ ಮೇಲೆ ಚಪ್ಪಡಿ ಎಳೆಯುವ ಕೆಲಸವನ್ನು ಈ ಸರ್ಕಾರ ಮಾಡಿದೆ. ರಾಜ್ಯ ಸರ್ಕಾರಕ್ಕೆ ಮರ್ಯಾದೆಯಿಲ್ಲ, ತಪ್ಪಿಸಿಕೊಳ್ಳುವ ದಾರಿ ಇಲ್ಲ. ಬಿಜೆಪಿ ಅವಧಿಯ 21 ಆರೋಪಪಟ್ಟಿ ಮಾಡಿದ್ದಾರೆ. ನಾನು 78 ಬಿಡುಗಡೆ ಮಾಡಿದ್ದೇನೆ’ ಎಂದರು.

# ಸಿನಿಮೀಯವಾಗಿ ಕಳ್ಳರ ಬೆನ್ನಟ್ಟಿದರು...

ಪ್ರಜಾವಾಣಿ ವಾರ್ತೆ

ನಾಯಕನಹಟ್ಟಿ (ಚಿತ್ರದುರ್ಗ): ತಮ್ಮ ಮೇಲೆ ಕಲ್ಲು ತೂರಾಟ ನಡೆಸಿ ಪರಾರಿಯಾಗಲು ಯತ್ನಿಸಿದ ಕಳ್ಳರನ್ನು ಹಿಡಿಯಲು ಪೊಲೀಸರು ಸಿನಿಮೀಯ ರೀತಿಯಲ್ಲಿ ಅವರನ್ನು ಬೆನ್ನಟ್ಟಿದ್ದಲ್ಲದೇ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದ ಘಟನೆ ಸಮೀಪದ ಕುದಾಪುರ ಗ್ರಾಮದಲ್ಲಿ ಶನಿವಾರ ತಡರಾತ್ರಿ ನಡೆದಿದೆ.

7 ಜನ ಕಳ್ಳರು ಬೊಲೆರೋ ಗೂಡ್ಸ್ ವಾಹನದಲ್ಲಿ ಮಧ್ಯರಾತ್ರಿ 2.20ರ ಸುಮಾರಿಗೆ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು. ಗಸ್ತಿನಲ್ಲಿದ್ದ ನಾಯಕನಹಟ್ಟಿ ಪೊಲೀಸ್ ಠಾಣೆಯ ಕಾನ್‌ಸ್ಟೆಬಲ್ ಶ್ರೀನಿಧಿ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿಯೊಬ್ಬರು ವಾಹನ ತಡೆದು ಪರಿಶೀಲಿಸಲು ಮುಂದಾಗಿದ್ದಾರೆ. ಆಗ ಕಳ್ಳರು ವಾಹನವನ್ನು ವೇಗವಾಗಿ ಓಡಿಸಿಕೊಂಡು ಬೋಸೆದೇವರಹಟ್ಟಿ ಕಡೆಗೆ ಸಾಗಿದ್ದಾರೆ. ಕೂಡಲೇ ಸಿಬ್ಬಂದಿ ಈ ವಿಷಯವನ್ನು ಪಿಎಸ್‌ಐ ಕೆ.ಶಿವಕುಮಾರ್ ಅವರಿಗೆ ತಿಳಿಸಿದ್ದಾರೆ. ಅವರು ಠಾಣೆಯಲ್ಲಿದ್ದ ಸಿಬ್ಬಂದಿಯನ್ನು ಕರೆದುಕೊಂಡು ಜೀಪಿನಲ್ಲಿ ಕಳ್ಳರನ್ನು ಬೆನ್ನಟ್ಟಿದ್ದಾರೆ.

ಪೊಲೀಸ್ ವಾಹನ ತಮ್ಮನ್ನು ಹಿಂಬಾಲಿಸುತ್ತಿರುವುದನ್ನು ಕಂಡ ಕಳ್ಳರು, ಮನುಮೈಲನಹಟ್ಟಿ ಕಡೆಗೆ ವಾಹನ ತಿರುಗಿಸಿದ್ದಾರೆ. ಅಲ್ಲಿಂದ ಕುದಾಪುರಕ್ಕೆ ಹೋಗಿದ್ದಾರೆ. ಅಲ್ಲಿ ಕಳ್ಳರ ವಾಹನ ಕಂಡ ಪಿಎಸ್‌ಐ ಶಿವಕುಮಾರ್, ಶರಣಾಗುವಂತೆ ಅವರಿಗೆ ಎಚ್ಚರಿಸಿದ್ದಾರೆ. ಅವರು ಬೊಲೆರೋ ವಾಹನದತ್ತ ಹೋಗುತ್ತಿದ್ದಾಗ ಕಳ್ಳರು ಕಲ್ಲು ತೂರಿದ್ದಾರೆ. ಆಗ ಶಿವಕುಮಾರ್ ತಮ್ಮ ಬಳಿ ಇದ್ದ ರಿವಾಲ್ವರ್‌ನಿಂದ ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿದ್ದಾರೆ.

ಗುಂಡಿನ ಸದ್ದು ಕೇಳಿ ಬೆದರಿದ ಕಳ್ಳರು ಬೊಲೆರೋ ವಾಹನವನ್ನು ಮತ್ತಷ್ಟು ವೇಗವಾಗಿ ಚಲಾಯಿಸಿಕೊಂಡು ಆಂಧ್ರಪ್ರದೇಶದತ್ತ ತೆರಳಿದ್ದಾರೆ. ದಾಳಿಯಿಂದ ಪೊಲೀಸ್ ವಾಹನದ ಗಾಜು ಪುಡಿಯಾಗಿದೆ. ಎಸ್ಪಿ ಧರ್ಮೇಂದ್ರ ಕುಮಾರ್ ಮೀನಾ ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

‘ಘಟನೆಯನ್ನು ಗಂಭೀರವಾಗಿ ಪರಗಣಿಸಿದ್ದೇವೆ. ಕಳ್ಳರು ತೆಲುಗು ಮಾತನಾಡುತ್ತಿದ್ದುದು ಗಮನಕ್ಕೆ ಬಂದಿದೆ. ಅವರು ಆಂಧ್ರಪ್ರದೇಶದವರು ಇರಬಹುದೆಂದು ಅಂದಾಜಿಸಲಾಗಿದೆ. ಶೀಘ್ರವೇ ಅವರನ್ನು ಪತ್ತೆ ಹಚ್ಚುತ್ತೇವೆ’ ಎಂದು ಎಸ್ಪಿ ಹೇಳಿದ್ದಾರೆ.

## 44 ತಹಶೀಲ್ದಾರ್ ಗ್ರೇಡ್– 2 ಅಧಿಕಾರಿಗಳ ಸ್ಥಳ ನಿಯುಕ್ತಿ

ಬೆಂಗಳೂರು: ತರಬೇತಿಯಲ್ಲಿದ್ದ 44 ತಹಶೀಲ್ದಾರ್ ಗ್ರೇಡ್– 2 ಅಧಿಕಾರಿಗಳನ್ನು ಸ್ಥಳ ನಿಯುಕ್ತಿಗೊಳಿಸಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

2017ನೇ ಸಾಲಿನಲ್ಲಿ ನಡೆದ 106 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯಲ್ಲಿ ಈ ಎಲ್ಲ ಅಧಿಕಾರಿಗಳು ಆಯ್ಕೆ ಆಗಿದ್ದರು. ಪರೀಕ್ಷಾರ್ಥ ಅವಧಿ ಪೂರ್ಣಗೊಳಿಸಿದ ಕಾರಣ ಎಲ್ಲರಿಗೂ ಹುದ್ದೆ ತೋರಿಸಲಾಗಿದೆ. ಈ ಪೈಕಿ, ಬಹುತೇಕರನ್ನು ರಾಜ್ಯದ ವಿವಿಧ ತಾಲ್ಲೂಕು ಕಚೇರಿಗಳಿಗೆ ನಿಯುಕ್ತಿಗೊಳಿಸಲಾಗಿದೆ.

‘ಹುದ್ದೆ, ಅಧಿಕಾರ ಸ್ವಾರ್ಥ ಸಾಧನೆಗಲ್ಲ. ಬದಲಾಗಿ ಪ್ರಾಮಾಣಿಕವಾದ ಜನಪರ ಸೇವೆಗೆ ಎನ್ನುವುದು ನೆನಪಿರಲಿ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಕಿವಿಮಾತು ಹೇಳಿದರು.

## ಕೆಎಸ್‌ಆರ್‌ಟಿಸಿ ವೆಬ್‌ಸೈಟ್ ಗೊಂದಲದಿಂದ ಪ್ರಯಾಣಿಕರಿಗೆ ತೊಂದರೆ

# ಟಿಕೆಟ್ ಬುಕ್ಕಿಂಗ್: ದಿನಕ್ಕೊಂದು ದರ!

• ಶಿವಪ್ರಸಾದ್ ರೈ

ಮೈಸೂರು: ದೂರದ ಊರುಗಳಿಗೆ ಪ್ರಯಾಣಿಸಲು ಖಾಸಗಿ ಬಸ್‌ಗಳು ವಾರಾಂತ್ಯ, ಹಬ್ಬದ ದಿನಗಳಲ್ಲಿ ಟಿಕೆಟ್ ದರ ಹೆಚ್ಚಿಸುತ್ತವೆ. ಇದೀಗ ಸರ್ಕಾರಿ ಬಸ್‌ಗಳಲ್ಲೂ ಯಾವುದೇ ಸೂಚನೆ ನೀಡದೆ ನಿತ್ಯ ಟಿಕೆಟ್ ದರ ಹೆಚ್ಚಿಸುತ್ತಿದ್ದು, ಪ್ರಯಾಣ ದುಬಾರಿಯಾಗಿ ಪರಿಣಮಿಸಿದೆ.

ಕೆಎಸ್‌ಆರ್‌ಟಿಸಿ ಆನ್‌ಲೈನ್ ಬುಕ್ಕಿಂಗ್ ಆ್ಯಪ್‌ನಲ್ಲಿ ದಿನಕ್ಕೊಂದು ಟಿಕೆಟ್ ದರ ತೋರಿಸುತ್ತಿದ್ದು, ಪ್ರಯಾಣಿಕರು ಹೆಚ್ಚು ಹಣ ಪಾವತಿಸಿ ಪ್ರಯಾಣಿಸುತ್ತಿದ್ದಾರೆ.

ಪ್ರಯಾಣಿಕರೊಬ್ಬರು ಜು.10ರಂದು ಮೈಸೂರಿನಿಂದ ಪುತ್ತೂರಿಗೆ ತೆರಳಲು ಜು.3ರಂದು ಆನ್‌ಲೈನ್‌ನಲ್ಲಿ ರಾಜಹಂಸ ಎಕ್ಸಿಕ್ಯೂಟಿವ್ ಬಸ್‌ನ ಟಿಕೆಟ್ ಕಾಯ್ದಿರಿಸಲು ಮುಂದಾದಾಗ ಟಿಕೆಟ್ ದರ ₹366 ತೋರಿಸುತ್ತಿತ್ತು. ಮರುದಿನ ₹495ಕ್ಕೆ ಏರಿಕೆಯಾಗಿತ್ತು.

ಜು.13ರಂದು ಪುತ್ತೂರು ಬಸ್ಸು ನಿಲ್ದಾಣದಲ್ಲಿರುವ ಮುಂಗಡ ಟಿಕಟ್ ಬುಕ್ಕಿಂಗ್ ಕೇಂದ್ರದಲ್ಲಿ ವಿಚಾರಿಸಿದಾಗ ಅದೇ ಬಸ್‌ನ ಟಿಕೆಟ್ ಮೊತ್ತ ₹540ಕ್ಕೆ ಏರಿಕೆಯಾಗಿತ್ತು. 15 ದಿನಗಳಲ್ಲಿ ನಿತ್ಯ ಇದೇ ರೀತಿ ದರ ವ್ಯತ್ಯಾಸವಾಗಿದೆ. ಕೆಎಸ್‌ಆರ್‌ಟಿಸಿ ಸಂಚರಿಸುವ ಇತರೆ ದಾರಿಗಳಲ್ಲೂ ದರ ವ್ಯತ್ಯಾಸ ಕಂಡುಬಂದಿದೆ. ಬಸ್ ನಿರ್ವಾಹಕರು ನೀಡುವ ಟಿಕೆಟ್‌ನ ಮೊತ್ತ ಹಾಗೂ ವೆಬ್‌ಸೈಟ್‌ನಲ್ಲಿ ಉಲ್ಲೇಖಿಸಿದ ಮೊತ್ತಕ್ಕೂ ಅಪಾರ ವ್ಯತ್ಯಾಸ ಉಂಟಾಗಿದೆ. ಪುತ್ತೂರು– ಮೈಸೂರಿನ ರಾಜಹಂಸ ಬಸ್‌ನಲ್ಲಿ ನಿರ್ವಾಹಕರು ನೀಡುವ ಟಿಕೆಟ್ ದರ ₹350 ಇದ್ದರೆ, ಆನ್‌ಲೈನ್‌ನಲ್ಲಿ ₹495 ಪಾವತಿಸಬೇಕು. ಈ ಮುಂಚೆ, ಮುಂಗಡ ಪಾವತಿಗಾಗಿ ₹20 ಹೆಚ್ಚುವರಿ ಪಡೆಯಲಾಗುತ್ತಿತ್ತು. ಆದರೆ ಈಗಿನ ವ್ಯವಸ್ಥೆಯಲ್ಲಿ ₹129 ಹೆಚ್ಚಳವಾದಂತಾಗಿದೆ.

ಈ ಬಗ್ಗೆ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಕಾಯ್ದಿರಿಸುವಿಕೆ ಕೇಂದ್ರದವರನ್ನು ಸಂಪರ್ಕಿಸಿದಾಗ, ಸಮರ್ಪಕ ಮಾಹಿತಿ ಇರಲಿಲ್ಲ. ‘ವಿಭಾಗೀಯ ಕೇಂದ್ರಗಳು ನೀಡಿದ ಮಾಹಿತಿಯಂತೆ ದರ ನಿಗದಿ ಮಾಡಲಾಗುತ್ತಿದೆ. ಮುಂದಿನ 2–3 ದಿನಗಳಲ್ಲಿ ಗೊಂದಲ’ ಸರಿಪಡಿಸಲಾಗುವುದು’ ಎಂದು ಬುಕಿಂಗ್ ಕೇಂದ್ರದ ಸಿಬ್ಬಂದಿ ‘ಪ್ರಜಾವಾಣಿ’ಗೆ ತಿಳಿಸಿದರು.

> ಖಾಸಗಿ ಬಸ್ ದುಬಾರಿ ಎಂದು ಕೆಎಸ್‌ಆರ್‌ಟಿಸಿ ಟಿಕೆಟ್ ಕಾಯ್ದಿರಿಸುತ್ತಿದ್ದೆ. ಆದರೆ ಈಗ ದರ ವ್ಯತ್ಯಾಸದಿಂದ ಹೆಚ್ಚಿನ ಹಣ ತೆರಬೇಕಾಗಿದೆ
> **ಹರ್ಷಕುಮಾರ್** ಪ್ರಯಾಣಿಕ

> ಕೆಎಸ್‌ಆರ್‌ಟಿಸಿಯ ವೆಬ್‌ಸೈಟ್ ಹೊಸ ವಿನ್ಯಾಸದೊಂದಿಗೆ ತಿಂಗಳ ಹಿಂದೆಯಷ್ಟೇ ಬಿಡುಗಡೆಯಾಗಿದೆ. ಆದರೆ ಟಿಕೆಟ್ ದರ ಹೆಚ್ಚಳವಾಗಿಲ್ಲ
> **ಅಶೋಕ್ ಕುಮಾರ್,** ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ

### ಕೊಠಡಿಗೆ ಬೀಗ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಬಸ್ ನಿಲ್ದಾಣದಲ್ಲಿರುವ ಮುಂಗಡ ಟಿಕೆಟ್ ಬುಕ್ಕಿಂಗ್ ಕೇಂದ್ರದ ಕೊಠಡಿಗೆ ಬೀಗ ಜಡಿಯಲಾಗಿದೆ. ಪ್ರಯಾಣದ ಮಾಹಿತಿ ಪಡೆಯಲು ಪಕ್ಕದಲ್ಲೇ ಇರುವ ಖಾಸಗಿ ಬುಕ್ಕಿಂಗ್ ಕೇಂದ್ರಕ್ಕೆ ತೆರಳಲು ಸಿಬ್ಬಂದಿ ತಿಳಿಸುತ್ತಾರೆ.

## ಕೆಪಿಎಸ್‌ಸಿ: 11 ತಿಂಗಳಲ್ಲಿ 2,243 ಹುದ್ದೆಗಳ ಭರ್ತಿಗೆ 19 ಅಧಿಸೂಚನೆ

# ಏಳು ತಿಂಗಳು; ಒಂದೇ ಪರೀಕ್ಷೆ

• ರಾಜೇಶ್ ರೈ ಚಟ್ಲ

**ಬೆಂಗಳೂರು:** ಪ್ರಸಕ್ತ ಸಾಲಿನ ಏಳು ತಿಂಗಳ ಅವಧಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ವಾಣಿಜ್ಯ ತೆರಿಗೆಗಳ ಪರಿವೀಕ್ಷಕರು (ಸಿಟಿಐ) 245 ಹುದ್ದೆಗಳ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿರುವುದು ಹೊರತು ಪಡಿಸಿದರೆ, ನೇಮಕಾತಿ ಅಧಿಸೂಚನೆ ಹೊರಡಿಸಿರುವ ಇತರ ಯಾವುದೇ ಇಲಾಖೆಗಳ ಖಾಲಿ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪರೀಕ್ಷೆ ನಡೆಸಿಲ್ಲ.

ಅಧಿಸೂಚನೆ ಹೊರಡಿಸಿ ವರ್ಷ ಕಳೆದರೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುತ್ತಿಲ್ಲ. ಕೆಪಿಎಸ್‌ಸಿಯ ಈ ವಿಳಂಬ ನೀತಿ ಸರ್ಕಾರಿ ಹುದ್ದೆಯ ನಿರೀಕ್ಷೆಯಲ್ಲಿ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಲಕ್ಷಾಂತರ ಉದ್ಯೋಗ ಆಕಾಂಕ್ಷಿಗಳನ್ನು ತೀವ್ರ ಹತಾಶರನ್ನಾಗಿ ಮಾಡಿದೆ.

2023ರ ಆಗಸ್ಟ್‌ನಿಂದ ಈವರೆಗೆ (11 ತಿಂಗಳು) ಅವಧಿಯಲ್ಲಿ ಸಿಟಿಐ, ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳೂ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ನಾನಾ ವೃಂದಗಳ ಒಟ್ಟು 2,243 ಹುದ್ದೆಗಳ ನೇಮಕಾತಿಗೆ 19 ಅಧಿಸೂಚನೆಗಳನ್ನು ಕೆಪಿಎಸ್‌ಸಿ ಹೊರಡಿಸಿದೆ. ಈ ಪೈಕಿ, ಸಿಟಿಐ ಹುದ್ದೆಗಳಿಗೆ ಮಾತ್ರ ಲಿಖಿತ ಪರೀಕ್ಷೆ ನಡೆಸಿದೆ. ಉಳಿದಂತೆ, 1,070 ಹುದ್ದೆಗಳಿಗೆ ಲಿಖಿತ ಪರೀಕ್ಷೆಗೆ ದಿನಾಂಕ ನಿಗದಿಪಡಿಸಿದೆ. 928 ಹುದ್ದೆಗಳಿಗೆ ಇನ್ನಷ್ಟೆ ದಿನಾಂಕ ನಿಗದಿಪಡಿಸಬೇಕಿದೆ.

ಸಿಟಿಐ ಉಳಿಕೆ ವೃಂದದ 230 ಹುದ್ದೆಗಳಿಗೆ 2023ರ ಆಗಸ್ಟ್ 18 ಹಾಗೂ ಹೈಕ ವೃಂದದ 15 ಹುದ್ದೆಗಳಿಗೆ ಆಗಸ್ಟ್ 30ರಂದು ಅಧಿಸೂಚನೆ ಹೊರಡಿಸಿದ್ದ ಕೆಪಿಎಸ್‌ಸಿ, ಆರು ತಿಂಗಳ ನಂತರ (ಜ. 20 ಮತ್ತು 21) ಬಹು ಆಯ್ಕೆಯ ಪರೀಕ್ಷೆ ನಡೆಸಿತ್ತು. ಆದರೆ, ಏಳು ತಿಂಗಳು ಕಳೆದರೂ ಫಲಿತಾಂಶ ಪ್ರಕಟಿಸಿಲ್ಲ. ಇನ್ನು ಕೈಗಾರಿಕಾ ಮತ್ತು ಉದ್ಯೋಗ ಇಲಾಖೆಯ ಸಹಾಯಕ ಉದ್ಯೋಗ ಅಧಿಕಾರಿ ಹುದ್ದೆಗೆ ಕಳೆದ ವರ್ಷ ಸೆ. 6ರಂದು ಅಧಿಸೂಚನೆ ಹೊರಡಿಸಿದ್ದರೂ, ಲಿಖಿತ ಪರೀಕ್ಷೆಗೆ ದಿನಾಂಕವನ್ನೇ ನಿಗದಿಪಡಿಸಿಲ್ಲ. ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆಯಲ್ಲಿ ಭೂಮಾಪಕರು ಒಟ್ಟು 364 (ಹೈಕ 100) ಹುದ್ದೆಗಳ ನೇಮಕಾತಿಗೆ ಜುಲೈ ತಿಂಗಳಲ್ಲಿ ಪರೀಕ್ಷೆ ನಡೆಸಲು ದಿನ ನಿಗಡಿಸಿಪಡಿಸಿದ್ದ ಕೆಪಿಎಸ್‌ಸಿ, ಬಳಿಕ ಮುಂದೂಡಿದೆ. ಪರಿಷ್ಕೃತ ದಿನಾಂಕವನ್ನು ನಿಗದಿಪಡಿಸಿಲ್ಲ.

> **ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ಆಗಸ್ಟ್ 25ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ದಿನಾಂಕ ನಿಗದಿಪಡಿಸಲಾಗಿದೆ. ಸದ್ಯಕ್ಕೆ ಯಾವುದೇ ಬದಲಾವಣೆ ಇಲ್ಲ**
> **ಕೆ. ರಾಕೇಶ್ ಕುಮಾರ್,** ಕಾರ್ಯದರ್ಶಿ, ಕೆಪಿಎಸ್‌ಸಿ

ಬಿಬಿಎಂಪಿ ಸಹಾಯಕ ಎಂಜಿನಿಯರ್, ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಹಾಯಕ ನಿರ್ದೇಶಕರು, ಜಲ ಸಂಪನ್ಮೂಲ ಇಲಾಖೆಯ ಸಹಾಯಕ ಎಂಜಿನಿಯರ್ ಸೇರಿದಂತೆ ಹಲವು ಇಲಾಖೆಗಳ ಹುದ್ದೆಗಳ ನೇಮಕಾತಿಗೆ ಕಡ್ಡಾಯ ಕನ್ನಡ ಮತ್ತು ಸಾಮಾನ್ಯ ಪರೀಕ್ಷೆಯ ದಿನಾಂಕ ನಿಗದಿಪಡಿಸಿರುವ ಕೆಪಿಎಸ್‌ಸಿ, ನಿರ್ದಿಷ್ಟ ಪತ್ರಿಕೆಯ ಪರೀಕ್ಷೆಯ ದಿನಾಂಕ ನಿರ್ಧರಿಸಿಲ್ಲ.

'ನಿಗದಿಪಡಿಸಿದ ದಿನಾಂಕದಂದೇ ಕೆಪಿಎಸ್‌ಸಿ ಪರೀಕ್ಷೆ ನಡೆಸುತ್ತದೆ. ಈಗಾಗಲೇ ನಡೆಸಿದ ಪರೀಕ್ಷೆಯ ಫಲಿತಾಂಶ ಪ್ರಕಟಿಸಿ, ಆಯ್ಕೆ ಪಟ್ಟಿ ಬಿಡುಗಡೆ ಮಾಡುತ್ತದೆ ಎಂಬ ಯಾವ ನಂಬಿಕೆಯೂ ಇಲ್ಲ. ವಯೋಮಿತಿ ಸಡಿಲಿಸಿ ಅವಕಾಶ ನೀಡಿದರೂ, ಪರೀಕ್ಷೆ ಬರೆದು, ಫಲಿತಾಂಶ ಬಂದು, ಪ್ರಕಟಗೊಂಡ ಆಯ್ಕೆ ಪಟ್ಟಿ ಕೋರ್ಟ್‌ಗಳ ಮೆಟ್ಟಿಲೇರಿ ಪರಿಷ್ಕೃತಗೊಂಡು ಬಿಡುಗಡೆಯಾಗುವ ವೇಳೆಗೆ ಅಭ್ಯರ್ಥಿಗೆ ನಿವೃತ್ತಿ ವಯಸ್ಸು ಸಮೀಪಿಸುತ್ತಿದೆ' ಎಂದು ಸರ್ಕಾರಿ ಹುದ್ದೆ ನಿರೀಕ್ಷೆಯಲ್ಲಿ ಕಳೆದ 10 ವರ್ಷಗಳಿಂದ ಕಾಯುತ್ತಿರುವ ವಿಜಯಪುರದ ಮಹಾಂತೇಶ ಹಿರೇಮಠ ತಿಳಿಸಿದರು.

### ಕೆಎಎಸ್ ಪರೀಕ್ಷೆ ಮುಂದೂಡಲು ಆಗ್ರಹ

ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳಿಗೆ ಆಗಸ್ಟ್ 25ರಂದು ಪೂರ್ವಭಾವಿ ಪರೀಕ್ಷೆ ನಡೆಸಲು ಕೆಪಿಎಸ್‌ಸಿ ನಿರ್ಧರಿಸಿದೆ. ಆದರೆ, ಅದೇ ದಿನ ವಿವಿಧ ಬ್ಯಾಂಕುಗಳಲ್ಲಿ ಖಾಲಿ ಇರುವ 6,128 ಗುಮಾಸ್ತ ಹುದ್ದೆಗಳಿಗೆ ಬ್ಯಾಂಕಿಂಗ್ ಸಿಬ್ಬಂದಿ ನೇಮಕಾತಿ ಸಂಸ್ಥೆಯು (ಐಬಿಪಿಎಸ್) ಪರೀಕ್ಷೆ ನಡೆಸಲಿದೆ. ಈ ಪೈಕಿ, 457 ಹುದ್ದೆಗಳು ಕರ್ನಾಟಕದಲ್ಲಿ ಖಾಲಿ ಇವೆ. ಕನ್ನಡದಲ್ಲಿಯೂ ಈ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ, ಅದೇ ದಿನ ಯುಜಿಸಿ ನೆಟ್ ಪರೀಕ್ಷೆ ಕೂಡಾ ನಿಗದಿಯಾಗಿದೆ. ಯಾವ ಪರೀಕ್ಷೆಯನ್ನು ಬರೆಯಬೇಕೆಂಬ ಗೊಂದಲ ದಲ್ಲಿರುವ ಅಭ್ಯರ್ಥಿಗಳು, ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪೂರ್ವಭಾವಿ ಪರೀಕ್ಷೆಯನ್ನು ಮುಂದೂಡಬೇಕೆಂದು ಆಗ್ರಹಿಸುತ್ತಿದ್ದಾರೆ.

ಅಭ್ಯರ್ಥಿಗಳ ಜೊತೆ ದನಿಗೂಡಿಸಿರುವ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶ್ರೇಯಸ್ ಎಂ. ಪಟೇಲ್, ಶಾಸಕ ವಿಠಲ ಎಸ್. ಹಲಗೇಕರ, ವಿಧಾನ ಪರಿಷತ್ ಸದಸ್ಯ ಡಾ. ಧನಂಜಯ ಸರ್ಜಿ ಅವರು ಪರೀಕ್ಷೆ ಮುಂದೂಡುವಂತೆ ಕೆಪಿಎಸ್‌ಸಿ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ. ವಿಧಾನ ಪರಿಷತ್‌ನಲ್ಲಿ ಶೂನ್ಯವೇಳೆ ಯಲ್ಲಿಯೂ ಸರ್ಜಿ ಈ ವಿಷಯ ಪ್ರಸ್ತಾಪಿಸಿದ್ದಾರೆ.

### ಕೆಪಿಎಸ್‌ಸಿಯಲ್ಲೇ ಹುದ್ದೆ ಖಾಲಿ

ಕೆಪಿಎಸ್‌ಸಿಗೆ ಒಟ್ಟು 380 ಹುದ್ದೆಗಳು ಮಂಜೂರಾಗಿದೆ. ಸಿಬ್ಬಂದಿಯ ವಯೋನಿವೃತ್ತಿ, ನಿಧನ, ಸ್ವಯಂ ನಿವೃತ್ತಿ, ಸೇವೆಯಿಂದ ಬಿಡುಗಡೆ ಮತ್ತಿತರ ಕಾರಣಗಳಿಂದ ಸದ್ಯ 210 ಹುದ್ದೆಗಳು ತೆರವಾಗಿವೆ. ತೆರವಾದ ಈ ಹುದ್ದೆಗಳ ಪೈಕಿ, 88 ಹುದ್ದೆಗಳಿಗೆ ಹೊರ ಗುತ್ತಿಗೆ ನೌಕರರನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಇನ್ನೂ 122 ಹುದ್ದೆಗಳು ಖಾಲಿ ಇವೆ. ಅಲ್ಲದೆ, ಫೆಬ್ರುವರಿಯಿಂದ ಕೆಪಿಎಸ್‌ಸಿ ಕಾರ್ಯದರ್ಶಿ ಹುದ್ದೆ ವಹಿಸಿಕೊಂಡಿರುವ ಕೆ. ರಾಕೇಶ್ ಕುಮಾರ್ ಅವರು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ಹುದ್ದೆಯನ್ನೂ ನಿಭಾಯಿಸುತ್ತಿದ್ದಾರೆ.

ಕಾಯಂ ಕಾರ್ಯದರ್ಶಿ ಇಲ್ಲದಿರುವುದು ಮತ್ತು ಸಿಬ್ಬಂದಿ ಕೊರತೆ ಕೂಡಾ ನೇಮಕಾತಿ ಪ್ರಕ್ರಿಯೆ ವಿಳಂಬವಾಗಲು ಕಾರಣ ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

# 'ಪ್ರಬುದ್ಧ' ಯೋಜನೆ ಮುಂದುವರಿಕೆ– ಮಹದೇವಪ್ಪ

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

**ಬೆಂಗಳೂರು:** 'ವಿದೇಶಿ ವಿಶ್ವ ವಿದ್ಯಾಲಯಗಳಲ್ಲಿ ಪಿಎಚ್‌.ಡಿ ಅಧ್ಯಯನಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾರ್ಥಿಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 'ಪ್ರಬುದ್ಧ' ಯೋಜನೆಯಡಿ ನೀಡಲಾಗುತ್ತಿದ್ದ ಸಹಾಯಧನ ಮುಂದುವರಿಸಲಿದೆ' ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಹೇಳಿದ್ದಾರೆ.

'ಪ್ರಬುದ್ಧ' ಯೋಜನೆಯನ್ನು 2023-24ನೇ ಸಾಲಿನಿಂದ ಕೈಬಿಟ್ಟಿರುವ ಕುರಿತು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ ಸುದ್ದಿ ಪ್ರಕಟವಾಗಿತ್ತು.

ಈ ಕುರಿತು ತಮ್ಮ 'X' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಮಹದೇವಪ್ಪ, 'ಪ್ರಬುದ್ಧ' ಯೋಜನೆಯಡಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವಿದೇಶದಲ್ಲಿ ಪಿಎಚ್‌.ಡಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕೆಲವು ಗೊಂದಲಗಳು ಉಂಟಾಗಿದೆ. ಈ ಯೋಜನೆ ಹಿಂದಿನ ರೀತಿಯಲ್ಲೇ ಮುಂದುವರಿಯಲಿದೆ. ಈ ಕುರಿತು ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದಿದ್ದಾರೆ.

'ಪರಿಶಿಷ್ಟ ಸಮುದಾಯದ ಜನರು ವಿದೇಶಗಳಲ್ಲಿ ಉನ್ನತ ವ್ಯಾಸಂಗ ಮಾಡಿದಾಗ ಮಾತ್ರ ಅವರು ಘನತೆಯುತ ಸ್ಥಾನಗಳಿಗೆ ಏರಲು ಸಾಧ್ಯ ಎಂಬ ಬಾಬಾ ಸಾಹೇಬರ ಆಶಯಗಳನ್ನು ಸಾಕಾರಗೊಳಿಸುವುದು ನಮ್ಮ ಜವಾಬ್ದಾರಿಯೇ ಆಗಿದೆ. ಈ ಹಿನ್ನೆಲೆಯಲ್ಲಿ, ಈ ಹಿಂದಿನಂತೆಯೇ ವಿಶ್ವದ ಅಗ್ರ 100 ವಿಶ್ವವಿದ್ಯಾಲಯಗಳಲ್ಲಿ ಪಿಎಚ್‌. ಡಿ ವ್ಯಾಸಂಗಕ್ಕೆ ಆಯ್ಕೆಯಾಗುವ ಪರಿಶಿಷ್ಟ ವಿದ್ಯಾರ್ಥಿಗಳಿಗೆ ಈ ಯೋಜನೆಯ ಅನುಕೂಲ ಸಿಗಲಿದೆ' ಎಂದೂ ಅವರು ಹೇಳಿದ್ದಾರೆ.

ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ಎಸ್‌. ತಂಗಡಗಿ ಅವರು ಹಡಪದ ಅಪ್ಪಣ್ಣ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

# 'ಹಡಪದ ಜಾತಿ ಪ್ರಮಾಣಪತ್ರ ಸಮಸ್ಯೆ ಪರಿಹರಿಸಲು ಕ್ರಮ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹಡಪದ ಸಮಾಜದ ಮಕ್ಕಳು ಜಾತಿ ಪ್ರಮಾಣಪತ್ರ ಪಡೆಯಲು ಇರುವ ಗೊಂದಲವನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್. ತಂಗಡಗಿ ಭರವಸೆ ನೀಡಿದರು.

ನಗರದಲ್ಲಿ ಭಾನುವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶಿವಶರಣ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿಧಾನಮಂಡಲದ ಅಧಿವೇಶನ ಮುಗಿದ ಕೂಡಲೇ ಹಡಪದ ಸಮಾಜದ ಮುಖ್ಯಸ್ಥರು, ಸ್ವಾಮೀಜಿಗಳು ಹಾಗೂ ಇಲಾಖೆ ಕಾರ್ಯದರ್ಶಿಗಳ ಸಭೆ ಕರೆದು ಕೂಡಲೇ ಜಾತಿ ಪ್ರಮಾಣ ಪತ್ರ ವಿತರಣೆಗೆ ಸಂಬಂಧಿಸಿದ ಗೊಂದಲ ಬಗೆಹರಿಸಲಾಗುವುದು ಎಂದು ತಿಳಿಸಿದರು.

ಹಡಪದ ಸಮಾಜದ ಕಟ್ಟಡಕ್ಕಾಗಿ ಬೆಂಗಳೂರಿನಲ್ಲಿ ಈ ಹಿಂದೆ ನಿವೇಶನವನ್ನು ಗುರುತಿಸಲಾಗಿದ್ದು ಕಾನೂನು ತೊಡಕಿನಿಂದಾಗಿ ಇನ್ನೂ ಮಂಜೂರಾತಿ ಆದೇಶ ಬಂದಿಲ್ಲ. ಈ ಕುರಿತು ಮುಖ್ಯಮಂತ್ರಿಗಳ ಜೊತೆ ಚರ್ಚಿಸ ಲಾಗುವುದು ಎಂದರು.

ಹಡಪದ ಅಪ್ಪಣ್ಣ ದೇವರ ಮಹಾ ಸಂಸ್ಥಾನ ಮಠದ ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಭಾಗಿಯಾಗಿದ್ದರು.

# ಡೆಂಗಿ: 3,428 ಸಕ್ರಿಯ ಪ್ರಕರಣ

**ಬೆಂಗಳೂರು:** ರಾಜ್ಯದಲ್ಲಿ 469 ಡೆಂಗಿ ಪ್ರಕರಣಗಳು ಭಾನುವಾರ ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಡೆಂಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3,428ಕ್ಕೆ ಏರಿಕೆಯಾಗಿದೆ.

24 ಗಂಟೆಗಳ ಅವಧಿಯಲ್ಲಿ 3,376 ಪರೀಕ್ಷೆಗಳನ್ನು ನಡೆಸಲಾಗಿದ್ದು, 23 ಜಿಲ್ಲೆಗಳಲ್ಲಿ ಹೊಸದಾಗಿ ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1,749 ಪರೀಕ್ಷೆಗಳನ್ನು ನಡೆಸಲಾಗಿದ್ದು, 292 ಪ್ರಕರಣಗಳು ದೃಢಪಟ್ಟಿವೆ. ಕಲಬುರಗಿಯಲ್ಲಿ 20, ಉಡುಪಿಯಲ್ಲಿ 17, ಮೈಸೂರಿನಲ್ಲಿ 15, ರಾಮನಗರದಲ್ಲಿ 14, ಧಾರವಾಡದಲ್ಲಿ 12, ಬಳ್ಳಾರಿಯಲ್ಲಿ 11, ಶಿವಮೊಗ್ಗ, ಚಿತ್ರದುರ್ಗ ಹಾಗೂ ತುಮಕೂರಿನಲ್ಲಿ ತಲಾ 10 ಪ್ರಕರಣಗಳು ಹೊಸದಾಗಿ ಖಚಿತಪಟ್ಟಿವೆ. ಉಳಿದೆಡೆ ಇದಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿವೆ.

## ಚೆಣ್ಣರ ಮೇಲೆ ಹೆಚ್ಚಿನ ನಿಗಾ ಇಡುವಂತೆ ಪಾಲಕರಿಗೆ ವೈದ್ಯರ ಸಲಹೆ

# ಡೆಂಗಿ ಶಂಕಿತರ ಸಾವು: ಮಕ್ಕಳೇ ಹೆಚ್ಚು

• ಜಿ.ಶಿವಕುಮಾರ

**ದಾವಣಗೆರೆ:** ರಾಜ್ಯದಲ್ಲಿ ಡೆಂಗಿ ಹಾವಳಿ ದಿನೇದಿನೇ ಹೆಚ್ಚುತ್ತಿದೆ. ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ಈ ವರ್ಷದ ಜನವರಿ 1ರಿಂದ ಜುಲೈ 20ರ ಅವಧಿಯಲ್ಲಿ ಒಟ್ಟು 10 ಮಂದಿ ಡೆಂಗಿಯಿಂದ ಮೃತಪಟ್ಟಿದ್ದಾರೆ. ಇದರಲ್ಲಿ ಮಕ್ಕಳೂ ಸೇರಿದ್ದಾರೆ.

ಜುಲೈ 8ರಂದು ಶಿವಮೊಗ್ಗದ ಶಿರಾಳಕೊಪ್ಪದಲ್ಲಿ 9 ತಿಂಗಳ ಗಂಡು ಮಗು, ಜು.18ರಂದು ಧಾರವಾಡದಲ್ಲಿ ಐದು ತಿಂಗಳ ಹೆಣ್ಣು ಮಗು ಅಸುನೀಗಿತ್ತು. ಜು.19ರಂದು ಚಿತ್ರದುರ್ಗದ ಮೊಳಕಾಲ್ಮುರಿನ ಎನ್‌ಎಂಎಸ್ ಬಡಾವಣೆಯ ಶಾಹಿದ್ (5), 7ರಂದು ಬ್ಯಾಡಗಿಯ ದೀಕ್ಷಾ (9), 11ರಂದು ಬೆಳಗಾವಿಯ ಸಂಕೇಶ್ವರದ ಶ್ರೇಯಾ (11), 15ರಂದು ಅರಸೀಕೆರೆಯ ಮಾಡಾಳು ಗ್ರಾಮದ ರಾಜೇಶ (8), ಹಾವೇರಿ ಜಿಲ್ಲೆ ಚಳಗೇರಿ ಗ್ರಾಮದ ಪ್ರೇಮಕುಮಾರ್ (13), ಹಾಸನದ ಬೊಮ್ಮನಾಯಕನಹಳ್ಳಿಯ ಅಕ್ಷತಾ (13) ಹಾಗೂ ಜು.20ರಂದು ಶಿವಮೊಗ್ಗ ಜಿಲ್ಲೆ ಸಾಗರದ ಮಹಮ್ಮದ್ ನಯಾನ್ (5) ಮೃತಪಟ್ಟಿದ್ದರು. ಜ್ವರದಿಂದ ಬಳಲುತ್ತಿದ್ದ ಇವರೆಲ್ಲರೂ ಡೆಂಗಿಯಿಂದಲೇ ಸಾವಿಗೀಡಾಗಿದ್ದಾರೆಂದು ಶಂಕಿಸಲಾಗಿದೆ.

ರಾಜ್ಯದಲ್ಲಿ ಡೆಂಗಿ ಬಾಧಿತ ಮಕ್ಕಳ ಸಂಖ್ಯೆ ಏರುಗತಿ ಪಡೆದಿದೆ. ಆರೋಗ್ಯ ಇಲಾಖೆ ಶನಿವಾರ ಬಿಡುಗಡೆ ಮಾಡಿದ್ದ ದೈನಂದಿನ 'ಹೆಲ್ತ್ ಬುಲೆಟಿನ್' ನಲ್ಲಿ ಜನವರಿಯಿಂದ ಜುಲೈ 20ರ ಅವಧಿಯಲ್ಲಿ 1 ವರ್ಷದೊಳಗಿನ 231 ಮಕ್ಕಳು ಡೆಂಗಿ ಪೀಡಿತರಾಗಿರುವುದಾಗಿ ತಿಳಿಸಲಾಗಿದೆ. ಡೆಂಗಿ ಬಾಧಿತ 1 ರಿಂದ 18 ವರ್ಷದೊಳಗಿನವರ ಸಂಖ್ಯೆ 4,764ಕ್ಕೆ ಹೆಚ್ಚಿದೆ.

> **ಸೊಳ್ಳೆ ನಿಯಂತ್ರಣಕ್ಕೆ ಲಾರ್ವಾ ನಾಶ ಮಾಡುವುದು ಬಹಳ ಮುಖ್ಯ. ಇದಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದೇವೆ**
> **ಡಾ.ಗಂಗಾಧರ್,** ಜಿಲ್ಲಾ ಕೀಟಜನ್ಯ ರೋಗಗಳ ನಿಯಂತ್ರಣಾಧಿಕಾರಿ, ದಾವಣಗೆರೆ

> **ಎಳೆಯ ಮಕ್ಕಳು ಹಗಲು ಹೊತ್ತಿನಲ್ಲಿ ಮಲಗುವುದು ಸಾಮಾನ್ಯ. ಆಗ ಸೊಳ್ಳೆ ಕಚ್ಚುವ ಅಪಾಯ ಹೆಚ್ಚಿರುತ್ತದೆ. ಆಗ ಸೊಳ್ಳೆ ಕಚ್ಚದಂತೆ ಎಚ್ಚರವಹಿಸಬೇಕು**
> **ಡಾ.ಎಸ್.ಷಣ್ಮುಖಪ್ಪ,** ದಾವಣಗೆರೆ ಡಿಎಚ್‌ಒ

'ರಾಜ್ಯದ ಬಹುಪಾಲು ಸರ್ಕಾರಿ ಶಾಲೆಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿವೆ. ತರಗತಿ ಕೊಠಡಿಗಳಲ್ಲಿ ಸೂಕ್ತ ಗಾಳಿ ಬೆಳಕಿನ ವ್ಯವಸ್ಥೆಯೇ ಇರುವುದಿಲ್ಲ. ಮಳೆಗಾಲದಲ್ಲಂತೂ ಅವು ಕತ್ತಲ ಕೋಣೆಯಂತಾಗಿರುತ್ತವೆ. ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಹಂತದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪೈಕಿ ಹೆಚ್ಚಿನವರು ಚಡ್ಡಿ ಹಾಗೂ ಸ್ಕರ್ಟ್‌ಗಳನ್ನು ಧರಿಸಿ ಶಾಲೆಗೆ ಹೋಗುವುದಿದೆ. ಹಗಲು ಹೊತ್ತಿನಲ್ಲಿ ಸಕ್ರಿಯವಾಗಿರುವ ಏಡಿಸ್ ಈಜಿಪ್ಟೈ ಸೊಳ್ಳೆಗಳು ಕಚ್ಚುವ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿಯೇ ಡೆಂಗಿಗೆ ಮಕ್ಕಳೇ ಹೆಚ್ಚು ಗುರಿಯಾಗುತ್ತಿರಬಹುದು' ಎಂದು ಮಕ್ಕಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಸೊಳ್ಳೆ ನಿಯಂತ್ರಣಕ್ಕೆ ತರಗತಿ ಕೊಠಡಿಗಳು ಹಾಗೂ ಒಳಾಂಗಣಗಳಲ್ಲಿ ನಿಯಮಿತವಾಗಿ 'ಫಾಗಿಂಗ್' ಮಾಡಬೇಕು. ಈ ಕೆಲಸ ಆಗುತ್ತಿಲ್ಲ. ಇದನ್ನು ಬಿಟ್ಟು ಆರೋಗ್ಯ ಇಲಾಖೆ ಶಾಲೆಗಳಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಿದರೆ ಏನು ಪ್ರಯೋಜನ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ದಾವಣಗೆರೆಯ ಶಿಕ್ಷಕರೊಬ್ಬರು ಪ್ರಶ್ನಿಸಿದರು.

'ಕೆಲ ಮಕ್ಕಳಲ್ಲಿ ಡೆಂಗಿ ಲಕ್ಷಣಗಳು ಸುಪ್ತವಾಗಿರುತ್ತವೆ. ಎಷ್ಟೇ ಪರೀಕ್ಷೆ ನಡೆಸಿದರೂ ಅವು ಪತ್ತೆಯಾಗುವುದೇ ಇಲ್ಲ. ಹೀಗಾಗಿ ಜ್ವರ ಕಾಣಿಸಿಕೊಂಡಾಗ ರಕ್ತ ಪರೀಕ್ಷೆ ಮಾಡಿಸಿಕೊಳ್ಳುವುದು ಉತ್ತಮ. ಮಕ್ಕಳಲ್ಲಿ ವೈರಾಣುಗಳಿಗೆ ಪ್ರತಿರೋಧ ಒಡ್ಡುವ ಶಕ್ತಿ ಕಡಿಮೆ ಇರುತ್ತದೆ. ಡೆಂಗಿ ವೈರಾಣುಗಳು ಕೂಡ ರೂಪಾಂತರಗೊಳ್ಳುವ ಸಾಧ್ಯತೆ ಇರುತ್ತದೆ. ಸಾಮಾನ್ಯ ಜ್ವರವೆಂದು ಭಾವಿಸಿ ನಿರ್ಲಕ್ಷ್ಯ ತೋರಿದರೆ ಪ್ರಾಣಕ್ಕೆ ಸಂಚಕಾರ ಎದುರಾಗಬಹುದು' ಎಂದು ದಾವಣಗೆರೆಯ ಮಕ್ಕಳ ತಜ್ಞ ಡಾ.ಮಧುಕುಮಾರ್ ಹೇಳಿದರು.

'ಡೆಂಗಿ ವೈರಾಣುವಿಗೆ ಪ್ರತಿರೋಧ ಒಡ್ಡಲು ಮುಂದಾದಾಗ ಮಕ್ಕಳಲ್ಲಿ ರಕ್ತದೊತ್ತಡ ಕಡಿಮೆಯಾಗುವ, ಕಿಡ್ನಿ ವೈಫಲ್ಯಗೊಳ್ಳುವ, ಉಸಿರಾಟದ ತೊಂದರೆ, ದೇಹದೊಳಗೆ ರಕ್ತ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಬಹು ಅಂಗಾಂಗ ವೈಫಲ್ಯವೂ ಉಂಟಾಗಬಹುದು. ರಾಜ್ಯದಲ್ಲಿ ಡೆಂಗಿ ಶಂಕೆಯಿಂದ ಮೃತಪಟ್ಟಿರುವ ಮಕ್ಕಳಲ್ಲಿ ಈ ಲಕ್ಷಣಗಳು ಕಂಡುಬಂದಿವೆ' ಎಂದು ಮಕ್ಕಳ ತಜ್ಞ ಡಾ.ಗುರುರಾಜ್ ತಿಳಿಸಿದರು.

### ಜಾಗೃತಿಯೇ ಮದ್ದು

'ಶಾಲಾ ಕೊಠಡಿಗಳಲ್ಲಿ ಪ್ರತಿದಿನ ಧೂಮೀಕರಣ ಮಾಡುವುದು ಅಸಾಧ್ಯ. ಹಾಗೊಮ್ಮೆ ಮಾಡಿದರೂ ವಿದ್ಯಾರ್ಥಿಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು. 'ಫಾಗಿಂಗ್'ಗಿಂತಲೂ ಮುಖ್ಯವಾಗಿ ಜನರ ಸ್ವಭಾವದಲ್ಲಿ ಬದಲಾವಣೆ ತರಬೇಕು. ಹೀಗಾಗಿಯೇ ಜಾಗೃತಿ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗುತ್ತಿದೆ. ಡೆಂಗಿ ನಿಯಂತ್ರಣಕ್ಕೆ ಜಾಗೃತಿಯೇ ಮದ್ದು' ಎಂದು ಧಾರವಾಡದ ಕೀಟಶಾಸ್ತ್ರಜ್ಞರೊಬ್ಬರು ಹೇಳಿದರು.

'ಮಕ್ಕಳು ಪ್ರತಿದಿನ ಸ್ನಾನ ಮಾಡಿದ ಬಳಿಕ ಕೊಬ್ಬರಿ ಎಣ್ಣೆ ಹಾಗೂ ಬೇವಿನ ಎಣ್ಣೆಯನ್ನು 4:1ರ ಅನುಪಾತದಲ್ಲಿ ಕೈ, ಕಾಲುಗಳಿಗೆ ಹಚ್ಚಿಕೊಳ್ಳಬೇಕು. ಸೊಳ್ಳೆ ಕಡಿತದಿಂದ ಪಾರಾಗಲು ಇದೂ ಕೂಡ ಒಂದು ಮಾರ್ಗೋಪಾಯ. ಇದಕ್ಕಾಗಿ ವಿದ್ಯಾರ್ಥಿಗಳಿಗೆ ಕೊಬ್ಬರಿ ಹಾಗೂ ಬೇವಿನ ಎಣ್ಣೆ ವಿತರಿಸಲೂ ಮುಂದಾಗಿದ್ದೇವೆ' ಎಂದು ತಿಳಿಸಿದರು.

ಕಬಿನಿ ಜಲಾಶಯದಿಂದ ಹೊರ ಹರಿವು ಹೆಚ್ಚಾಗಿರುವುದರಿಂದ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತ ಮೈದುಂಬಿ ಭೋರ್ಗರೆಯುತ್ತಿದೆ – ಪ್ರಜಾವಾಣಿ ಚಿತ್ರ/ಅವಿನ್ ಪ್ರಕಾಶ್ ವಿ.(ಎಡಚಿತ್ರ) ಹಾವೇರಿ ಜಿಲ್ಲೆಯ ಹೊಸರಿತ್ತಿ ಗ್ರಾಮದ ರಾಘವೇಂದ್ರ ಸ್ವಾಮೀಜಿ ಅವರ ಮಠ ವರದಾ ನದಿ ನೀರಿನಿಂದ ಆವೃತಗೊಂಡಿದೆ

## ಮಲೆನಾಡಿನಲ್ಲಿ ತಗ್ಗಿದ ಮಳೆ ಅಬ್ಬರ

ಹಾಸನ ವರದಿ: ಹಾಸನ ಜಿಲ್ಲೆಯ ಮಲೆನಾಡಿನಲ್ಲಿ ಮಳೆ ಅಬ್ಬರ ತುಸು ತಗ್ಗಿದೆ. ಬಯಲು ಸೀಮೆಯಲ್ಲಿ ಜಿಟಿಜಿಟಿ ಮಳೆಯಿಂದಾಗಿ ಮನೆಗಳಿಗೆ ಹಾನಿಯಾಗಿದೆ. ಸಕಲೇಶಪುರ ತಾಲ್ಲೂಕಿನ ಐಗೂರು ಹೋಬಳಿಯಲ್ಲಿ ರಾಜ್ಯದಲ್ಲಿಯೇ ಗರಿಷ್ಠ ಅಂದರೆ 12.4 ಸೆಂ.ಮೀ. ಮಳೆ ದಾಖಲಾಗಿದೆ. ಹೇಮಾವತಿ ಜಲಾಶಯಕ್ಕೆ 33,141 ಕ್ಯುಸೆಕ್ ಒಳಹರಿವು ದಾಖಲಾಗಿದೆ. ಭಾನುವಾರ 26ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹಾಗೂ 1,200 ಕ್ಯುಸೆಕ್ ನೀರನ್ನು ನಾಲೆಗಳಿಗೆ ಹರಿಸಲಾಗಿದೆ.

ರಂಗನತಿಟ್ಟು ಪಕ್ಷಿಧಾಮಕ್ಕೆ ಪ್ರವೇಶ ಸ್ಥಗಿತ • ಸೋಮವಾರಪೇಟೆಯಲ್ಲಿ ಜೋರು ಮಳೆ

# ಉಕ್ಕಿ ಹರಿದ ‘ಕೃಷ್ಣಾ’, ಭರ್ತಿಯತ್ತ ಕೆಆರ್‌ಎಸ್

ಪ್ರಜಾವಾಣಿ ವಾರ್ತೆ

**ಮಡಿಕೇರಿ/ಹುಬ್ಬಳ್ಳಿ/ಶ್ರೀರಂಗಪಟ್ಟಣ:** ರಾಜ್ಯದ ಕೆಲವೆಡೆ ಭಾನುವಾರ ಮಳೆಯ ಅಬ್ಬರ ಕಡಿಮೆಯಾಗಿದೆ. ಕೊಡಗು ಜಿಲ್ಲೆಯ ಸೋಮವಾರಪೇಟೆ ಪಟ್ಟಣ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಆಗಾಗ ಜೋರು ಮಳೆ ಆಗಿದೆ. ನೆರೆಯ ದಕ್ಷಿಣ ಮಹಾರಾಷ್ಟ್ರ ಸೇರಿದಂತೆ ಉತ್ತರ ಕರ್ನಾಟಕದ ವಿವಿಧೆಡೆ ಮಳೆ ಮುಂದುವರಿದಿದೆ.

ಕೃಷ್ಣಾ ಹಾಗೂ ಉಪನದಿಗಳಿಗೆ ಒಳ ಹರಿವು ಹೆಚ್ಚಳವಾಗಿದೆ. ಕೃಷ್ಣಾ ನದಿಗೆ ಭಾನುವಾರ ಮಧ್ಯಾಹ್ನದ ನಂತರ ಒಂದೂವರೆ ಲಕ್ಷ ಕ್ಯುಸೆಕ್ ನೀರು ಹರಿದುಬರುತ್ತಿದೆ. ಅಷ್ಟೇ ಪ್ರಮಾಣದಲ್ಲಿ ಆಲಮಟ್ಟಿ ಜಲಾಶಯದಿಂದ ನೀರನ್ನು ಹೊರಬಿಡಲಾಗುತ್ತಿದೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಭರ್ತಿಗೆ ಕ್ಷಣಗಣನೆ ಆರಂಭವಾಗಿದೆ. ಜಲಾಶಯದ ನೀರಿನ ಮಟ್ಟ ಭಾನುವಾರ 123.10 ಅಡಿ ಇತ್ತು. 70ಸಾವಿರ ಕ್ಯುಸೆಕ್ ಒಳಹರಿವಿದ್ದು, ನದಿಗೆ 52ಸಾವಿರ ಕ್ಯುಸೆಕ್ ನೀರನ್ನು ಹರಿಸಲಾಗುತ್ತಿದೆ. ಇದರಿಂದಾಗಿ ನದಿ ಪಾತ್ರದಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ರಂಗನತಿಟ್ಟು ಪಕ್ಷಿಧಾಮದ ಪ್ರವೇಶವನ್ನು ಭಾನುವಾರದಿಂದ ಸ್ಥಗಿತಗೊಳಿಸಲಾಗಿದೆ.

‘ಕೆಆರ್‌ಎಸ್ ಜಲಾಶಯದಿಂದ ನದಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲಾಗುತ್ತಿದೆ. ಹೀಗಾಗಿ, ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಪಕ್ಷಿಧಾಮಕ್ಕೆ ಪ್ರವೇಶವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ’ ಎಂದು ಮೈಸೂರು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಂ. ಶರಣಬಸಪ್ಪ ತಿಳಿಸಿದ್ದಾರೆ. ಈ ಧಾಮದಲ್ಲಿ ದೋಣಿ ವಿಹಾರವನ್ನು ಜುಲೈ 19ರಿಂದಲೇ ಸ್ಥಗಿತಗೊಳಿಸಲಾಗಿತ್ತು.

**ಶಾಲೆಗೆ ರಜೆ:** ಮಳೆಯ ಕಾರಣ ಬೆಳಗಾವಿ, ಖಾನಾಪುರ ತಾಲ್ಲೂಕಿನ ಅಂಗನವಾಡಿ ಕೇಂದ್ರ, ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಿಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಜು.22, 23ರಂದು ರಜೆ ಘೋಷಿಸಿದ್ದಾರೆ.

ಕೃಷ್ಣಾ ರಾಜ್ಯ ಪ್ರವೇಶಿಸುವ ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ ಜೊತೆ ಉಪನದಿಗಳಾದ ದೂಧಗಂಗಾ, ವೇದಗಂಗಾ ನದಿ ತೀರದ ನಿವಾಸಿಗಳಿಗೆ ಪ್ರವಾಹ ಭೀತಿ ಎದುರಾಗಿದೆ. ದೂಧಗಂಗಾ ನದಿಗೆ ಅಡ್ಡಲಾಗಿರುವ ಮಲಿಕವಾಡ-ದತ್ತವಾಡ, ಸದಲಗಾ-ದತ್ತವಾಡ, ಕಾರದಗಾ-ಭೋಜ ಸೇತುವೆ, ವೇದಗಂಗಾ ನದಿಗೆ ಅಡ್ಡಲಾಗಿರುವ ಜತ್ರಾಟ-ಭೀವಶಿ, ಅಕ್ಕೋಳ-ಸಿದ್ನಾಳ, ಬೋಜವಾಡಿ-ಕುನ್ನೂರು ಸೇರಿದಂತೆ ಏಳು ಸೇತುವೆಗಳು ಜಲಾವೃತಗೊಂಡ ಸ್ಥಿತಿಯಲ್ಲಿ ಇವೆ. ಜನರು ಪರ್ಯಾಯ ಮಾರ್ಗಗಳಲ್ಲಿ ಸಂಚರಿಸುತ್ತಿದ್ದಾರೆ.

ದೂಧಗಂಗಾ ನದಿ ತೀರದಲ್ಲಿ ಕಾರದಗಾ ಗ್ರಾಮದ ಬಂಬಾಗಲಿ ಬಾಬಾ ದೇವಸ್ಥಾನ, ಕೃಷ್ಣಾ ನದಿ ತೀರದ ಕಲ್ಲೋಳ ಗ್ರಾಮದ ಬಳಿಯ ದತ್ತಾತ್ರೇಯ ಮಂದಿರ ಸೇರಿದಂತೆ ನದಿ ತೀರದಲ್ಲಿಯ ಹಲವು ಸಣ್ಣ ಪುಟ್ಟ ದೇವಾಲಯ, ದರ್ಗಾ ಮುಂತಾದವುಗಳು ಜಲಾವೃತಗೊಂಡಿವೆ. ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಜಲಾಶಯದಲ್ಲಿ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ.

ಕೊಡಗು ಜಿಲ್ಲೆಯ ಬಿರುನಾಣಿ, ಬಾಳೆಲೆ ಭಾಗದಲ್ಲೂ ಮಳೆ ಬಿರುಸಾಗಿದೆ. ಭಾಗಮಂಡಲ ಸೇರಿದಂತೆ ಅನೇಕ ಕಡೆಗಳಲ್ಲಿ ಪ್ರವಾಹದ ಆತಂಕ ಸದ್ಯಕ್ಕೆ ದೂರಾಗಿದೆ. 24 ಗಂಟೆಗಳಲ್ಲಿ 6 ಮನೆಗಳು ಹಾನಿಗೀಡಾಗಿದ್ದು, 28 ವಿದ್ಯುತ್ ಕಂಬಗಳು ಬಿದ್ದಿವೆ. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಸರಾಜು ಸತತ 2ನೇ ದಿನವೂ ಮಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಿದರು.

**ಸಾಧಾರಣ ಮಳೆ (ಮಂಗಳೂರು ವರದಿ):** ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಹತ್ತು ದಿನಗಳಿಂದ ಧಾರಾಕಾರವಾಗಿ ಸುರಿದ ಮಳೆಯ ಅಬ್ಬರ ಭಾನುವಾರ ತುಸು ಕಡಿಮೆ ಆಗಿದೆ. ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ವಿತ್ತು. ಬಿಟ್ಟು ಬಿಟ್ಟು ಸಾಧಾರಣ ಮಳೆ ಸುರಿಯಿತು. ಮಧ್ಯಾಹ್ನದ ಬಳಿಕ ಬಿಸಿಲಿನಿಂದ ಕೂಡಿದ ವಾತಾವರಣವಿತ್ತು.

ರಾಜ್ಯದ ಕರಾವಳಿಯಲ್ಲಿ ಸೋಮವಾರ ಗುಡುಗು ಸಿಡಿಲಿನಿಂದ ಕೂಡಿದ ಮಳೆಯಾಗುವ ಸಾಧ್ಯತೆ ಇದೆ. ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಸೋಮವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಕಳೆದೆರಡು ದಿನಗಳಿಂದ ಬಿಡುವು ನೀಡಿದ್ದ ಮಳೆ, ಭಾನುವಾರ ಮತ್ತೆ ಬಿರುಸುಗೊಂಡಿದೆ. ಕಾರ್ಕಳದಲ್ಲಿ 4 ಸೆಂ.ಮೀ., ಬೈಂದೂರಿನಲ್ಲಿ 5 ಸೆಂ.ಮೀ. ಮಳೆಯಾಗಿದೆ.

### ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆಆರ್ ಎಸ್ * | 124.80 | 123.10 | 70,850 | 52,162 |
| ಹಾರಂಗಿ | 2,859 | 2,854.95 | 9,520 | 4,000 |
| ಕಬಿನಿ | 2,284.00 | 2,281.89 | 29,855 | 20,000 |
| ಹೇಮಾವತಿ | 2,922 | 2,919.35 | 33,141 | 27,189 |
| ಲಿಂಗನಮಕ್ಕಿ | 1,819 | 1,796.05 | 48,793 | - |
| ಸೂಪಾ (ಮೀ) | 564 | 543.20 | 31,599 | - |
| ಮಾಣಿ | 595 | 582.10 | 7,525 | - |
| ತುಂಗಭದ್ರಾ | 1,633 | 1,625.27 | 1,14,752 | 4,208 |
| ಮಲಪ್ರಭಾ | 2,079.5 | 2,062.30 | 14,824 | 194 |
| ಘಟಪ್ರಭಾ | 2175 | 2,154.90 | 29,991 | 1,631 |
| ಭದ್ರಾ | 164.4 | 162.70 | 23,674 | 191 |
| ಆಲಮಟ್ಟಿ (ಮೀ) | 519.6 | 517.90 | 1,50,000 | 1,50,000 |
| ನಾರಾಯಣಪುರ (ಮೀ) | 492.25 | 491.24 | 1,25,000 | 1,45,750 |

* ನೆಲಮಟ್ಟದಿಂದ

### ‘ಕೆಆರ್‌ಎಸ್: 27ಕ್ಕೆ ಸಿ.ಎಂ ಬಾಗಿನ’

ಜಲಸಂಪನ್ಮೂಲ ಸಚಿವರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಜುಲೈ 22ರಂದು ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿ ಪರಿಶೀಲಿಸಲಿದ್ದಾರೆ. ಜುಲೈ 27ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಅರ್ಪಿಸಲಿದ್ದಾರೆ’ ಎಂದು ಶಾಸಕ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.

### ಹಲವೆಡೆ ಮಳೆ ಇಳಿಕೆ: ಕರಾವಳಿಗೆ ‘ಯೆಲ್ಲೊ ಅಲರ್ಟ್’

**ಬೆಂಗಳೂರು:** ಮಳೆ ಪ್ರಮಾಣವು ಸೋಮವಾರದಿಂದ ಕಡಿಮೆಗೊಳ್ಳಲಿದೆ. ಸತತವಾಗಿ ‘ರೆಡ್ ಅಲರ್ಟ್’ನಲ್ಲಿದ್ದ ಕರಾವಳಿಯ ಜಿಲ್ಲೆಗಳು ‘ಯೆಲ್ಲೊ ಅಲರ್ಟ್’ಗೆ ಬರಲಿವೆ. ರೆಡ್ ಅಲರ್ಟ್‌ನಲ್ಲಿದ್ದ ಮಲೆನಾಡಿನ ಜಿಲ್ಲೆಗಳು ಸಾಮಾನ್ಯ ಸ್ಥಿತಿಗೆ ಬರಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಉತ್ತಮ ಮಳೆಯಾಗಲಿದೆ. 30ರಿಂದ 40 ಕಿ.ಮೀ ವೇಗದಲ್ಲಿ ಈ ಜಿಲ್ಲೆಗಳಲ್ಲಿ ಗಾಳಿ ಬೀಸಲಿದೆ. ರಾಜ್ಯದ ಉತ್ತರ ಒಳನಾಡು ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಸಾಮಾನ್ಯ ಮಳೆ ಮುಂದುವರಿಯಲಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಭಾನುವಾರ ಉತ್ತರ ಕನ್ನಡ ಜಿಲ್ಲೆಯ ಕ್ಯಾಸಲ್ ರಾಕ್ (12 ಸೆಂ.ಮೀ), ಉಡುಪಿ ಜಿಲ್ಲೆಯ ಕೊಲ್ಲೂರು (12 ಸೆಂ.ಮೀ) ಹೆಚ್ಚು ಮಳೆ ದಾಖಲಾಗಿದೆ. ಇದೇ ಪ್ರದೇಶಗಳಲ್ಲಿ ಕೆಲವು ದಿನಗಳಿಂದ ಪ್ರತಿ ದಿನ 20 ಸೆಂ.ಮೀ ಗಿಂತ ಅಧಿಕ ಮಳೆ ದಾಖಲಾಗಿತ್ತು.

ಧರ್ಮಸ್ಥಳ, ಕಾರವಾರ ಅಬ್ಬಿ, ಸಿದ್ದಾಪುರ, ಕಳಸ, ಶೃಂಗೇರಿಯಲ್ಲಿ 6 ಸೆಂ.ಮೀ ಮಳೆ ಸುರಿದಿದೆ. ಅಂಕೋಲಾ, ಪುತ್ತೂರು, ಮಂಗಳೂರು, ಯಲ್ಲಾಪುರ, ಶಿರಾಲಿ, ಕಾರ್ಕಳ, ಭಾಗಮಂಡಲ, ಕಮ್ಮರಡಿ, ಹುಂಚದಕಟ್ಟೆಯಲ್ಲಿ 5 ಸೆಂ.ಮೀ ಮಳೆ ದಾಖಲಾಗಿದೆ. ಉಪ್ಪಿನಂಗಡಿ, ಗೇರುಸೊಪ್ಪ, ಮಂಕಿ, ಜೋಯಿಡಾ, ಉಡುಪಿ, ಬೆಳ್ತಂಗಡಿ, ಬೆಳಗಾವಿ, ಔರಾದ್, ಸೋಮವಾರಪೇಟೆ, ಜಯಪುರಗಳಲ್ಲಿ 4 ಸೆಂ.ಮೀ ದಾಖಲಾಗಿದೆ.

### ಮಳೆ ಅವಘಡ: ಇಬ್ಬರ ಸಾವು

**ಹುಬ್ಬಳ್ಳಿ/ಶಿವಮೊಗ್ಗ:** ವರುಣನ ಆರ್ಭಟದಿಂದ ಬೆಳಗಾವಿ ತಾಲ್ಲೂಕಿನ ಕಾಕತಿಯಲ್ಲಿ ಒಂದು ಮನೆ ಕುಸಿದಿದೆ. ನಿಪ್ಪಾಣಿಯ ಜತ್ರಾಟ ವೇಸ್‌ನಲ್ಲಿ ಪಕ್ಕದ ಮನೆಯ ಗೋಡೆ ತಗಡಿನ ಶೆಡ್ ಕುಸಿದಿದ್ದರಿಂದ ತಿರುಪತಿ ರಾಜಾರಾಮ ವಟಕರ್ (50) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಶಿಕಾರಿಪುರ ತಾಲ್ಲೂಕಿನ ಅಮಟೇಕೊಪ್ಪದ ಕೆರೆಯಲ್ಲಿ ಈಜಲು ಹೋಗಿದ್ದ ಶೆಟ್ಟಿಹಳ್ಳಿಯ ತಿಮ್ಮಪ್ಪ ಎಂಬವರ ಪುತ್ರ ನಾಗರಾಜ್ (32), ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಶನಿವಾರ ತಗ್ಗಿದ್ದ ಮಳೆಯ ಅಬ್ಬರ ಭಾನುವಾರ ಬೆಳಿಗ್ಗೆಯಿಂದ ಮತ್ತೆ ಚುರುಕುಗೊಂಡಿದೆ. ಸಾಗರ ತಾಲ್ಲೂಕಿನ ತಾಳಗುಪ್ಪ, ಸಾಗರ ಹೋಬಳಿಗಳಲ್ಲಿ ವರದಾ ನದಿ ಉಕ್ಕಿ ಹರಿಯುತ್ತಿದೆ. ಮಾವಿನ ಹೊಳೆ, ಕನ್ನೆ ಹೊಳೆ ಪ್ರವಾಹದಿಂದ ಸಾವಿರಾರು ಎಕರೆ ಭತ್ತ, ಬಾಳೆ, ಅಡಿಕೆ ತೋಟಗಳು ಜಲಾವೃತವಾಗಿವೆ.

ಹಾವೇರಿ ಜಿಲ್ಲೆಯಲ್ಲಿ ವರದಾ ನದಿ ಹರಿವು ಹೆಚ್ಚಳವಾಗಿದೆ. ವರದಾ ನದಿ ಅಚ್ಚುಕಟ್ಟು ಪ್ರದೇಶದಲ್ಲಿರುವ ಜಮೀನುಗಳಿಗೆ ಈಗಾಗಲೇ ನೀರು ನುಗ್ಗಿದ್ದು, ಅಪಾರ ಹಾನಿ ಉಂಟಾಗಿದೆ.

ಹೊಸರಿತ್ತಿ ಮತ್ತು ಅಕ್ಕೂರು ಗ್ರಾಮಗಳ ಮಧ್ಯೆ ಇರುವ ಸೇತುವೆ ಮೇಲೆ ವರದಾ ನದಿ ನೀರು ಹರಿಯುತ್ತಿದ್ದು, ಐದಕ್ಕೂ ಹೆಚ್ಚು ಗ್ರಾಮಗಳ ರಸ್ತೆ ಸಂಪರ್ಕ ಕಡಿತಗೊಂಡಿದೆ.

ತುಂಗಭದ್ರಾ ಅಣೆಕಟ್ಟೆ ಭರ್ತಿಯಾಗಲು ಎಂಟು ಅಡಿಯಷ್ಟೇ ಬಾಕಿ ಇದ್ದು, ಜಲಾಶಯದಿಂದ ಭಾನುವಾರ 995 ಕ್ಯುಸೆಕ್‌ನಷ್ಟು ನೀರನ್ನು ನದಿಗೆ ಹರಿಯಬಿಡಲಾಗಿದೆ. ಒಳಹರಿವಿನ ಪ್ರಮಾಣ 1.14 ಲಕ್ಷ ಕ್ಯುಸೆಕ್‌ನಷ್ಟಿದ್ದು, 77.37 ಟಿಎಂಸಿ ಅಡಿಯಷ್ಟು ನೀರು ಸಂಗ್ರಹವಾಗಿದೆ.

ಅಂಕೋಲಾ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಗುಡ್ಡ ಕುಸಿತದ ಅವಘಡ ಸಂಭವಿಸಿದ ಸ್ಥಳಕ್ಕೆ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡಿ ರಭಸದ ಮಳೆಯ ನಡುವೆಯೂ ಪರಿಶೀಲನೆ ನಡೆಸಿದರು. ಕಂದಾಯ ಸಚಿವ ಕೃಷ್ಣ ಭೈರೇಗೌಡ, ಶಾಸಕ ಸತೀಶ ಸೈಲ್, ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಲ್.ಕೆ.ಅತೀಕ್, ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಇದ್ದರು

## ಶಿರೂರು ಗುಡ್ಡಕ್ಕೆ ಮುಖ್ಯಮಂತ್ರಿ ಭೇಟಿ

ಒಂದನೇ ಪುಟದಿಂದ...

‘ತಂದೆ ಕಣ್ಮರೆಯಾಗಿ ಏಳು ದಿನವಾದರೂ ಈವರೆಗೆ ಅವರನ್ನು ಹುಡುಕಿಲ್ಲ. ಮುಖ್ಯಮಂತ್ರಿ ಅವರ ಬಳಿ ದೂರು ಹೇಳಿಕೊಳ್ಳಲು ಅಧಿಕಾರಿಗಳು ಅವಕಾಶ ಮಾಡಿಕೊಟ್ಟಿಲ್ಲ’ ಎಂದು ಜಗನ್ನಾಥ ಅವರ ಪುತ್ರಿಯರಾದ ಪಲ್ಲವಿ, ಮನಿಷಾ, ಕೃತಿಕಾ ದೂರಿದರು.

‘ಪ್ರತಿ ವರ್ಷ ನೆರೆ ಹಾವಳಿ ಉಂಟಾಗುವ ಗ್ರಾಮಗಳ ಸಮಸ್ಯೆ ಕುರಿತು ದೂರು ಸಲ್ಲಿಸಲು ತಾಸುಗಟ್ಟಲೆ ಕಾದಿದ್ದರೂ ಸಿ.ಎಂ ಭೇಟಿಗೆ ಅವಕಾಶ ಮಾಡಿಕೊಡಲಿಲ್ಲ. ರಸ್ತೆಯ ಪಕ್ಕ ನಿಂತಿದ್ದ ಜನರನ್ನು ಸಿ.ಎಂ ನೋಡುತ್ತ ಸಾಗಿದರೆ ವಿನಃ ಕಷ್ಟ ಏನು ಎಂಬುದನ್ನೂ ಆಲಿಸುವ ಪ್ರಯತ್ನ ಮಾಡಿಲ್ಲ’ ಎಂದು ಐಗಳಕೂರ್ವೆಯ ದತ್ತು ಪಟಗಾರ ಆಕ್ರೋಶ ವ್ಯಕ್ತಪಡಿಸಿದರು.

**ತಂತ್ರಜ್ಞಾನ ಬಳಸಲು ಸಲಹೆ:** ಗುಡ್ಡ ಕುಸಿತದಿಂದ ಕಣ್ಮರೆಯಾದವರಿಗೆ ನಡೆಯುತ್ತಿರುವ ಶೋಧ ಕಾರ್ಯ, ಮಣ್ಣು ತೆರವು ಕಾರ್ಯಾಚರಣೆಯನ್ನು ವೀಕ್ಷಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ‘ಉನ್ನತ ತಂತ್ರಜ್ಞಾನ ಬಳಕೆ ಮಾಡಿ ಕಾರ್ಯಾಚರಣೆ ನಡೆಸಿ’ ಎಂದು ಅಧಿಕಾರಿಗಳಿಗೆ ಸೂಚಿಸಿದರು.

‘ದುರ್ಘಟನೆಯಲ್ಲಿ ಕಣ್ಮರೆಯಾದವರ ಪತ್ತೆಗೆ ಕೇಂದ್ರ ಸರ್ಕಾರದಿಂದಲೂ ಸಹಕಾರ ಸಿಕ್ಕಿದೆ. ಸೇನೆ, ನೌಕಾದಳ, ಎನ್.ಡಿ.ಆರ್.ಎಫ್ ಮತ್ತು ಎಸ್.ಡಿ.ಆರ್.ಎಫ್ ತಂಡಗಳು ಕಾರ್ಯಾಚರಣೆಯಲ್ಲಿ ತೊಡಗಿವೆ’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

**ಬಿ.ವೈ.ವಿಜಯೇಂದ್ರ ಭೇಟಿ:** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕೂಡ ಮುಖ್ಯಮಂತ್ರಿ ಭೇಟಿ ನೀಡುವ ಕೆಲ ನಿಮಿಷಗಳ ಮೊದಲು ಇದೇ ಸ್ಥಳಕ್ಕೆ ಹಾಗೂ ಸಮೀಪದ ಉಳುವರೆ ಗ್ರಾಮಕ್ಕೆ ಭೇಟಿ ನೀಡಿದ್ದರು.

‘ದುರ್ಘಟನೆ ನಡೆದು ಹತ್ತು ಮಂದಿ ಕಣ್ಮರೆಯಾಗಿದ್ದರೂ ಘಟನೆ ನಡೆದು ಆರು ದಿನದ ನಂತರ ಮುಖ್ಯಮಂತ್ರಿ ಸ್ಥಳಕ್ಕೆ ಬಂದಿದ್ದಾರೆ. ಅವರಿಗೆ ಜನರ ಜೀವಕ್ಕಿಂತ ಅಧಿವೇಶನವೇ ಮುಖ್ಯವಾಯಿತು’ ಎಂದು ವಾಗ್ದಾಳಿ ನಡೆಸಿದರು.

ಗುಡ್ಡ ಕುಸಿದಿದ್ದರಿಂದ ಗಂಗಾವಳಿ ನದಿ ಉಕ್ಕೇರಿ ಮನೆ ಕಳೆದುಕೊಂಡ ಉಳುವರೆ ಗ್ರಾಮದ ಸಂತ್ರಸ್ತರ ಸಂಕಷ್ಟವನ್ನು ಆಲಿಸಿದರು. ಪರಿಹಾರ ಒದಗಿಸಲು ಸರ್ಕಾರದ ಮೇಲೆ ಒತ್ತಡ ಹೇರುವುದಾಗಿ ಭರವಸೆ ನೀಡಿದರು.

# ಕೆಪಿಟಿಸಿಎಲ್: ಒಕ್ಕಲಿಗರಿಗೇ ಮಣೆ

ಒಂದನೇ ಪುಟದಿಂದ...

‘ಈ ವರ್ಗಾವಣೆ ಪ್ರಕ್ರಿಯೆಯನ್ನು ರದ್ದುಪಡಿಸಿ, ಎಲ್ಲ ಸಮುದಾಯಗಳನ್ನೂ ಒಳಗೊಂಡು ಮತ್ತೆ ವರ್ಗಾವಣೆ ಮಾಡಬೇಕು’ ಎಂದೂ ದೂರಿನಲ್ಲಿ ಆಗ್ರಹಿಸಲಾಗಿದೆ.

ವರ್ಗಾವಣೆಯಲ್ಲಿ ಒಕ್ಕಲಿಗ ಸಮುದಾಯದ ಇಇಗಳಿಗೇ ಆದ್ಯತೆ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿಯವರಿಗೆ ದೂರು ನೀಡಲು ಬೆಸ್ಕಾಂ ವ್ಯಾಪ್ತಿಯಲ್ಲಿ ಕರ್ತವ್ಯದಲ್ಲಿರುವ ಇತರ ಸಮುದಾಯದ ಇಇಗಳು ಪತ್ರವೊಂದನ್ನು ಸಿದ್ಧಪಡಿಸಿದ್ದಾರೆ. ಆದರೆ ದೂರು ನೀಡುವ ಮುನ್ನವೇ ಪತ್ರವು ಸೋರಿಕೆಯಾಗಿದೆ.

‘ಇಂಧನ ಸಚಿವರ ಕಚೇರಿಯಲ್ಲಿ ಒಕ್ಕಲಿಗ ಸಮುದಾಯದ ಅಧಿಕಾರಿಯೊಬ್ಬರು ಇದ್ದಾರೆ. ಅವರು ಬೇರೆಲ್ಲಾ ಸಮುದಾಯಗಳ ಇಇಗಳನ್ನು ಒಳಗೊಂಡಿದ್ದ ವರ್ಗಾವಣೆ ಪಟ್ಟಿಯನ್ನು ಬದಲಿಸಿ, ಒಕ್ಕಲಿಗ ಸಮುದಾಯದ ಇಇಗಳ ಹೆಸರುಗಳನ್ನು ಸೇರಿಸಿದ್ದಾರೆ’ ಎಂದು ಬೆಸ್ಕಾಂನ ಅಧಿಕಾರಿಯೊಬ್ಬರು ಆರೋಪಿಸಿದರು.

‘ಸಾರ್ವತ್ರಿಕ ವರ್ಗಾವಣೆಯಲ್ಲಿ ಸಲ್ಲಿಕೆಯಾದ ಅರ್ಜಿಗಳು ಮತ್ತು ಇಇಗಳ ವರ್ಗಾವಣೆಗೆ ಅನುಸರಿಸಿದ ಮಾನದಂಡಗಳನ್ನು ಪರಿಶೀಲಿಸಬೇಕು. ಆಗ ಇತರ ಸಮುದಾಯದವರಿಗೆ ಅನ್ಯಾಯವಾಗಿರುವುದು ಗೊತ್ತಾಗಲಿದೆ’ ಎಂದು ಅವರು ಹೇಳಿದ್ದಾರೆ.

### ಒಕ್ಕಲಿಗ ಸಮುದಾಯದ ಇಇಗಳು

ಇದೇ 12ರಂದು ವರ್ಗಾವಣೆಯಾದ ಅಧಿಕಾರಿಗಳಲ್ಲಿ ಒಕ್ಕಲಿಗ ಸಮುದಾಯಕ್ಕೆ ಸೇರಿದವರ ವಿವರ.

| ಅಧಿಕಾರಿ | ವರ್ಗಾವಣೆಯಾದ ಹುದ್ದೆ |
|---|---|
| ಶ್ರೀಕಾಂತ್ ಟಿ | ಮಾಪಕ ಪರಿವೀಕ್ಷಣಾ ಉತ್ತರ ವಿಭಾಗ, ಬೆಸ್ಕಾಂ |
| ಕಿರಣ್ ಎಂ.ಎಸ್. | ಕಾಮಗಾರಿ ವಿಭಾಗ, ಕಾರ್ಯ ಮತ್ತು ಪಾಲನಾ ಪೂರ್ವ ವೃತ್ತ, ಬೆಂಗಳೂರು. |
| ಚೈತ್ರ ಆರ್. | ಮಾಪಕ ಪರಿವೀಕ್ಷಣಾ ದಕ್ಷಿಣ ವಿಭಾಗ, ಬೆಸ್ಕಾಂ |
| ಸುಧಾಮಣಿ ಎಸ್.ಜಿ. | ಪಿ.ಎಂ ಶಾಖೆ, ಕೆಪಿಟಿಸಿಎಲ್ ಕಾವೇರಿ ಭವನ |
| ಶ್ರೀರಾಮು ವಿ. | ಕಾರ್ಯ ಮತ್ತು ಪಾಲನಾ ವಿಭಾಗ, ಹೆಬ್ಬಾಳ, ಬೆಸ್ಕಾಂ |
| ಚನ್ನಕೇಶವಮೂರ್ತಿ ಪಿ.ಆರ್. | ಟಿಎ ಮತ್ತು ಕ್ಯುಸಿ ವಿಭಾಗ, ಕೆಪಿಟಿಸಿಎಲ್, ಬೆಂಗಳೂರು |
| ಆನಂದ ಕುಮಾರ್ ಕೆ. | ಕಾರ್ಯ ಮತ್ತು ಪಾಲನಾ ವಿಭಾಗ, ಜಾಲಹಳ್ಳಿ, ಬೆಸ್ಕಾಂ |
| ಸವಿತಾ ಎನ್. | ಇಎಚ್‌ವಿ ಕೇಬಲ್ ವಿಭಾಗ, ಕೆಪಿಟಿಸಿಎಲ್, ಬೆಸ್ಕಾಂ |
| ಧನಂಜಯ ಸಿ. | ಕಾರ್ಯ ಮತ್ತು ಪಾಲನಾ ವಿಭಾಗ, ಕೆಂಗೇರಿ, ಬೆಸ್ಕಾಂ |
| ಅನಿತಾ ಬಿ.ಟಿ. | 220 ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರ, ಕೆಪಿಟಿಸಿಎಲ್, ಎಚ್‌ಎಸ್‌ಆರ್ ಬಡಾವಣೆ |
| ಗಂಗಾಧರ ಬಿ. | ಕಾರ್ಯ ಮತ್ತು ಪಾಲನಾ ವಿಭಾಗ, ರಾಜರಾಜೇಶ್ವರಿ ನಗರ, ಬೆಸ್ಕಾಂ |
| ನಾರಾಯಣ ಸ್ವಾಮಿ ಬಿ. | ಎಂಪಿಡಿ ವಿಭಾಗ, ಕಂಪನಿ ಕಾರ್ಯಾಲಯ, ಬೆಸ್ಕಾಂ |
| ಮುರಳೀಧರ ಕೆ.ಎಚ್. | ಕಾರ್ಯ ಮತ್ತು ಪಾಲನಾ ವಿಭಾಗ, ಕೋರಮಂಗಲ, ಬೆಸ್ಕಾಂ |
| ಕವಿತಾ ಎಲ್. | ಕಾರ್ಯ ಮತ್ತು ಪಾಲನಾ ವಿಭಾಗ, ಕೆಜಿಎಫ್, ಬೆಸ್ಕಾಂ |
| ಪಿ.ಜಿ.ರಮೇಶ್ ಕುಮಾರ್ | ಕಾರ್ಯ ಮತ್ತು ಪಾಲನಾ ವಿಭಾಗ, ಚಿಕ್ಕಬಳ್ಳಾಪುರ, ಬೆಸ್ಕಾಂ |
| ವಿನುತ ವೈ.ಆರ್. | ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ, ಸೆಸ್ಕ್ |
| ಕೆ.ಯೋಗೇಶ್ | ಕಾರ್ಯ ಮತ್ತು ಪಾಲನಾ ವಿಭಾಗ, ಜಯನಗರ, ಬೆಸ್ಕಾಂ |
| ಪ್ರಸನ್ನ ಕುಮಾರ್ | ಕಾಮಗಾರಿ ವಿಭಾಗ, ಬೆಸ್ಕಾಂ, ಕೋಲಾರ |

ಈ ದೂರಿನ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಕರೆ ಮಾಡಲಾಗಿತ್ತು. ಅವರು ಕರೆ ಸ್ವೀಕರಿಸಲಿಲ್ಲ. ಈ ಸಂಬಂಧ ಕಳುಹಿಸಿದ ಸಂದೇಶಕ್ಕೂ ಪ್ರತಿಕ್ರಿಯೆ ನೀಡಿಲ್ಲ.

# ‘ಒಳ ಒಪ್ಪಂದ: ಬಿಜೆಪಿಗೆ ಸೋಲು’

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ‘ಒಳ ಒಪ್ಪಂದದ ರಾಜಕಾರಣದಿಂದ ನಮ್ಮ ಪಕ್ಷಕ್ಕೆ ಹೆಚ್ಚಿನ ಹಾನಿಯಾಗಿದೆ. ರಾಜ್ಯದಲ್ಲಿ 9 ಲೋಕಸಭೆ ಕ್ಷೇತ್ರಗಳಲ್ಲಿ ಸೋಲಲು ಒಳ ಒಪ್ಪಂದವೇ ಕಾರಣ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಒಳ ಒಪ್ಪಂದದಿಂದ ದಾವಣಗೆರೆ, ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ಚಾಮರಾಜನಗರ ಮೊದಲಾದ ಕ್ಷೇತ್ರಗಳಲ್ಲಿ ಸೋಲಾಯಿತು. ವಿ.ಸೋಮಣ್ಣ ಸೋಲಿಸಲು ನಮ್ಮವರೇ ₹6 ಕೋಟಿ ಕೊಟ್ಟಿದ್ದರು. ಶಾಮನೂರು ಶಿವಶಂಕರಪ್ಪ ಶಿವಮೊಗ್ಗಕ್ಕೆ ಹೋಗಿ, ಬಿ.ವೈ.ರಾಘವೇಂದ್ರ ಅವರಿಗೆ ಮತ ನೀಡಿ ಎನ್ನುತ್ತಾರೆ. ರೇಣುಕಾಚಾರ್ಯ ಅವರು ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದ್ದಾರೆ ಎಂಬ ವಿಷಯ ಈಗ ಹೊರಬರುತ್ತಿದೆ’ ಎಂದು ಆರೋಪಿಸಿದರು.

‘ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಬಯಲಿಗೆಳೆಯುವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಯತ್ನಾಳ, ‘15 ತಿಂಗಳಿನಿಂದ ಏನ್ ಮಾಡ್ತಿದ್ದರು, ಪ್ರಮಾಣವಚನ ಸ್ವೀಕರಿಸಿದ ತಕ್ಷಣವೇ ತನಿಖೆ ಆರಂಭಿಸಬೇಕಿತ್ತು. ನಿಮಗೆ ತಾಕತ್ತಿದ್ದರೆ, ಎಲ್ಲ ಪ್ರಕರಣಗಳ ಬಗ್ಗೆ ತನಿಖೆ ನಡೆಸಿ. ನಾವು ಹಿಂದೆ ಸರಿಯುವುದಿಲ್ಲ. ಇದರಿಂದ ನಮ್ಮಲ್ಲಿನ ಭ್ರಷ್ಟರೂ ಸಿಗುತ್ತಾರೆ’ ಎಂದರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಬಳ್ಳಾರಿ ಲೋಕಸಭೆ ಕ್ಷೇತ್ರದ ಚುನಾವಣೆಯಲ್ಲಿ ಸಾರಾಯಿ ಹಂಚಲು ಬಳಸಿದ್ದಾರೆ. ಈ ಪ್ರಕರಣ ಸಭಾತ್ಯಾಗಕ್ಕೆ ಸೀಮಿತಗೊಳಿಸುವುದಿಲ್ಲ. ಸಿಬಿಐನಿಂದ ಎಲ್ಲ ಆಯಾಮಗಳಲ್ಲಿ ತನಿಖೆಯಾಗಲಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಚಲಿಸುತ್ತಿದ್ದ ಕಾರಿನ ಮೇಲೆ ಬಿದ್ದ ಮರ

**ಬಾಳೆಹೊನ್ನೂರು (ಚಿಕ್ಕಮಗಳೂರು):** ಪಟ್ಟಣದಿಂದ ಚಿಕ್ಕಮಗಳೂರಿಗೆ ತೆರಳುವ ರಸ್ತೆಯ ದೇವದಾನ ಎಸ್ಟೇಟ್ ಬಳಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದಿದ್ದು, ಕಾರಿನಲ್ಲಿದ್ದವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರಿನ ಮುಂಭಾಗ ಜಖಂಗೊಂಡಿದೆ.

ಕಡ್ಲೆಮಕ್ಕಿಯ ಸಂತೋಷ್ ಎಂಬುವವರು ಚಿಕ್ಕಮಗಳೂರಿನಿಂದ ಬಾಳೆಹೊನ್ನೂರು ಕಡೆಗೆ ಬರುತ್ತಿದ್ದಾಗ ಘಟನೆ ಸಂಭವಿಸಿದೆ. ಮರವು ವಿದ್ಯುತ್ ತಂತಿಯ ಮೇಲೆ ಬಿದ್ದಿದ್ದು, ಹಲವು ವಿದ್ಯುತ್ ಕಂಬಗಳು ಮುರಿದಿವೆ. ಮರ ರಸ್ತೆಗೆ ಬಿದ್ದಿದ್ದರಿಂದ ರಸ್ತೆ ಸಂಪರ್ಕ ಕಡಿತಗೊಂಡು ಒಂದು ಗಂಟೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಹಿರೇಗದ್ದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಳಿಕೊಪ್ಪ ಕೈಮರದ ಬಸ್ ನಿಲ್ದಾಣದ ಬಳಿ ವಿದ್ಯುತ್ ಪರಿವರ್ತಕದ ಮೇಲೆ ಮರ ಬಿದ್ದಿದ್ದು ಹಾನಿಯಾಗಿದೆ. ಇದರಿಂದ ಗ್ರಾಮದಲ್ಲಿ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿದೆ.

ಕಳಸ ಬಾಳೆಹೊನ್ನೂರು ನಡುವಿನ ಜಕ್ಕಣಕ್ಕಿ ಜಾಕ್ಸನ್ ಶಾಲೆಯ ಬಳಿ ಸೇತುವೆಯ ಅಡಿಭಾಗದ ಕಲ್ಲುಗಳು ಉದುರುತ್ತಿವೆ. ಯಾವುದೇ ಕ್ಷಣ ದಲ್ಲೂ ಸೇತುವೆ ಕುಸಿಯಬಹುದಾಗಿದ್ದು, ಸ್ಥಳದಲ್ಲಿ ಬ್ಯಾರಿಕೇಡ್ ಅಳವಡಿಸಲಾಗಿದೆ. ಸ್ಥಳಕ್ಕೆ ಎಂಜಿನಿಯರ್ ಕಳುಹಿಸಿ ವರದಿ ಪಡೆದು ಕ್ರಮ ಕೈಗೊಳ್ಳಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ ಶ್ರೀಧರ್ ತಿಳಿಸಿದರು.

ಬಾಳೆಹೊನ್ನೂರು –ಚಿಕ್ಕಮಗಳೂರು ರಸ್ತೆಯ ದೇವದಾನ ಬಳಿ ಚಲಿಸುತ್ತಿದ್ದ ಕಾರಿನ ಮೇಲೆ ಮರ ಬಿದ್ದು ಕಾರಿನ ಮುಂಭಾಗ ಸಂಪೂರ್ಣ ಹಾನಿಯಾಗಿದೆ

## ನಾಗೇಂದ್ರ ಕಸ್ಟಡಿ ಇಂದು ಅಂತ್ಯ

**ಬೆಂಗಳೂರು:** ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು (ಇ.ಡಿ), ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಅವರ ಕಸ್ಟಡಿಯನ್ನು ವಿಸ್ತರಿಸುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸುವ ಸಾಧ್ಯತೆ ಇದೆ.

ಈ ಪ್ರಕರಣದಲ್ಲಿ ಜುಲೈ 12ರಂದು ನಾಗೇಂದ್ರ ಅವರನ್ನು ಇ.ಡಿ ಬಂಧಿಸಿತ್ತು. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ನಾಗೇಂದ್ರ ಅವರನ್ನು ಜುಲೈ 18ರವರೆಗೆ ಇ.ಡಿ ಕಸ್ಟಡಿಗೆ ಒಪ್ಪಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಇನ್ನಷ್ಟು ವಿಚಾರಣೆಗೆ ಒಳಪಡಿಸಬೇಕು ಎಂದು ಇ.ಡಿ ಕೋರಿದ್ದ ಕಾರಣ, ನ್ಯಾಯಾಲಯವು ಜುಲೈ 22ರವರೆಗೆ ಕಸ್ಟಡಿ ವಿಸ್ತರಿಸಿತ್ತು.

# 2050ರ ವೇಳೆಗೆ ವಯೋವೃದ್ಧರ ಸಂಖ್ಯೆ ದುಪ್ಪಟ್ಟಾಗುವ ನಿರೀಕ್ಷೆ

**ನವದೆಹಲಿ (ಪಿಟಿಐ):** 2050ರ ವೇಳೆಗೆ ದೇಶದಲ್ಲಿ ವಯೋವೃದ್ಧರ ಜನಸಂಖ್ಯೆಯು ದುಪ್ಪಟ್ಟಾಗಲಿದೆ. ಹೀಗಾಗಿ, ಆರೋಗ್ಯ, ವಸತಿ ಮತ್ತು ಪಿಂಚಣಿ ಯೋಜನೆಗಳ ಮೇಲೆ ಹೆಚ್ಚಿನ ಬಂಡವಾಳ ಹೂಡುವ ಅಗತ್ಯವಿದೆ ಎಂದು ವಿಶ್ವಸಂಸ್ಥೆಯ ಜನಸಂಖ್ಯಾ ಚಟುವಟಿಕೆಗಳ ದತ್ತಿಯ (ಯುಎನ್‌ಎಫ್‌ಪಿಎ) ಭಾರತದ ಪ್ರತಿನಿಧಿ ಆ್ಯಂಡ್ರಿಯಾ ವ್ರೊಜ್ನಾರ್ ಹೇಳಿದ್ದಾರೆ.

ವಯೋವೃದ್ಧ ಮಹಿಳೆಯರು ಏಕಾಂಗಿಯಾಗಿ ಮತ್ತು ಬಡತನದಲ್ಲಿ ಬದುಕಬೇಕಾಗ ಅನಿವಾರ್ಯತೆ ಎದುರಿಸುತ್ತಾರೆ ಎಂದು ಅವರು ವಿಶ್ವ ಜನಸಂಖ್ಯಾ ದಿನದ (ಜುಲೈ 11) ಹಿನ್ನೆಲೆಯಲ್ಲಿ ಪಿಟಿಐ ಸುದ್ದಿಸಂಸ್ಥೆಗೆ ನೀಡಿದ್ದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಭಾರತದ ಜನಸಂಖ್ಯಾ ಪ್ರವೃತ್ತಿ ಕುರಿತು ಗಮನಸೆಳೆದ ಅವರು, ಯುವಕರು, ವಯೋವೃದ್ಧರ ಜನಸಂಖ್ಯೆ, ನಗರೀಕರಣ, ವಲಸೆ ಮತ್ತು ಹವಾಮಾನ ಬದಲಾವಣೆಯು ದೇಶಕ್ಕೆ ವಿವಿಧ ರೀತಿಯ ಸವಾಲುಗಳನ್ನು ಒಡ್ಡಲಿವೆ ಎಂದರು.

ಇದೇವೇಳೆ, ದೇಶದ ಯುವಜನರ ಜನಸಂಖ್ಯೆಯಲ್ಲೂ ಏರಿಕೆಯಾಗಲಿದೆ. 10ರಿಂದ 19 ವರ್ಷ ವಯೋಮಾನದವರ ಸಂಖ್ಯೆಯು 25.5 ಕೋಟಿ ತಲುಪಲಿದೆ. ಆರೋಗ್ಯ, ಶಿಕ್ಷಣ, ವೃತ್ತಿಪರ ತರಬೇತಿ, ಉದ್ಯೋಗ ಸೃಷ್ಟಿ, ಲಿಂಗ ಸಮಾನತೆಗೆ ಒತ್ತು ನೀಡಿದರೆ ದೇಶದ ಸುಸ್ಥಿರ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ವ್ರೊಜ್ನಾರ್ ತಿಳಿಸಿದರು.

ನಗರಾಭಿವೃದ್ಧಿ ಯೋಜನೆಗಳು ಮಹಿಳೆಯರ ಭದ್ರತೆ ಮತ್ತು ಸುರಕ್ಷತೆಗೆ ಒತ್ತು ನೀಡುವಂತಿರಬೇಕು. ಲಿಂಗಸಮಾನತೆಗೆ ಒತ್ತು ನೀಡುವ ನಿಟ್ಟಿನಲ್ಲಿ ಮಹಿಳೆಯರಿಗಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಬೇಕು, ಒಟ್ಟಾರೆ ಜೀವನಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕು.

ಭಾರತದ ಅಳವಡಿಸಿಕೊಂಡಿರುವ ಕುಟುಂಬ ಯೋಜನೆ ಕಾರ್ಯಕ್ರಮವನ್ನು ಅವರು ಶ್ಲಾಘಿಸಿದರು. ಈ ರೀತಿಯ ಯೋಜನೆ ರೂಪಿಸಿದ ಮೊದಲ ರಾಷ್ಟ್ರ ಭಾರತ ಎಂದರು.


ಹುಬ್ಬಳ್ಳಿ ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implementation of Smart City Project
(Registered Company No. CIN : U74999KA2017 PLC 101265)
ಸಿಎಸ್‌ಎಸ್ ನಂ. 122/124. ಎಚ್‌ಡಿಎಂಸಿ ಸಾಂಸ್ಕೃತಿಕ ಭವನ, 1ನೇ ಮಹಡಿ, ನ್ಯೂ ಕಾಟನ್ ಮಾರ್ಕೆಟ್ ರಸ್ತೆ, ಹುಬ್ಬಳ್ಳಿ–580029.
Ph: 0836-2355322. Fax: 0836-2355331. Control Room Assistance: 2213888/2213898.
Website: www.hubballidharwadsmartcity.com, E-mail: smartcityhubballidharwad@gmail.com

No: HDSCL/NLTender_call2/MD/2024-25/225 Date: 22-07-2024

ಇ–ಟೆಂಡರ ಅಧಿಸೂಚನೆ – 2ನೇ ಕರೆ (ಅಲ್ಪಾವಧಿ)

ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000 ರ ಪ್ರಕಾರ ಆ್ಯಕ್ಟ್–2000 ರ ನಿಯಮದಂತೆ ಗುತ್ತಿಗೆದಾರರು ಮತ್ತು ನೋಂದಾಯಿತ ಸಂಸ್ಥೆಗಳಿಂದ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ, Construction of Nala with RCC wall, Cement Concrete road, asphalt road with RCC drain works at ward No.78 of Eshwar Nagar & Ward No.73 of Hanafi town Hubballi ಕಾಮಗಾರಿ ಕೈಗೊಳ್ಳುವ ಸಲುವಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಸಾಮಾನ್ಯ ಸೂಚನೆಗಳು : 1) ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು. 2) ಇ.ಎಂ.ಡಿ ಹಣವನ್ನು ಆನ್‌ಲೈನ್ ಮೂಲಕ ಸಂದಾಯ ಮಾಡುವುದು.
ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್ ಸಂಸ್ಥೆಗೆ ಕಚೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ 0836–2355331, 2355322 ರಿಂದ ಮಾಹಿತಿ ಪಡೆಯಬಹುದು. ಟೆಂಡರ ದಾಖಲೆಗಳನ್ನು ಕರ್ನಾಟಕ ಸರಕಾರ ಅಂತರ್ ಜಾಲ ವೆಬ್‌ಸೈಟ್ ವಿಳಾಸ https://kppp.karnataka.gov.in ರಲ್ಲಿ ಪಡೆಯಬಹುದು. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರ ಟೆಂಡರ್‌ನಲ್ಲಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ದಾಖಲಿಸಿ ಪ್ರಕಟಿಸಲಾಗುವುದು.
Indent No.: HDSCL/2024-25/OW/WORK_INDENT05/CALL-2. Name of Work: Construction of Nala with RCC wall, Cement Concrete road, asphalt road with RCC drain works at ward No.78 of Eshwar Nagar & ward No.73 of Hanafi Town Hubballi. Amount Put to Tender: Rs. 103713491/-. EMD Amount: Rs.1037500/-. Tender documents available from: 22-07-2024. Pre-bid meeting held on: 29-07-2024 at 11.00 hrs at Office of HDSCL, New Cotton market Road, Hubballi. Last date for submission of tender documents: 03-08-2024 at 16:30 hrs. Technical proposal will be opened on: 06-08.2024, at 16.30 hrs. Project duration: 6 Months.
ಸಹಿ/– ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್, ಹುಬ್ಬಳ್ಳಿ
ವಾಸಾಸಂಇ/ಧಾರವಾಡ/183/ಅಡ್ವರ್ಟೋರ್/2023–24
ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ–ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್, ಹುಬ್ಬಳ್ಳಿ

❦ ಸುಭಾಷಿತ ❦

ಜೀವನದಲ್ಲಿ ಏನಾಗಬಯಸುತ್ತೇನೆ ಎಂದು ಬರೆಯಲು ತಿಳಿಸಲಾಗಿತ್ತು. 'ಸಂತೋಷವಾಗಿರಲು' ಎಂದು ಬರೆದಿದ್ದೆ. 'ನಿನಗೆ ಅಸೈನ್‌ಮೆಂಟ್ ಅರ್ಥವಾಗಿಲ್ಲ' ಎಂದರು. 'ನೀವು ಜೀವನ ಎಂದರೇನೆಂದು ಅರ್ಥಮಾಡಿಕೊಂಡಿಲ್ಲ' ಎಂದೆ.

-ಜಾನ್ ಲೆನನ್

# ಸೈಬರ್ ಸುರಕ್ಷತೆಯ ಅಗತ್ಯ ಎತ್ತಿ ಹಿಡಿದ ಮೈಕ್ರೊಸಾಫ್ಟ್ ವೈಫಲ್ಯ

**ಮೈಕ್ರೊಸಾಫ್ಟ್‌ನ** ವಿಂಡೋಸ್ ವ್ಯವಸ್ಥೆಯಲ್ಲಿ ಉಂಟಾದ ತಾಂತ್ರಿಕ ವೈಫಲ್ಯದಿಂದಾಗಿ ಹಲವು ಸೇವೆಗಳು, ವ್ಯಾಪಾರ– ವಹಿವಾಟು ಮತ್ತು ಜನಜೀವನ ಅಸ್ತವ್ಯಸ್ತಗೊಂಡಿವೆ. ಜಗತ್ತಿನಾದ್ಯಂತ ಶುಕ್ರವಾರ ಉಂಟಾದ ಈ ವೈಫಲ್ಯ ಡಿಜಿಟಲ್ ಸಾಂಕ್ರಾಮಿಕದಂತೆ ಎಲ್ಲೆಡೆ ವ್ಯಾಪಿಸಿತು. ಹಲವು ವಿಮಾನಗಳ ಹಾರಾಟ, ಆರೋಗ್ಯ ಸೇವೆಗಳು ಸ್ಥಗಿತಗೊಂಡವು. ಬ್ಯಾಂಕಿಂಗ್‌ನಂತಹ ಹಣಕಾಸು ಚಟುವಟಿಕೆಗಳು, ಚಿಲ್ಲರೆ ವ್ಯಾಪಾರಗಳಿಗೆಲ್ಲ ತೊಡಕು ಉಂಟಾಯಿತು. ಭಾರತದಲ್ಲಿಯೂ ಈ ವೈಫಲ್ಯದ ಪರಿಣಾಮ ಕಾಣಿಸಿಕೊಂಡಿದೆ. ಸಾಫ್ಟ್‌ವೇರ್ ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆಯಲ್ಲಿ ಈ ಸಮಸ್ಯೆ ಉಂಟಾಗಿದೆ. ವಿರೋಧಾಭಾಸ ಎಂದರೆ, ಕ್ರೌಡ್‌ಸ್ಟ್ರೈಕ್ ಎಂಬ ಸೈಬರ್ ಸುರಕ್ಷತೆ ಒದಗಿಸುವ ಪ್ರಮುಖ ಕಂಪನಿಯೇ ಸಾಫ್ಟ್‌ವೇರ್ ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆ ನಡೆಸಿತ್ತು. ಸೈಬರ್ ಬೆದರಿಕೆಗಳನ್ನು ಗುರುತಿಸಿ ಕಂಪ್ಯೂಟರ್ ವ್ಯವಸ್ಥೆಗೆ ರಕ್ಷಣೆ ಒದಗಿಸುವುದೇ ಈ ಕಂಪನಿಯ ಮುಖ್ಯ ಕೆಲಸ. ಸಾಫ್ಟ್‌ವೇರ್ ಸರಪಣಿ ಮೂಲಕ ಇಡೀ ಜಗತ್ತನ್ನು ಒಟ್ಟಾಗಿ ಜೋಡಿಸಿರುವ ವ್ಯವಸ್ಥೆಯು ಎಷ್ಟು ದುರ್ಬಲವಾಗಿದೆ ಎಂಬುದನ್ನು ಈ ವೈಫಲ್ಯವು ಎತ್ತಿ ತೋರಿಸಿದೆ. ಬಹಳಷ್ಟು ಪ್ರದೇಶಗಳಲ್ಲಿ ಸಮಸ್ಯೆಯನ್ನು ಪರಿಹರಿಸಲಾಗಿದೆ. ಸಮಸ್ಯೆಯ ಅಗಾಧತೆಯನ್ನು ಗಮನಿಸಿದರೆ ದುರಸ್ತಿಯು ಬಹಳ ತ್ವರಿತವಾಗಿಯೇ ಆಗಿದೆ. ಆದರೆ, ಸಂಪೂರ್ಣ ಸರಿಪಡಿಸಲು ಇನ್ನೂ ಹಲವು ವಾರಗಳು ಬೇಕಾಗಬಹುದು.

ಸೈಬರ್ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಅವಲಂಬನೆಯನ್ನು ತಪ್ಪಿಸುವುದಕ್ಕಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ

ಮೈಕ್ರೊಸಾಫ್ಟ್‌ನ ವೈಫಲ್ಯವು ಕಂಪ್ಯೂಟರ್ ವ್ಯವಸ್ಥೆಯ ಸುರಕ್ಷತೆ, ಈ ವ್ಯವಸ್ಥೆಯಲ್ಲಿ ಇರುವ ಅಗಾಧ ಪ್ರಮಾಣದ ದತ್ತಾಂಶಗಳ ಸುರಕ್ಷತೆ ಕುರಿತಂತೆ ಪ್ರಶ್ನೆಗಳು ಮೂಡುವಂತೆ ಮಾಡಿದೆ. ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ಆಗುವ ಉಲ್ಲಂಘನೆಗಳು ಭಾರಿ ಪ್ರಮಾಣದ ನಷ್ಟವನ್ನು ಉಂಟು ಮಾಡಬಲ್ಲವು. ಶುಕ್ರವಾರ ನಡೆದ ಬುಡಮೇಲು ಕೃತ್ಯವು ಉದ್ದೇಶಪೂರ್ವಕ ದುಷ್ಕೃತ್ಯ ಅಲ್ಲದಿರಬಹುದು. ಆದರೆ, ಹಲವು ಸುತ್ತಿನ ಕಾವಲು ವ್ಯವಸ್ಥೆಯಲ್ಲಿ ಲೋಪ ಎಲ್ಲಿ ಆಗಿದೆ ಎಂಬುದನ್ನು ಗುರುತಿಸಲೇಬೇಕು. ಪರೀಕ್ಷೆ, ನಿಯೋಜನೆ ಅಥವಾ ಮೇಲ್ದರ್ಜೆಗೆ ಏರಿಸುವ ಪ್ರಕ್ರಿಯೆಯಲ್ಲಿ ಸಮಸ್ಯೆ ಉಂಟಾಗಿ ಕಂಪ್ಯೂಟರ್‌ನ ಪರದೆಯಲ್ಲಿ ಏನೂ ಕಾಣದಂತಹ ಸ್ಥಿತಿ ನಿರ್ಮಾಣ ಆಗಿದ್ದಿರಬಹುದು. ಹಲವು ಹಂತಗಳಲ್ಲಿ ಹಲವು ಸುತ್ತಿನ ಭದ್ರತಾ ವ್ಯವಸ್ಥೆ ಇದ್ದರೂ ಕಂಪ್ಯೂಟರ್ ವ್ಯವಸ್ಥೆಯೇ ಬುಡಮೇಲುಗೊಂಡದ್ದು ಉಪೇಕ್ಷಿಸುವಂಥ ಸುದ್ದಿಯಂತೂ ಅಲ್ಲ. ಸಮಸ್ಯೆಯನ್ನು ತಕ್ಷಣವೇ ಗುರುತಿಸಿ, ಸರಿಪಡಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದು ದುರುದ್ದೇಶದ ದಾಳಿಯೇನಾದರೂ ಆಗಿದ್ದಿದ್ದರೆ ಪರಿಣಾಮವು ಭೀಕರ ಆಗಿರುತ್ತಿತ್ತು. ವಿಜ್ಞಾನ ಕತೆಗಳಲ್ಲಿ ಆಗುವಂತೆ ಭಾರಿ ಪ್ರಮಾಣದ ವಿನಾಶದ ಸನ್ನಿವೇಶ ಸೃಷ್ಟಿ ಆಗುತ್ತಿತ್ತು ಮತ್ತು ಸಾವಿರಾರು ಕೋಟಿ ರೂಪಾಯಿಯ ನಷ್ಟ ಉಂಟಾಗಬಹುದಿತ್ತು. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಕಂಪ್ಯೂಟರ್ ವ್ಯವಸ್ಥೆಯಲ್ಲಿ ಇಂತಹುದೇನಾದರೂ ಆದರೆ ಅದರ ಪರಿಣಾಮವನ್ನು ಊಹಿಸಲೂ ಆಗದು. ಆದರೆ, ಇಂತಹ ವ್ಯವಸ್ಥೆಗಳು ಸಂಪೂರ್ಣವಾಗಿ ಪ್ರತ್ಯೇಕವಾಗಿರುತ್ತವೆ ಮತ್ತು ಕುತಂತ್ರಾಂಶಗಳು, ವೈರಸ್‌ಗಳ ದಾಳಿಯನ್ನು ತಡೆಯಬಲ್ಲ ರೀತಿಯಲ್ಲಿ ಇರುತ್ತವೆ ಎಂದು ಹೇಳಲಾಗುತ್ತಿದೆ. ಆದರೆ, ಬೃಹತ್ ಪ್ರಮಾಣದ ಸೈಬರ್ ದಾಳಿಯ ಕುರಿತು ಯಾರೂ ಯೋಚಿಸಲಿಕ್ಕೇ ಇಲ್ಲ ಎಂದು ನಾವು ಭಾವಿಸಲು ಸಾಧ್ಯವಿಲ್ಲ.

ಕೇಂದ್ರೀಕೃತ ಮತ್ತು ಪರಸ್ಪರ ಜೋಡಿಸಲ್ಪಟ್ಟ ಸೈಬರ್ ವ್ಯವಸ್ಥೆಯ ಮೇಲೆ ಜಗತ್ತಿಗೆ ಇರುವ ಅವಲಂಬನೆಯ ಪ್ರತಿಕೂಲ ಪರಿಣಾಮಗಳು ಹೇಗಿರಬಹುದು ಎಂಬುದರತ್ತ ಮೈಕ್ರೊಸಾಫ್ಟ್ ಸ್ಥಗಿತವು ಬೆಳಕು ಚೆಲ್ಲಿದೆ. ಹಾಗೆಯೇ ತಂತ್ರಜ್ಞಾನ ಪೂರೈಕೆಗಾಗಿ ಕೆಲವೇ ಕೆಲವು ಬೃಹತ್ ಸಂಸ್ಥೆಗಳನ್ನು ಅವಲಂಬಿಸುವುದರ ಕೆಟ್ಟ ಪರಿಣಾಮವನ್ನೂ ಇದು ಮನದಟ್ಟು ಮಾಡಿಸಿದೆ. ಜಾಗತಿಕ ಮಟ್ಟದಲ್ಲಿ ಸರ್ವರ್‌ಗಳು ಮತ್ತು ಉಪಗ್ರಹಗಳ ಮೇಲಿನ ಅವಲಂಬನೆಯು ಅನನುಕೂಲ ಹಾಗೂ ತೊಂದರೆಯ ಅಪಾಯವನ್ನಷ್ಟೇ ಒಡ್ಡುತ್ತಿಲ್ಲ; ಬದಲಿಗೆ ಭಾರಿ ವಿನಾಶವನ್ನೂ ಉಂಟು ಮಾಡಬಹುದು. ಸೈಬರ್ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಅವಲಂಬನೆಯನ್ನು ತಪ್ಪಿಸುವುದಕ್ಕಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳುವ ಅಗತ್ಯವನ್ನು ಈಗಿನ ವೈಫಲ್ಯವು ಎತ್ತಿ ತೋರಿಸಿದೆ. ಇನ್ನಷ್ಟು ಪ್ರಬಲವಾದ ಸುರಕ್ಷತಾ ವ್ಯವಸ್ಥೆ, ಫೈರ್‌ವಾಲ್‌ಗಳನ್ನು ರೂಪಿಸಬೇಕಿದೆ. ಜಾಗತಿಕ ಮಟ್ಟದ ವೈಫಲ್ಯಗಳು ಉಂಟಾದಾಗ ಅದರ ಪರಿಣಾಮವನ್ನು ಕನಿಷ್ಠಗೊಳಿಸುವ ಮತ್ತು ಅಪಾಯವನ್ನು ತಗ್ಗಿಸುವ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಬೇಕಿದೆ. ಇಡೀ ಜಗತ್ತಿಗೆ ಕಿರಿದಾದ ಏಕೈಕ ಕಿಂಡಿಯಷ್ಟೇ ಇದ್ದರೆ ಉಸಿರು ಕಟ್ಟುವುದು ಖಚಿತ. ಬಿಕ್ಕಟ್ಟಿನ ಎರಡನೇ ಅಲೆಯ ಕುರಿತು ಎಚ್ಚರಿಕೆಯನ್ನು ಈಗಾಗಲೇ ನೀಡಲಾಗಿದೆ. ಜಗತ್ತು ಅದನ್ನು ಎದುರಿಸಲು ಬೇಕಾದ ಸನ್ನದ್ಧತೆಯನ್ನು ರೂಪಿಸಿಕೊಳ್ಳಬೇಕು.

## ದಿನದ ಟ್ವೀಟ್

### ಮಳೆನೀರಿನ ಮಹತ್ವ ಅರಿಯೋಣ



ಎಲ್ಲಿಯವರೆಗೆ ಮಳೆನೀರನ್ನು ಉಳಿಸಿ ಬೇಸಿಗೆಯಲ್ಲಿ ಅದನ್ನು ಬಳಸುವುದನ್ನು ನಾವು ಕಲಿಯುವುದಿಲ್ಲವೋ ಅಲ್ಲಿಯವರೆಗೂ ಎಷ್ಟೇ ಮಳೆ ಬಂದರೂ ಅದು ಲೆಕ್ಕಕ್ಕೆ ಇಲ್ಲದಂತೆಯೇ ಸರಿ.

**ಐವಿನ್ ಡಿಮೆಲ್ಲೊ,** ಹವ್ಯಾಸಿ ಪತ್ರಕರ್ತೆ

## ಕಿಡಿನುಡಿ

ಐಎಎಸ್‌ನಲ್ಲಿ ಅಂಗವೈಕಲ್ಯದ ಕೋಟಾ ತೆಗೆದುಹಾಕಬೇಕೆಂದು ಕೆಲವು ಐಎಎಸ್ ಅಧಿಕಾರಿಗಳು ಟ್ವೀಟ್ ಮಾಡುತ್ತಿರುವುದನ್ನು ಓದಿದರೆ ದಿಗಿಲಾಗುತ್ತದೆ. 2014ರ ಯುಪಿಎಸ್‌ಸಿಯಲ್ಲಿ ಮೊದಲ ರ‍್ಯಾಂಕ್ ಬಂದವರು ಅಂಗವಿಕಲರಲ್ಲವೇ? ವಿಶ್ವದ ಉನ್ನತ ಖಭೌತ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಅಂಗವಿಕಲರಾಗಿರಲಿಲ್ಲವೇ? ತಪ್ಪೆಸಗುವವರ ವಿರುದ್ಧ ನಾವು ಕ್ರಮ ಜರುಗಿಸಬೇಕೇ ವಿನಾ ಅಂಗವೈಕಲ್ಯದ ಕೋಟಾ ತೆಗೆದುಹಾಕುವುದಲ್ಲ.

**ನಿಪುಣ್ ಮಲ್ಹೋತ್ರ,** ಸಂಸ್ಥಾಪಕ, ವ್ಹೀಲ್ಸ್ ಫಾರ್ ಲೈಫ್

## 25 ವರ್ಷಗಳ ಹಿಂದೆ

ಗುರುವಾರ, 22-7-1999

- **ಮತ್ತೆ ಜನತಾದಳ ವಿಭಜನೆ ಬಿಕ್ಕಟ್ಟಿನಲ್ಲಿ ರಾಜ್ಯ ಸರ್ಕಾರ**

**ನವದೆಹಲಿ, ಜುಲೈ 21–** ಬಿಜೆಪಿ ನೇತೃತ್ವದ ರಾಷ್ಟ್ರೀಯ ಜನತಾಂತ್ರಿಕ ಮೈತ್ರಿಕೂಟ ಸೇರುವ ವಿಷಯದಲ್ಲಿ ಜನತಾದಳ ಇಂದು ಅಧಿಕೃತವಾಗಿ ಇಬ್ಭಾಗವಾಯಿತು. ಎನ್‌ಡಿಎ ಜತೆ ಹೋಗುವ ದಳಕ್ಕೆ ಶರದ್ ಯಾದವ್ ಅಧ್ಯಕ್ಷರಾಗಿ ಮುಂದುವರಿದರೆ, ತನ್ನ ಹಳೆಯ ಸಿದ್ಧಾಂತ ಮತ್ತು ಕಾರ್ಯಕ್ರಮಗಳಿಗೇ ಕಟ್ಟುಬಿದ್ದಿರುವ ದಳಕ್ಕೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆ.

ಪಕ್ಷ ವಿರೋಧಿ ಚಟುವಟಿಕೆಗಾಗಿ ಶರದ್ ಯಾದವ್ ಅವರನ್ನು ದಳದಿಂದ ಅದರ ರಾಜಕೀಯ ವ್ಯವಹಾರಗಳ ಸಮಿತಿಯು ಉಚ್ಚಾಟಿಸಿದರೆ, ಈ ಸಮಿತಿಯನ್ನು ಕೂಡಲೇ ಪುನರ್‌ರಚಿಸುವುದಾಗಿ ಯಾದವ್ ಪ್ರಕಟಿಸಿದ್ದಾರೆ. ಪ್ರಮುಖ ವಿವಾದದ ವಿಷಯವಾಗಿದ್ದ ಎನ್‌ಡಿಎ ಸೇರ್ಪಡೆಯನ್ನು ರಾಜಕೀಯ ವ್ಯವಹಾರಗಳ ಸಮಿತಿ ಸಭೆಯು ಬಹುಮತದಿಂದ ತಿರಸ್ಕರಿಸಿತ್ತು.

ಆದರೂ ಈ ನಿರ್ಧಾರವನ್ನು ವಿರೋಧಿಸಿ ಎನ್‌ಡಿಎ ಪರವಾದ ಬಣದಲ್ಲಿ ಗುರುತಿಸಿಕೊಂಡಿರುವ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ವಿರುದ್ಧವೂ ನಾಳೆ, ನಾಡಿದ್ದು ಕ್ರಮ ಕೈಗೊಳ್ಳಲು ದೇವೇಗೌಡ ಮತ್ತು ಸಿದ್ದರಾಮಯ್ಯ ನೇತೃತ್ವದ ದಳವು ನಿರ್ಧರಿಸಿದೆ.

**ಬೆಂಗಳೂರು ವರದಿ:** ಜನತಾದಳ ವಿಸರ್ಜನೆಯ ನಂತರವೂ ತಾವು ವಿಧಾನಸಭೆಯಲ್ಲಿ ಸ್ಪಷ್ಟ ಬಹುಮತ ಹೊಂದಿರುವುದರಿಂದ ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಹೇಳಿದರು.

## 50 ವರ್ಷಗಳ ಹಿಂದೆ

ಸೋಮವಾರ, 22-7-1974

- **ಹಣದುಬ್ಬರ, ಕಪ್ಪುಹಣ ತಡೆಗೆ ಇನ್ನೂ ಹಲವು ಕ್ರಮ: ಚವಾಣ್**

**ನವದೆಹಲಿ, ಜುಲೈ 21–** ಹಣದುಬ್ಬರ ಮತ್ತು ಕಪ್ಪುಹಣ ತಡೆಗಟ್ಟಲು ಇನ್ನೂ ಕೆಲವು ಉಗ್ರ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಹಣಕಾಸು ಮಂತ್ರಿ ವೈ.ಬಿ. ಚವಾಣ್ ಅವರು ಇಂದು ಇಲ್ಲಿ ಸೂಚಿಸಿದರು.

ಎ.ಐ.ಸಿ.ಸಿ. ಅಧಿವೇಶನದಲ್ಲಿ ಆರ್ಥಿಕ ನೀತಿ ನಿರ್ಣಯದ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತಿದ್ದ ಚವಾಣ್ ಅವರು, 'ಹಣದುಬ್ಬರ ಹಾಗೂ ಕಪ್ಪುಹಣದ ತಡೆಗೆ ಸರ್ಕಾರ ಸಮಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತದೆ. ಆದರೆ ಈ ಕಾರ್ಯಕ್ರಮಗಳನ್ನು ತತ್‌ಕ್ಷಣವೇ ಹೊರಗೆಡಹುವುದಿಲ್ಲ' ಎಂದರು.

- **'ಭಾರತೀಯ ಲೋಕದಳ'**

**ನವದೆಹಲಿ, ಜುಲೈ 21–** ಭಾರತೀಯ ಲೋಕದಳ. ವಿರೋಧ ಪಕ್ಷಗಳ ವಿಲೀನದಿಂದ ಉದಯಿಸಲಿರುವ ಹೊಸ ಪಕ್ಷವಿದು.

ಭಾರತೀಯ ಕ್ರಾಂತಿದಳದ ಅಧ್ಯಕ್ಷ ಚರಣ್ ಸಿಂಗ್ ಈ ನಿರ್ಧಾರವನ್ನು ಇಂದು ಇಲ್ಲಿ ಪ್ರಕಟಿಸಿದರು. ಈ ಹೊಸ ಪಕ್ಷದ ಉದ್ಘಾಟನೆ ಆ.14ರಂದು ರಾಜಧಾನಿಯಲ್ಲಿ ನಡೆಯುವುದು ಎಂದೂ ಹೇಳಿದರು. ವಿಲೀನವಾಗಲಿರುವ ಏಳು ಪಕ್ಷಗಳ ನಾಯಕರು ಹೊಸ ಪಕ್ಷದ ಧ್ವಜ ಹಾಗೂ ಚುನಾವಣೆ ಸಂಕೇತಗಳನ್ನು ಅಂಗೀಕರಿಸಿದರು.

ಕೆಲವು ಬೆಳವಣಿಗೆಗಳು ಇಂತಹ ಅನುಮಾನವನ್ನು ಜೀವಂತವಾಗಿ ಇಟ್ಟಿವೆ

# ಜಮ್ಮು– ಕಾಶ್ಮೀರ: ನಡೆಯುವುದೇ ಚುನಾವಣೆ?

ವಿಶ್ಲೇಷಣೆ

ಬಿ.ಎಸ್.ಅರುಣ್

**ಪ್ರಕ್ಷುಬ್ಧ** ಸ್ಥಿತಿಯಿಂದ ಬಳಲಿರುವ ಜಮ್ಮು-ಕಾಶ್ಮೀರದಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ, ಈ ಸೆಪ್ಟೆಂಬರ್ 30ರ ಒಳಗೆ ವಿಧಾನಸಭೆ ಚುನಾವಣೆ ನಡೆಯಬಹುದೇ? ಈ ವಿಷಯದಲ್ಲಿ ಕೇಂದ್ರ ಸರ್ಕಾರ ಒಂದಕ್ಕಿಂತ ಹೆಚ್ಚು ಬಾರಿ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದೆಯಾದರೂ ಕೆಲವು ಬೆಳವಣಿಗೆಗಳು ಸದ್ಯದಲ್ಲಿ ಚುನಾವಣೆ ಸಾಧ್ಯತೆಯ ಬಗ್ಗೆ ಅನುಮಾನಗಳನ್ನು ಹುಟ್ಟುಹಾಕಿವೆ.

ಆರು ವರ್ಷಗಳಿಂದ ಈ ಕೇಂದ್ರಾಡಳಿತ ಪ್ರದೇಶದಲ್ಲಿ ಜನಪ್ರಿಯ ಸರ್ಕಾರ ಆಡಳಿತದಲ್ಲಿಲ್ಲ. ಇಲ್ಲಿ ಕೊನೆಯ ಬಾರಿ ವಿಧಾನಸಭೆ ಚುನಾವಣೆ ನಡೆದದ್ದು 2014ರಲ್ಲಿ, ಅಂದರೆ 10 ವರ್ಷಗಳ ಹಿಂದೆ. ಆ ಚುನಾವಣೆಯ ನಂತರ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಮತ್ತು ಬಿಜೆಪಿ ಒಂದು ಒಪ್ಪಂದಕ್ಕೆ ಬಂದು ಸರ್ಕಾರ ರಚಿಸಿದವು. 2015ರ ಮಾರ್ಚ್‌ನಲ್ಲಿ ಮುಖ್ಯಮಂತ್ರಿಯಾದ ಪಿಡಿಪಿ ನಾಯಕ ಮುಫ್ತಿ ಮಹಮ್ಮದ್ ಸಯೀದ್ 2016ರ ಜನವರಿಯಲ್ಲಿ ನಿಧನರಾದರು. ನಂತರ ಅವರ ಪುತ್ರಿ ಮೆಹಬೂಬ ಮುಫ್ತಿ ತಂದೆಯ ಸ್ಥಾನ ತುಂಬಿದರು. ಆದರೆ ಮುಂದಿನ 2 ವರ್ಷ 77 ದಿನಗಳಲ್ಲಿ 'ಭದ್ರತಾ ಪರಿಸ್ಥಿತಿ ಬಿಗಡಾಯಿಸುತ್ತಿದೆ' ಎಂದು ಹೇಳಿ, 2018ರ ಜೂನ್‌ನಲ್ಲಿ ಬಿಜೆಪಿಯು ರಾಜ್ಯ ಸರ್ಕಾರಕ್ಕೆ ನೀಡಿದ್ದ ತನ್ನ ಬೆಂಬಲವನ್ನು ವಾಪಸ್ ಪಡೆಯಿತು. ಜೊತೆಗೆ ಇಲ್ಲಿ ರಾಷ್ಟ್ರಪತಿ ಆಡಳಿತವನ್ನು ಹೇರಿತು. ಅದು ಈವರೆಗೂ ಜಾರಿಯಲ್ಲಿದೆ.

2018ರಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರ ತೆಗೆದುಕೊಂಡ ಕೆಲವು ನಿರ್ಧಾರಗಳು ವಿಧಾನಸಭೆ ಚುನಾವಣೆ ಸೆಪ್ಟೆಂಬರ್ ಒಳಗೆ ಆಗುತ್ತದೋ ಇಲ್ಲವೋ ಎನ್ನುವುದರ ಮೇಲೆ ಪರಿಣಾಮ ಉಂಟು ಮಾಡಬಹುದು. ಸಂವಿಧಾನದ 370ನೇ ವಿಧಿ ಅನ್ವಯ ರಾಜ್ಯಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ರದ್ದು ಮಾಡಿದ್ದು ಇವುಗಳಲ್ಲಿ ಅತ್ಯಂತ ಮುಖ್ಯವಾದುದು. ಇದರ ಜೊತೆಗೆ, ರಾಜ್ಯ ಸ್ಥಾನಮಾನವನ್ನು ತೆಗೆದುಹಾಕಿ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವೆಂದು ಘೋಷಿಸಲಾಯಿತು. ಅವರೆಗೂ ರಾಜ್ಯದ ಭಾಗವಾಗಿದ್ದ ಲಡಾಖ್ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವಾಯಿತು. ನಂತರದ ಪ್ರಮುಖ ವಿದ್ಯಮಾನ ವಿಧಾನಸಭಾ ಚುನಾವಣಾ ಕ್ಷೇತ್ರಗಳ ಪುನರ್ ವಿಂಗಡಣೆ. 87 ಇದ್ದ (ಲಡಾಖ್‌ನ 4 ಕ್ಷೇತ್ರಗಳೂ ಸೇರಿದಂತೆ) ರಾಜ್ಯದ ಒಟ್ಟು ಕ್ಷೇತ್ರಗಳನ್ನು ಡಿಲಿಮಿಟೇಷನ್ ಆಯೋಗವು ಪುನರ್ ವಿಂಗಡಿಸಿ 2022ರಲ್ಲಿ 90 ಮಾಡಿತು (ಲಡಾಖ್ ಬಿಟ್ಟು). ಇದರಲ್ಲಿ 6 ಕ್ಷೇತ್ರಗಳು ಹೊಸದಾಗಿ ಹಿಂದೂಗಳೇ ಹೆಚ್ಚಾಗಿರುವ ಜಮ್ಮು ಪ್ರದೇಶ ಹಾಗೂ 1 ಕ್ಷೇತ್ರವು ಮುಸ್ಲಿಮರು ಹೆಚ್ಚಿರುವ ಕಾಶ್ಮೀರ ಕಣಿವೆಗೂ ಸೇರಿವೆ. ಇದರಿಂದ, 37 ಕ್ಷೇತ್ರಗಳನ್ನು ಹೊಂದಿದ್ದ ಜಮ್ಮು 43 ಹಾಗೂ 46 ಕ್ಷೇತ್ರಗಳನ್ನು ಹೊಂದಿದ್ದ ಕಣಿವೆ 47 ಕ್ಷೇತ್ರಗಳನ್ನು ಹೊಂದಲಿವೆ.

ಕೇಂದ್ರವು ಜುಲೈ 12ರಂದು ತೆಗೆದುಕೊಂಡ ವಿವಾದಾತ್ಮಕ ನಿರ್ಧಾರದಲ್ಲಿ ಜಮ್ಮು-ಕಾಶ್ಮೀರ ಪುನರ್ ವಿಂಗಡಣೆ ಕಾಯ್ದೆಗೆ ತಿದ್ದುಪಡಿ ತಂದು, ಅಲ್ಲಿನ ಲೆಫ್ಟಿನೆಂಟ್ ಗವರ್ನರ್‌ಗೆ ಹೆಚ್ಚಿನ ಅಧಿಕಾರ ನೀಡಿದೆ. ಈಗ ನವದೆಹಲಿಯಲ್ಲಿರುವ ರೀತಿಯಲ್ಲಿ ಸರ್ಕಾರದ ಹಿರಿಯ ಅಧಿಕಾರಿಗಳ (ಅಖಿಲ ಭಾರತೀಯ ಸೇವೆ) ನೇಮಕಾತಿ ಮತ್ತು ವರ್ಗಾವಣೆ ಹಾಗೂ ಅಡ್ವೊಕೇಟ್ ಜನರಲ್ ನೇಮಕಾತಿಯನ್ನು ಅವರು ಮಾಡಬಹುದು. ಈ ತಿದ್ದುಪಡಿಯು ಲೆಫ್ಟಿನೆಂಟ್ ಗವರ್ನರ್‌ಗೆ ಪೊಲೀಸ್ ಹಾಗೂ ಸಾರ್ವಜನಿಕ ಸುವ್ಯವಸ್ಥೆಯ ಸಮಸ್ತ ಅಧಿಕಾರವನ್ನೂ ಕೊಡುತ್ತದೆ.

2020ರಿಂದ ಈಚೆಗೆ ಕಡಿಮೆಯಾಗುತ್ತಿವೆ ಎಂದೆನಿಸಿದ್ದ ಭಯೋತ್ಪಾದಕ ಕೃತ್ಯಗಳು ಇತ್ತೀಚಿನ ತಿಂಗಳುಗಳಲ್ಲಿ ಹೆಚ್ಚಾಗಿವೆ. 'ಸೌತ್ ಏಷ್ಯಾ ಟೆರರಿಸಂ ಪೋರ್ಟಲ್'ನ ಪ್ರಕಾರ, ಜಮ್ಮು-ಕಾಶ್ಮೀರದಲ್ಲಿ 2020ರಲ್ಲಿ 47, 2021ರಲ್ಲಿ 35, 2022ರಲ್ಲಿ 23 ಹಾಗೂ 2023ರಲ್ಲಿ 14 ಭಯೋತ್ಪಾದಕ ಕೃತ್ಯಗಳು ಸಂಭವಿಸಿದ್ದವು. 2020ರಲ್ಲಿ ನಡೆದ ಭಯೋತ್ಪಾದಕ ಘಟನೆಗಳಲ್ಲಿ 140 ಜನ ಸಾವನ್ನಪ್ಪಿದ್ದರು ಹಾಗೂ 2021ರಲ್ಲಿ 150, 2022ರಲ್ಲಿ 151 ಮತ್ತು 2023ರಲ್ಲಿ 72 ಮಂದಿ ಅಸುನೀಗಿದ್ದರು. 2024ರಲ್ಲಿ ಇಲ್ಲಿಯವರೆಗೆ 28 ಘಟನೆಗಳಲ್ಲಿ 21 ಜನ ಮೃತಪಟ್ಟಿದ್ದಾರೆ.

ಕ್ಷೋಭೆಗೊಳಗಾದ ಇಲ್ಲಿ ಹೆಚ್ಚಿನ ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಿದ್ದದ್ದು ಕಾಶ್ಮೀರ ಕಣಿವೆಯಲ್ಲಿ. ಆದರೆ ಇತ್ತೀಚಿನ ದಿನಗಳಲ್ಲಿ, ಹೆಚ್ಚು ಶಾಂತಿಯುತವಾದ ಜಮ್ಮು ಪ್ರದೇಶದಲ್ಲಿ ಕೃತ್ಯಗಳು ಆಗುತ್ತಿರುವುದು ಕಳವಳಕಾರಿ ಅಂಶ. ಈ ವರ್ಷದಲ್ಲಿ ಈಗಾಗಲೇ 6 ದಾಳಿಗಳು ಜರುಗಿದ್ದು 11 ಜನರು ಹತರಾಗಿದ್ದಾರೆ. ಜಮ್ಮು ವಿಭಾಗದ ಪೂಂಚ್, ರಜೌರಿ, ಕಠುವಾ, ರಿಯಾಸಿ, ಡೋಡಾ ಹಾಗೂ ಉಧಂಪುರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಕರಣಗಳು ಸಂಭವಿಸಿವೆ.

ಈ ಚಟುವಟಿಕೆಗಳು ಜಮ್ಮುವಿಗೆ ಸ್ಥಳಾಂತರಗೊಂಡಿದ್ದಾದರೂ ಏಕೆ? 2020ರಲ್ಲಿ ಚೀನಾ ಗಡಿಯ ಗಾಲ್ವನ್ ಕಣಿವೆಯಲ್ಲಿ ನಡೆದ ಘರ್ಷಣೆಯಲ್ಲಿ 20 ಭಾರತೀಯ ಸೈನಿಕರು ಹತರಾದ ನಂತರ, ಬಹುಮಟ್ಟಿನ ಪಡೆಯನ್ನು ಜಮ್ಮು ಪ್ರದೇಶದಿಂದ ತೆಗೆದು ಪೂರ್ವ ಲಡಾಖ್‌ಗೆ ವರ್ಗಾಯಿಸಲಾಗಿತ್ತು. ಜಮ್ಮು-ಕಾಶ್ಮೀರಕ್ಕೆ ಇನ್ನೂ ಪೂರ್ಣಾವಧಿಯ ಪೊಲೀಸ್ ಮುಖ್ಯಸ್ಥರನ್ನು ನೇಮಿಸಿಲ್ಲ. ಪ್ರಭಾರಿ ಡಿಜಿಪಿಯಾಗಿ ಆರ್.ಆರ್.ಸ್ವೇನ್ ಮುಂದುವರಿದಿದ್ದಾರೆ. ಗುಪ್ತಚರ ವಿಭಾಗದ ಮುಖ್ಯಸ್ಥರ ಜವಾಬ್ದಾರಿ ಕೂಡ ಇವರ ಮೇಲಿದೆ.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆ ಬಹುತೇಕ ಶಾಂತಿಯುತವಾಗಿತ್ತು. ಆದರೆ ಬಿಜೆಪಿಯು ಕಣಿವೆ ಪ್ರದೇಶದಲ್ಲಿ ಸ್ಪರ್ಧೆ ಮಾಡಿರಲಿಲ್ಲ. ಬಹುಶಃ ತಳಮಟ್ಟದ ಬೆಂಬಲ ಇಲ್ಲದ ಕಾರಣ ಮತ್ತು ಕಾರ್ಯಕರ್ತರ ಅಭಾವದಿಂದ ಅದು ಸ್ಪರ್ಧಿಸದಿರಲು ನಿರ್ಧರಿಸಿದ್ದಿರಬಹುದು. ಕೇಂದ್ರಾಡಳಿತ ಪ್ರದೇಶದ 5 ಕ್ಷೇತ್ರಗಳಲ್ಲಿ ಬಿಜೆಪಿ 2 (ಜಮ್ಮು ವಿಭಾಗ), ಫಾರೂಕ್ ಅಬ್ದುಲ್ಲಾ ಅವರ ನ್ಯಾಷನಲ್ ಕಾನ್ಫರೆನ್ಸ್ 2 (ಕಣಿವೆ ಪ್ರದೇಶ), ಭಯೋತ್ಪಾದನೆಗೆ ಹಣ ಸಹಾಯ ನೀಡಿದ ಆರೋಪದ ಮೇಲೆ ಸೆರೆಮನೆಯಲ್ಲಿರುವ ಪಕ್ಷೇತರ ಅಭ್ಯರ್ಥಿ ಎಂಜಿನಿಯರ್ ರಶೀದ್ ಅವರಿಗೆ ಜಯ ಲಭಿಸಿತು.



ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ, ಕೋರ್ಟ್ ಆದೇಶದ ಪ್ರಕಾರವೇ ಚುನಾವಣೆ ನಡೆಯುತ್ತದೆ ಎಂದು ಹೇಳಿದ್ದರು. ಚುನಾವಣಾ ಆಯೋಗ ಹೋದ ತಿಂಗಳು ಪೂರ್ವಭಾವಿ ಸಭೆಗಳನ್ನು ನಡೆಸಿದೆ. ಆದರೂ, ಮೋದಿ ಅವರು ಸಂಸತ್ತಿನಲ್ಲಿ ರಾಷ್ಟ್ರಪತಿ ಅವರ ಭಾಷಣದ ಮೇಲಿನ ಚರ್ಚೆಯಲ್ಲಿ ಉತ್ತರಿಸುವಾಗ ಈ ಚುನಾವಣೆಯ ಬಗ್ಗೆ ಮಾತನಾಡದೇ ಇದ್ದದ್ದು, ಅಮಿತ್ ಶಾ ತಾವು ಕರೆದಿದ್ದ, ಮುಂಬರುವ ವಿಧಾನಸಭಾ ಚುನಾವಣೆ ನಡೆಯುವ ರಾಜ್ಯಗಳ ಬಿಜೆಪಿ ನಾಯಕರ ಜೊತೆಗಿನ ಪೂರ್ವಭಾವಿ ಚರ್ಚೆಯಲ್ಲಿ ಜಮ್ಮು-ಕಾಶ್ಮೀರವನ್ನು ಹೊರಗಿಟ್ಟದ್ದು– ಈ ಎಲ್ಲ ಕಾರಣಗಳು ಇಲ್ಲಿ ಚುನಾವಣೆ ನಡೆಯುವುದೇ ಎನ್ನುವ ಅನುಮಾನವನ್ನು ಜೀವಂತವಾಗಿ ಇಟ್ಟಿವೆ.

ಶ್ರೀನಗರದ ಕೆಲವು ರಾಜಕೀಯ ಪರಿಣತರು ಹೇಳುವುದೇನೆಂದರೆ, 'ಈ ಕೇಂದ್ರಾಡಳಿತ ಪ್ರದೇಶದಲ್ಲಿ ಮೊದಲು ಪಂಚಾಯಿತಿ ಹಾಗೂ ಮುನಿಸಿಪಲ್ ಚುನಾವಣೆಗಳು ನಡೆಯುತ್ತವೆ. ಇದನ್ನು ಈಗ ನಡೆಯುತ್ತಿರುವ ಹಾಗೂ ಆಗಸ್ಟ್ 19ರಂದು ಮುಗಿಯುವ ಅಮರನಾಥ ಯಾತ್ರೆಯ ನಂತರ ಘೋಷಿಸಲಾಗುತ್ತದೆ. ನಂತರ ಮುಂದಿನ ವರ್ಷ ವಿಧಾನಸಭಾ ಚುನಾವಣೆ ಜರುಗುತ್ತದೆ'.

2024ರ ಲೋಕಸಭೆ ಚುನಾವಣೆಯಲ್ಲಿ ಶೇ 58.46ರಷ್ಟು ಮತದಾನವಾಗಿದ್ದು, ಇದನ್ನು ವಿಧಾನಸಭಾ ಚುನಾವಣೆ ನಡೆಸುವ ಸಂಬಂಧದ ಜನಮನ್ನಣೆಯೆಂದೇ ಪರಿಗಣಿಸಲಾಗಿದೆ. ಆದರೆ, ಬಿಜೆಪಿಯ 'ಪ್ರಾಕ್ಸಿ' (ಬದಲಿ ಪ್ರತಿನಿಧಿ) ಪಕ್ಷವೆಂದೇ ಪರಿಗಣಿಸಲಾಗುವ ಅಪ್ನಿ ಪಾರ್ಟಿ, ಗುಲಾಮ್ ನಬಿ ಆಜಾದ್ ಅವರ ಪಕ್ಷ, ಸಜ್ಜದ್ ಲೋನ್ ಅವರ ಪೀಪಲ್ಸ್ ಪಾರ್ಟಿ ಚುನಾವಣೆಯಲ್ಲಿ ನೆಲಕಚ್ಚಿದವು. ಬಿಜೆಪಿಯು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದೋ ಇಲ್ಲವೋ ಎನ್ನುವುದರ ಬಗ್ಗೆ ಸದ್ಯ ಸ್ಪಷ್ಟತೆ ಇಲ್ಲ. ಆದರೆ, ಅದರ ಪ್ರಾಕ್ಸಿ ಪಕ್ಷಗಳ ನಿರಾಶಾದಾಯಕ ಪ್ರದರ್ಶನದಿಂದ ಬಿಜೆಪಿಗೆ ಮುಖಭಂಗವಾಗಿದೆ ಎಂಬುದಂತೂ ನಿಜ.

ತಾನು ಇತ್ತೀಚಿನ ವರ್ಷಗಳಲ್ಲಿ ಜಮ್ಮು-ಕಾಶ್ಮೀರದ ಬಗ್ಗೆ ತೆಗೆದುಕೊಂಡ ನಿರ್ಧಾರಗಳನ್ನು ತನ್ನ ಪ್ರಮುಖ 'ಸಾಧನೆ'ಗಳೆಂದೇ ಬಿಜೆಪಿ ಬಿಂಬಿಸುತ್ತದೆ. ಹಾಗಾಗಿ, ಇಂತಹ ಸನ್ನಿವೇಶದಲ್ಲಿ ತಾನು ಅಧಿಕಾರದ ಚುಕ್ಕಾಣಿ ಹಿಡಿಯದೇ ಹೋದರೆ ಅಥವಾ ಅಲ್ಲಿ ಚುನಾವಣೆಯ ಮೂಲಕ ಹೊಸದಾಗಿ ಏನೂ ದಕ್ಕದಿದ್ದರೆ, ಇಷ್ಟೆಲ್ಲಾ ಮಾಡಿ ಏನು ಸಾಧಿಸಿದಂತಾಯಿತು ಎಂದೂ ಪಕ್ಷದ ನಾಯಕರು ಪ್ರಶ್ನೆ ಮಾಡಿಕೊಳ್ಳಬಹುದು. ಇದು ಹಾಗೂ ಮೇಲಿನ ಎಲ್ಲಾ ಬೆಳವಣಿಗೆಗಳನ್ನು ಕೇಂದ್ರ ಸರ್ಕಾರ ಮತ್ತು ಬಿಜೆಪಿ ಹೇಗೆ ನೋಡುತ್ತವೆ ಎನ್ನುವುದರ ಮೇಲೆ ಅವಲಂಬಿತವಾಗಿದೆ ಜಮ್ಮು-ಕಾಶ್ಮೀರದ ವಿಧಾನಸಭಾ ಚುನಾವಣೆ.

ಲೇಖಕ: ಹಿರಿಯ ಪತ್ರಕರ್ತ

## ಚುರುಮುರಿ

# ಕಿರುನಿದ್ರಾಸನ

• ಸುಮಂಗಲಾ

'ಮಧ್ಯಾಹ್ನ ಊಟ ಆದ್ಮೇಲೆ ಕಿರುನಿದ್ದೆ ಮಾಡಾಕೆ ನನಗೆ ಒಂದು ವಿಶೇಷ ಆಸನ ಬೇಕು, ಇವತ್ತೇ ಆರ್ಡರ್ ಮಾಡು' ಎಂದು ಬೆಕ್ಕಣ್ಣ ದುಂಬಾಲು ಬಿದ್ದಿತ್ತು.

'ಕುಂತಲ್ಲೇ ತೂಕಡಿಸ್ತೀಯ ನೀ, ಅಂತಾದ್ರಾಗೆ ಕಿರುನಿದ್ದೆಗೆ ವಿಶೇಷ ಆಸನ ಎದಕ್ಕ ಬೇಕಲೇ?'

'ಹಂಗೆ ಕುಂತಲ್ಲಿ ತೂಕಡಿಸಿ, ಕತ್ತು ಆಕಡಿಗಿ ಈಕಡಿಗಿ ವಾಲಾಡಿ ಕುತ್ತಿಗೆ ನೋವು ಬರತೈತಿ, ಕುಂತಲ್ಲೇ ತೂಕಡಿಸಬಾರದು ಅಂತ ಆರ್ಥೋಪೆಡಿಕ್ ಡಾಕ್ಟ್ರು ಹೇಳ್ಯಾರೆ. ನನಗೆ ವಿಶೇಷ ಆಸನ ತರಿಸಿಕೊಡು' ಮತ್ತೆ ಅದೇ ವರಾತ.

'ಅಷ್ಟ್ ನಿದ್ದೆ ಬಂದರೆ ಮಂಚದ ಮ್ಯಾಲೆ ಮಲಕ್ಕೋ, ವಿಶೇಷ ಆಸನ ಎದಕ್ಕ ಬೇಕು?' ಎಂದು ಬೈದೆ.

'ನಮ್ ಮಾರ್ಜಾಲ ಅಧಿವೇಶನ ನಡೆದಾಗ, ಮಧ್ಯಾಹ್ನ ಊಟ ಆದಮ್ಯಾಗೆ ಹಂಗೆಲ್ಲ ದೀರ್ಘನಿದ್ರೆ ಮಾಡಂಗಿಲ್ಲ. ವಿಧಾನಸಭೆ ಒಳಗೆ ಶಾಸಕರಿಗೆ ಊಟದ ನಂತರದ ಕಿರುನಿದ್ರೆಗೆ ವಿಶೇಷ ಆಸನ ಮಾಡತೀವಿ ಅಂತ ಖಾದರ್ ಅಂಕಲ್ಲು ಹೇಳ್ಯಾರೆ. ಅವರು ಎಷ್ಟು ದಿಲ್‌ದಾರ್ ಅದಾರೆ… ನೀ ನೋಡಿದರೆ ಎಷ್ಟರ ಜಿಪುಣಿ ಇದ್ದೀ' ಮೂತಿ ಉಬ್ಬಿಸಿದ ಬೆಕ್ಕಣ್ಣ ಸುದ್ದಿಯನ್ನೂ ತೋರಿಸಿತು.

'ಶಾಸಕರಿಗೆ ಸಂಬಳ ಅಲ್ಲದೇ ಹತ್ತಾರು ಭತ್ಯೆ ಸೇರಿದರೆ ತಿಂಗಳಿಗೆ ಎರಡೂವರೆ ಲಕ್ಷ ರೂಪಾಯಿ ಬರತೈತಿ. ಅಷ್ಟ್ ರೊಕ್ಕ ತಗಂಡವ್ರು ಛಲೋತ್ನಾಗೆ ಕೆಲಸ ಮಾಡೂದು ಬಿಟ್ಟು ಸದನದಾಗೆ ಕಿರುನಿದ್ರೆ ಮಾಡೂದೇನು? ಶಾಸಕರು ಅಧಿವೇಶನಕ್ಕೆ ಮುಂಜಾನೆ ಲಗೂನೆ ಬರಲಿ ಅಂತ ಬಿಸಿತಿಂಡಿ ವ್ಯವಸ್ಥೆನೂ ಮಾಡಿದ್ರು, ಶಾಸಕರ ಅಟೆಂಡೆನ್ಸ್ ಹೆಚ್ಚಾಗಲಂತ ಪಾಪ ಖಾದರ್ ಅಂಕಲ್ಲು ಎಷ್ಟ್ ಪ್ರಯತ್ನ ಮಾಡತಾರೆ'.

'ಕೆಲವು ಶಾಸಕರು ಊಟ ಆದಮ್ಯಾಗೆ ಜರಾ ನಿದ್ದಿ ಮಾಡಿಬರತೀವಿ ಅಂತ ಶಾಸಕರ ಭವನಕ್ಕೆ ಹೋದವರು ವಾಪಸು ಬರಂಗಿಲ್ಲಂತ. ಅದಕ್ಕೇ ವಿಶೇಷ ಆಸನದ ವ್ಯವಸ್ಥೆ ಮಾಡ್ತಾರಂತೆ. ಬೆಳಗ್ಗೆ ಶಾಸಕರೆಲ್ಲ ಬಂದಮ್ಯಾಗೆ ಸದನದ ಬಾಗಿಲು ಮುಚ್ಚಿ, ಸಂಜೀತನಾ ತೆಗಿಯಂಗಿಲ್ಲ ಅನ್ನೂದೊಂದು ಬಾಕಿ ಉಳದೈತಿ!' ಎಂದು ಬೆಕ್ಕಣ್ಣ ಕಿಸಕ್ಕನೆ ನಕ್ಕಿತು.

## ಸಂಗತ

# 'ಗೌರವ'ಕ್ಕಿದೆ ವಿವಿಧ ಆಯಾಮ

ಗುರುಹಿರಿಯರಿಗೆ ಗೌರವ ನೀಡುವ ಗುಣವನ್ನು ಮಕ್ಕಳಲ್ಲಿ ಮೈಗೂಡಿಸಲು ಅನುಸರಿಸುವ ಸಾಂಕೇತಿಕ ವಿಧಾನಗಳು ಎಷ್ಟು ಪರಿಣಾಮಕಾರಿ ಎಂಬ ಕುರಿತು ಆಲೋಚಿಸಬೇಕಿದೆ

• ಎಚ್.ಕೆ.ಶರತ್

**ಖಾಸಗಿ** ಎಂಜಿನಿಯರಿಂಗ್ ಕಾಲೇಜೊಂದಕ್ಕೆ ಇತ್ತೀಚೆಗೆ ಕಾರ್ಯನಿಮಿತ್ತ ಭೇಟಿ ನೀಡಿದ್ದೆ. ಅಲ್ಲಿನ ಕಾರಿಡಾರ್‌ನಲ್ಲಿ ಹಾಕಿದ್ದ ಕುರ್ಚಿಗಳ ಮೇಲೆ, 'ಸಿಬ್ಬಂದಿ ಮತ್ತು ಪೋಷಕರಿಗೆ ಮಾತ್ರ' ಎಂದು ಬರೆಯಲಾಗಿತ್ತು. 'ಹೀಗೇಕೆ ಬರೆಯಲಾಗಿದೆ' ಎಂದು ಕಾಲೇಜಿನ ಸಿಬ್ಬಂದಿಯೊಬ್ಬರನ್ನು ವಿಚಾರಿಸಿದಾಗ, 'ಅಲ್ಲಿ ವಿದ್ಯಾರ್ಥಿಗಳು ಕೂರಬಾರದು ಎನ್ನುವ ಕಾರಣಕ್ಕೆ ಹೀಗೆ ಮಾಡಲಾಗಿದೆ' ಎಂದರು.

'ಕುರ್ಚಿಗಳು ಖಾಲಿ ಇದ್ದಾಗ ವಿದ್ಯಾರ್ಥಿಗಳೂ ಕುಳಿತರೆ ಏನು ಸಮಸ್ಯೆ?' ಎಂದು ಕೇಳಿದೆ. 'ಮೊದಲು ಯಾರು ಬೇಕಿದ್ದರೂ ಕೂರಬಹುದಿತ್ತು. ಹೆಚ್ಚಾಗಿ ವಿದ್ಯಾರ್ಥಿಗಳೇ ಇಲ್ಲಿ ಕುಳಿತಿರುತ್ತಿದ್ದರು. ಆದರೆ ಕೆಲ ಅಧ್ಯಾಪಕರು, ನಾವು ಕಾರಿಡಾರ್‌ನಲ್ಲಿ ಓಡಾಡುವಾಗ ವಿದ್ಯಾರ್ಥಿಗಳು ಕಾಲ ಮೇಲೆ ಕಾಲು ಹಾಕಿಕೊಂಡು ಕುಳಿತಿರುತ್ತಾರೆ. ನಾವು ಬರುತ್ತಿರುವುದನ್ನು ಗಮನಿಸಿದರೂ ಹಾಗೆಯೇ ಕುಳಿತು ಧಿಮಾಕು ಪ್ರದರ್ಶಿಸುತ್ತಾರೆ ಅಂತ ದೂರು ನೀಡಿದ ನಂತರ ಅಲ್ಲಿಂದ ಕುರ್ಚಿಗಳನ್ನು ತೆಗೆಯಲಾಗಿತ್ತು. ಉಳಿದ ಸಿಬ್ಬಂದಿ, ಮೊದಲಿನಂತೆ ಕುರ್ಚಿಗಳನ್ನು ಹಾಕಿದ್ರೆ ನಮಗೂ ಅನುಕೂಲವಾಗುತ್ತೆ ಅಂತ ತಿಳಿಸಿದ ನಂತರ, ಸಿಬ್ಬಂದಿ ಮತ್ತು ಪೋಷಕರಿಗೆ ಮಾತ್ರ ಅಂತ ಬರೆದು ಕುರ್ಚಿಗಳನ್ನು ಹಾಕಲಾಗಿದೆ' ಎಂದು ವಿವರಿಸಿದರು.

ತರಗತಿ ನಡೆಯುವ ಕೊಠಡಿಗೆ ಪ್ರವೇಶಿಸಿದ್ದನ್ನು ನೋಡಿಯೂ ನೋಡದ ಹಾಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಬೈದು ಬುದ್ಧಿವಾದ ಹೇಳುವ ಶಿಕ್ಷಕರನ್ನೇ ನಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ನೋಡಿಕೊಂಡು ಬೆಳೆದಿರುತ್ತೇವೆ. ಇದನ್ನು ಗುರು-ಹಿರಿಯರಿಗೆ ಗೌರವ ಕೊಡುವುದನ್ನು ವಿದ್ಯಾರ್ಥಿಗಳಿಗೆ ಕಲಿಸುವ ಭಾಗವೆಂದೇ ಭಾವಿಸಿರುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ಯೋಚಿಸುವ ಅಧ್ಯಾಪಕರೊಬ್ಬರು ಎಂಜಿನಿಯರಿಂಗ್ ಪದವಿ ಓದಿನ ವೇಳೆ ನಮಗೆ ಕೆಲವು ವಿಷಯಗಳನ್ನು ಬೋಧಿಸುತ್ತಿದ್ದರು. ಮೊದಲ ತರಗತಿಯಲ್ಲೇ ವಿದ್ಯಾರ್ಥಿಗಳು ತನ್ನ ಕ್ಲಾಸ್‌ನಲ್ಲಿ ಏನೆಲ್ಲ ಮಾಡಲು ಅನುಮತಿ ಇದೆ ಮತ್ತು ಯಾವುದನ್ನೆಲ್ಲ ಮಾಡುವಂತಿಲ್ಲ ಎಂಬುದನ್ನು ಅವರು ವಿವರಿಸುತ್ತಿದ್ದರು.

'ನಾನು ತರಗತಿಗೆ ಬಂದ ಕೂಡಲೇ ನೀವೆಲ್ಲ ಎದ್ದು ನಿಲ್ಲುವ ಅಗತ್ಯವಿಲ್ಲ. ಒಂದು ವೇಳೆ ನನ್ನ ಮೇಲೆ ನಿಮಗೆ ಗೌರವವಿದ್ದರೆ ಅದನ್ನು ಎದ್ದು ನಿಲ್ಲುವ ಮೂಲಕ ತೋರಿಸಲು ಹೋಗಬೇಡಿ. ಗೌರವ ನಿಮ್ಮೊಳಗೇ ಇರಲಿ. ಗೌರವ ಇಲ್ಲದಿದ್ದರೂ ತೊಂದರೆ ಇಲ್ಲ. ಎದ್ದು ನಿಂತ ಮಾತ್ರಕ್ಕೆ ನಿಮ್ಮೊಳಗೆ ಅಸಲಿಗೂ ಇಲ್ಲದ ಗೌರವವನ್ನು ಸೂಚಿಸಿದಂತೆ ಆಗುವುದಿಲ್ಲ' ಎಂದು ತಿಳಿಸಿದ್ದರು.

ತರಗತಿಗೆ ಶಿಕ್ಷಕರು ಬಂದ ಕೂಡಲೇ ಎದ್ದು ನಿಲ್ಲುವುದನ್ನು ರೂಢಿಸಿಕೊಂಡಿದ್ದ ನಾವು, ಈ ಅಧ್ಯಾಪಕರು ಬಂದಾಗಲೂ ಎದ್ದು ನಿಲ್ಲುತ್ತಿದ್ದೆವು. ಬೇಡವೆಂದು ಹೇಳಿದ ನಂತರವೂ ಎದ್ದು ನಿಲ್ಲುತ್ತಿದ್ದ ನಮ್ಮನ್ನು ನೋಡಿ, 'ಕಾಲೇಜಲ್ಲಿ ಯಾವುದಾದರೂ ಸಭೆ-ಸಮಾರಂಭವಿದ್ದಾಗ ಪ್ರಾಂಶುಪಾಲರು ಹಾಗೂ ಗಣ್ಯರು ಬಂದ ಕೂಡಲೇ ಎಲ್ಲರೂ ಎದ್ದು ನಿಲ್ಲುವ ಮೂಲಕ ಗೌರವ ಸೂಚಿಸಲು ಮುಂದಾಗುತ್ತಾರೆ. ನನಗೆ ಹೀಗೆಲ್ಲ ಎದ್ದು ನಿಲ್ಲೋಕೆ ಹಿಂಸೆ ಅನ್ನುತ್ತೆ. ಕೆಲವೊಮ್ಮೆ ಎಲ್ಲರೂ ಎದ್ದು ನಿಂತಿರುವಾಗ ನಾನೊಬ್ಬ ಮಾತ್ರ ಕುಳಿತರೆ ಸರಿಯಾಗಲ್ಲ ಅಂತ ಇಷ್ಟವಿಲ್ಲದಿದ್ದರೂ ಎದ್ದು ನಿಲ್ಲೋದಿದೆ. ನೀವು ಎದ್ದು ನಿಂತರೆ ನನಗೆ ಕಿರಿಕಿರಿ ಅನ್ನುತ್ತೆ. ಇನ್ಮೇಲಾದ್ರೂ ನಿಮ್ಮ ಪಾಡಿಗೆ ನೀವು ಕುಳಿತಿರುವುದನ್ನು ಅಭ್ಯಾಸ ಮಾಡಿಕೊಳ್ಳಿ' ಅಂತ ಹೇಳುತ್ತಿದ್ದರು.

ಎದ್ದು ನಿಂತು ಗೌರವ ಸೂಚಿಸುವ ಪರಿಪಾಟ ಕೆಲವೊಮ್ಮೆ ಯಾವ ಹಂತ ತಲುಪಿರುತ್ತದೆ ಎಂದರೆ, ಕಾರ್ಯಕ್ರಮಕ್ಕೆ ಚಾಲನೆ ನೀಡುವ ಸಲುವಾಗಿ ವೇದಿಕೆ ಮೇಲೆ ಉಪಸ್ಥಿತರಿರುವ ಗಣ್ಯರು ಎದ್ದು ನಿಂತರೆ, ಸಭಾಂಗಣದಲ್ಲಿ ನೆರೆದಿರುವ ಎಲ್ಲರೂ ಎದ್ದು ನಿಲ್ಲತೊಡಗುತ್ತಾರೆ. ಹೀಗೆ ನಿಂತಾಗ ವೇದಿಕೆಯಲ್ಲಿ ಏನು ನಡೆಯುತ್ತಿದೆ ಎಂಬುದೇ ಬಹುತೇಕರಿಗೆ ಕಾಣದಿರುವ ಸನ್ನಿವೇಶ ನಿರ್ಮಾಣವಾಗುವುದೂ ಇದೆ.

ಗುರು-ಹಿರಿಯರಿಗೆ ಗೌರವ ನೀಡುವ ಗುಣ ಮಕ್ಕಳಲ್ಲಿ ಮೈಗೂಡಲಿ ಎನ್ನುವುದು ಪೋಷಕರು ಹಾಗೂ ಶಿಕ್ಷಕರ ಸದಾಶಯ. ಆದರೆ ಇದನ್ನು ಕಾರ್ಯಗತಗೊಳಿಸಲು ನಾವು ಆರಿಸಿಕೊಳ್ಳುವ ಸಾಂಕೇತಿಕ

ವಿಧಾನಗಳು ಎಷ್ಟು ಪರಿಣಾಮಕಾರಿ ಎಂಬ ಕುರಿತು ಕೂಡ ಆಲೋಚಿಸಬೇಕಿದೆ. ಮಕ್ಕಳಿಗೆ ಎದ್ದು ನಿಂತು ಗೌರವ ಸೂಚಿಸುವುದನ್ನು ಕಲಿಸಲು ತೋರುವಷ್ಟೇ ಕಾಳಜಿಯನ್ನು, ಎದ್ದು ನಿಂತು ಪ್ರಶ್ನೆ ಕೇಳುವುದನ್ನು ಕಲಿಸಲೂ ತೋರುತ್ತಿದ್ದೇವೆಯೇ? ಉತ್ತರ ಬರೆಯುವುದನ್ನು ಹೇಳಿಕೊಡಲೇ ಹೆಚ್ಚು ಮುತುವರ್ಜಿ ತೋರುತ್ತಾ ಬಂದಿರುವ ನಮ್ಮ ಶೈಕ್ಷಣಿಕ ವ್ಯವಸ್ಥೆಗೆ, ಮಕ್ಕಳಿಗೆ ಪ್ರಶ್ನೆ ಕೇಳುವುದು ಏಕೆ ಮುಖ್ಯ ಮತ್ತು ಪ್ರಶ್ನೆಗಳನ್ನು ಹೇಗೆ ಕೇಳಬೇಕು ಎಂದು ಕಲಿಸುವುದೂ ಆದ್ಯತೆ ಆಗಿದೆಯೇ?

ವಿದ್ಯಾರ್ಥಿಗಳು ಎದ್ದು ನಿಂತು ಗೌರವ ಸೂಚಿಸುತ್ತಿಲ್ಲ ಎಂದು ಸಿಡಿಮಿಡಿಗೊಳ್ಳುವ ಶಿಕ್ಷಕರು, ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವ ಮನೋಭಾವ ಮೈಗೂಡುತ್ತಿಲ್ಲ ಎಂದೂ ಅಸಮಾಧಾನಗೊಳ್ಳಬೇಕಲ್ಲವೇ?

ವಿದ್ಯಾರ್ಥಿಗಳು, ಯುವಜನರಲ್ಲಿ ಗುರು-ಹಿರಿಯರ ಕುರಿತು ಗೌರವ ಮೂಡಬೇಕಿರುವುದು ಅವರ ನಡೆ-ನುಡಿಗಳ ಕಾರಣಕ್ಕೇ ವಿನಾ ಭಯದಿಂದಲ್ಲ. ಎದ್ದು ನಿಲ್ಲುವಂತೆ ಮಾಡುವುದು ಬಹುತೇಕ ಸಂದರ್ಭ-ಗಳಲ್ಲಿ ತೋರಿಕೆಯ ಗೌರವವಾಗಿರುವುದೇ ವಿನಾ ಅಂತರಾಳದಿಂದ ಹೊಮ್ಮುವ ಗೌರವವಾಗಿರುವುದಿಲ್ಲ.

ಯಾವ ಬಗೆಯ ಗೌರವಕ್ಕೆ ಭಾಜನರಾಗುವುದು ಆದ್ಯತೆಯಾಗುತ್ತಿದೆ ಎಂಬ ಕುರಿತೂ ಗುರು-ಹಿರಿಯರು ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೇ?

## ವಾಚಕರ ವಾಣಿ

### ಡೆಂಗಿ: ಸೊಳ್ಳೆ ನಿಯಂತ್ರಿಸಿ

ರಾಜ್ಯದಲ್ಲಿ ಡೆಂಗಿ ಜ್ವರ ಉಲ್ಬಣಿಸಿರುವುದು ಆತಂಕಕಾರಿ. ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಎಂಬಂತೆ ಡೆಂಗಿ ನಿಯಂತ್ರಣಕ್ಕೆ ನಮ್ಮ ಆರೋಗ್ಯ ವ್ಯವಸ್ಥೆ ಈಗ ಒದ್ದಾಡುತ್ತಿದೆ. ಮಳೆಗಾಲ ಆರಂಭವಾಗುವುದಕ್ಕೆ ಮೊದಲೇ ಮುನ್ನೆಚ್ಚರಿಕೆ ವಹಿಸಬೇಕಿತ್ತು, ಅಲ್ಲವೇ?

ಕರ್ನಾಟಕದಲ್ಲಿ ಈ ಜ್ವರ ಪ್ರತಿವರ್ಷ ಹಲವು ಜೀವಗಳನ್ನು ಬಲಿ ಪಡೆಯುತ್ತಿದೆ. ಹೀಗಿರುವಾಗ ರೋಗ ನಿಯಂತ್ರಣಕ್ಕೆ ಹೆಚ್ಚು ಆಸ್ಥೆ ವಹಿಸಬೇಕಿತ್ತು. ಸೂಕ್ತ ಔಷಧೋಪಚಾರದ ಲಭ್ಯತೆಯನ್ನು ಖಾತರಿಪಡಿಸುವ ದಿಸೆಯಲ್ಲಿ ಅಗತ್ಯ ಉಪಕ್ರಮಗಳನ್ನು ಕೈಗೊಳ್ಳಬೇಕಿತ್ತು. ನಿದ್ರಾವಸ್ಥೆಯಲ್ಲಿರುವ ನಮ್ಮ ಸ್ಥಳೀಯ ಸಂಸ್ಥೆಗಳನ್ನು ಈಗಲಾದರೂ ಎಬ್ಬಿಸಿ, ಸೊಳ್ಳೆ ನಿಯಂತ್ರಣಕ್ಕೆ ಕ್ರಮ ಜರುಗಿಸುವಂತೆ ಮಾಡಬೇಕು.

**ನಂದೀಶ್ ದುಗಡಿಹಳ್ಳಿ,** ಬೆಂಗಳೂರು

### ಜಾಹೀರಾತು ರೂಪದ ಸುದ್ದಿ: ನೈತಿಕತೆ ಉಳಿಯಲಿ

ವಾಲ್ಮೀಕಿ ಅಭಿವೃದ್ಧಿ ನಿಗಮದ ₹ 187 ಕೋಟಿ ಮೊತ್ತದ ಹಗರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇದೇ 19ರಂದು ವಿಧಾನಸಭೆ ಅಧಿವೇಶನದಲ್ಲಿ ಉತ್ತರ ಕೊಡಬೇಕಿತ್ತು. ಮುಖ್ಯಮಂತ್ರಿ ಸಿದ್ಧತೆಯೊಂದಿಗೆ ಸದನಕ್ಕೆ ಬಂದಿದ್ದರಾದರೂ ಅಂದುಕೊಂಡಂತೆ ಉತ್ತರಿಸಲು ಅವರಿಗೆ ಆಗಲಿಲ್ಲ. ವಿರೋಧ ಪಕ್ಷದವರು ಸದನದ ಬಾವಿಗಿಳಿದು ಗದ್ದಲ ಎಬ್ಬಿಸಿದ್ದರು. ಕೊನೆಗೆ ಮುಖ್ಯಮಂತ್ರಿ ತಾವು ಸಿದ್ಧಪಡಿಸಿ ತಂದಿದ್ದನ್ನು ಗದ್ದಲದ ನಡುವೆ ಓದಿ ಹೇಳಬೇಕಾಯಿತು. ತಮ್ಮ ಎಂದಿನ ಮೊನಚು ಶೈಲಿಯ ಉತ್ತರಕ್ಕೆ ಅವಕಾಶ ಸಿಗದೇ ಇದ್ದುದರಿಂದ ಮುಖ್ಯಮಂತ್ರಿಯವರು ಸದನ ಮುಕ್ತಾಯವಾದ ನಂತರ ಪತ್ರಿಕಾಗೋಷ್ಠಿ ನಡೆಸಿ ದಾಖಲೆಗಳ ಸಮೇತ ವಿಷಯ ಮುಂದಿಟ್ಟರು. ಸದನದಲ್ಲಿ ಸ್ಪಷ್ಟಪಡಿಸಲಾಗದಿದ್ದನ್ನು ಮುಖ್ಯಮಂತ್ರಿ ಪತ್ರಿಕಾಗೋಷ್ಠಿಯ ಮೂಲಕ ಜನರ ಮುಂದಿಟ್ಟರೆಂಬುದೇನೊ ಸರಿ. ಆದರೆ ಮರುದಿನ ಅಂದರೆ ಜುಲೈ 20ರ ಪತ್ರಿಕೆಗಳಲ್ಲಿ ವಿಚಿತ್ರ ಆಶ್ಚರ್ಯ ಕಾದಿತ್ತು. ಎಲ್ಲ ಪತ್ರಿಕೆಗಳಲ್ಲಿ ಜಾಹೀರಾತು ಮಾದರಿಯ ಒಂದು ಪುಟದ ವರದಿ. 'ಪ್ರಜಾವಾಣಿ' ಪತ್ರಿಕೆಯು ಮುಖ್ಯಮಂತ್ರಿಯವರ ಈ ಸಿದ್ಧಪಡಿಸಿದ ವರದಿಯನ್ನು ಜಾಹೀರಾತು ಎಂದು ಸ್ಪಷ್ಟಪಡಿಸಿತ್ತು. ಕೆಲವು ಪತ್ರಿಕೆಗಳು ಅದನ್ನೂ ಮಾಡದೆ 'ಸುದ್ದಿ' ಎಂಬಂತೆ ಬಿಂಬಿಸಿದ್ದವು.

ಈಗೀಗ ಈ ರೀತಿಯ 'ಜಾಹೀರಾತು ರೂಪದ ಸುದ್ದಿ'ಗಳು ಹೆಚ್ಚಾಗುತ್ತಿವೆ. ಚುನಾವಣೆ, ಹುಟ್ಟುಹಬ್ಬ, ಪಕ್ಷಗಳ ಸಮಾವೇಶಗಳ ಪ್ರಚಾರಕ್ಕೆ ಇದು ಸೀಮಿತವಾಗಿತ್ತು. ಆದರೆ ಈಗ ಪ್ರಕಟವಾದ ಜಾಹೀರಾತು ರೂಪದ ಸುದ್ದಿಯು ಮೂಲದಲ್ಲಿ ಮುಖ್ಯಮಂತ್ರಿ ಸದನದಲ್ಲಿ ಮಾಡಿದ ಭಾಷಣ. ಅದನ್ನು ಜಾಹೀರಾತಿನ ರೂಪದಲ್ಲಿ ಪತ್ರಿಕೆಗಳಿಗೆ ಕೊಡುವುದು ಎಷ್ಟು ಸರಿ? ಮುಖ್ಯಮಂತ್ರಿಯವರು ಸದನದಲ್ಲಿ ಮಾಡುವ ಭಾಷಣಕ್ಕೆ ಮಾಧ್ಯಮಗಳು ಸಹಜವಾಗಿಯೇ ಆದ್ಯತೆ ಕೊಡುತ್ತವೆ. ಆದರೂ ಅವರು ಜಾಹೀರಾತಿನ ಮೊರೆ ಹೋದರೆ ಉಳಿದ ಜನಪ್ರತಿನಿಧಿಗಳಿಗೆ ಇದು ಅಡ್ಡದಾರಿ ಕಲಿಸುವುದಿಲ್ಲವೇ? ಈಗಾಗಲೇ ವಿಧಾನಮಂಡಲವು 'ಕುಳಗಳು', 'ಧಣಿ'ಗಳಿಂದ ತುಂಬಿಹೋಗಿದೆ. ಇವರಿಗೆ ಈ ಮಾದರಿಯ ರುಚಿ ಹತ್ತಿದರೆ ಏನಾಗಬಹುದು?

ಹಾಗೆ ನೋಡಿದರೆ ಸಿದ್ದರಾಮಯ್ಯನವರು ನೈತಿಕತೆ ಉಳಿಸಿಕೊಂಡು ಬಂದ ರಾಜಕಾರಣಿ. ಅವರಾದರೂ ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು. ಸದನದ ಭಾಷಣವು ಜಾಹೀರಾತಿನ ರೂಪದ ಸುದ್ದಿಯಾಗುವುದರ ಬಗ್ಗೆ ಸಭಾಧ್ಯಕ್ಷರದ್ದೂ ನಿಗಾ ಬೇಕು.

**ವಾದಿರಾಜ್,** ಬೆಂಗಳೂರು

### ತುಟ್ಟಿಭತ್ಯೆ: ಇರಲಿ ಮಾನವೀಯ ದೃಷ್ಟಿಕೋನ

ಕೋವಿಡ್ ಕಾಲದಲ್ಲಿ ಸರ್ಕಾರ ತಡೆಹಿಡಿದಿದ್ದ ತುಟ್ಟಿಭತ್ಯೆಯನ್ನು ಬಿಡುಗಡೆ ಮಾಡುವಂತೆ ನೌಕರರ ಸಂಘಗಳು ಸರ್ಕಾರವನ್ನು ಒತ್ತಾಯಿಸಿವೆ. ಕೋವಿಡ್ ಕಾಲವು ಮನುಕುಲಕ್ಕೆ ಒಂದು ಪರೀಕ್ಷಾ ಘಟ್ಟ. ಅಂಥ ಕ್ಲಿಷ್ಟ ಸ್ಥಿತಿಯಲ್ಲಿ ಜನರ ಪ್ರಾಣ ಉಳಿಸುವುದು ಯಾವುದೇ ದೇಶದ ಸರ್ಕಾರದ ಆದ್ಯತೆಯಾಗಬೇಕಿತ್ತು. ಅದನ್ನೇ ನಮ್ಮ ಸರ್ಕಾರ ಮಾಡಿತು. ಆ ಪರ್ವ ಕಾಲದಲ್ಲಿ ಸರ್ಕಾರಕ್ಕೆ ಹೆಗಲು ಕೊಡುವುದು ಪ್ರತಿ ಪ್ರಜೆಯ ಜವಾಬ್ದಾರಿ. ಸರ್ಕಾರಕ್ಕೆ ಆರ್ಥಿಕ ನೆರವು ಅತ್ಯವಶ್ಯವಾಗಿತ್ತು. ಆಗ ತನ್ನ ನೌಕರರ ತುಟ್ಟಿಭತ್ಯೆಯನ್ನು ತಡೆಹಿಡಿದ ನಡೆ ಸರಿಯಾದುದೇ ಆಗಿತ್ತು. ಆ ಘಟ್ಟದಲ್ಲಿ ತಡೆಹಿಡಿದ ತುಟ್ಟಿಭತ್ಯೆಯನ್ನು ಈಗ ಕೊಡಿ ಎಂದು ಕೇಳುವುದು ಸರಿಯಲ್ಲ.

ಒಂದಿಷ್ಟು ನಿರ್ಗತಿಕರಿಗೆ ಸಹಾಯ ಮಾಡಿದೆವು ಎಂಬ ಮನೋಭಾವ ಮೂಡಿದಾಗ ಸಿಗುವ ತೃಪ್ತಿಯ ಮುಂದೆ, ದೊರೆಯುವ ಕೆಲವೊಂದು ಸಾವಿರ ರೂಪಾಯಿ ಕ್ಷುಲ್ಲಕ ಎನಿಸುತ್ತದೆ. ಕೇಂದ್ರ ಸರ್ಕಾರದ ಒಬ್ಬ ನಿವೃತ್ತ ನೌಕರನಾಗಿ ನನಗೆ ಹಾಗೆ ಅನ್ನಿಸಿದೆ. ನಾನು ಎಂದೂ ಯಾವ ರಾಜಕೀಯ ಪಕ್ಷದ ಪರವಾಗಿ ನಿಲ್ಲುವವನಲ್ಲ. ಇದು, ಒಂದು ಮಾನವೀಯ ದೃಷ್ಟಿಕೋನದ ವಿಶ್ಲೇಷಣೆ ಮಾತ್ರ.

**ಕೃ.ನಾಗೇಶ,** ಬೆಂಗಳೂರು

### ಅವರ ಜೇಬು ಭರ್ತಿ, ನಮ್ಮ ಸಮಯ ವ್ಯರ್ಥ!

ಕ್ರಿಕೆಟ್‌ಗೆ ನೀಡುವ ಅತಿಯಾದ ಮನ್ನಣೆ ಕುರಿತು ವಸ್ತುನಿಷ್ಠ ವಿಶ್ಲೇಷಣೆ ನಡೆಯಬೇಕು ಎಂಬ ಯೋಗಾನಂದ ಅವರ ಲೇಖನ (ಸಂಗತ, ಜುಲೈ 17) ವಾಸ್ತವಿಕವಾಗಿದೆ. ಹೌದು, ಕ್ರಿಕೆಟ್‌ಗೆ ಈ ಪರಿಯ ಆದರ, ಮನ್ನಣೆ ಬೇಕೆ? ಭಾರತದಲ್ಲಿ ಹಾಕಿ, ಕಬಡ್ಡಿ, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಟೆನಿಸ್, ಬ್ಯಾಡ್ಮಿಂಟನ್‌ನಂತಹ ಎಷ್ಟೊಂದು ಕ್ರೀಡೆಗಳು ಇವೆ. ಆದರೆ, ಅವು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ಯಾವುದಕ್ಕೂ ಇಲ್ಲಿ ಮನ್ನಣೆ ಇಲ್ಲ. ಏಕೆ ಹೀಗೆ? ಈ ಕ್ರೀಡೆಗಳ ಸುಪ್ತ ಪ್ರತಿಭೆಗಳು ಬೆಳೆಯಲಾಗುತ್ತಿಲ್ಲ. ಬೆಳಕಿಗೆ ಬರಲು ಆಸ್ಪದವೂ ಇಲ್ಲ.

ಕ್ರಿಕೆಟ್‌ಗೆ ಮಾತ್ರ ರಾಜ ಮರ್ಯಾದೆ. ಉಳಿದ ಕ್ರೀಡೆಗಳತ್ತ ತಿರುಗಿ ನೋಡುವವರೂ ಇಲ್ಲ. ಎಲ್ಲ ಕ್ರೀಡೆಗಳನ್ನೂ ಸರಿಸಮನಾಗಿ ನೋಡಬೇಕಲ್ಲವೇ? ಕ್ರಿಕೆಟ್ ಪಂದ್ಯಕ್ಕೆ ಬಹಳಷ್ಟು ಸಮಯ ವ್ಯರ್ಥವಾಗುತ್ತದೆ. ಈ ಪಂದ್ಯ ಇದ್ದರಂತೂ ಆಬಾಲವೃದ್ಧರಾದಿಯಾಗಿ ಎಲ್ಲರೂ ತಮ್ಮ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಟಿ.ವಿ. ಮುಂದೆ ಹಾಜರಾಗುತ್ತಾರೆ. ಮೊದಲೇ ಸೋಮಾರಿಗಳಾದ ಜನರಿಗೆ 'ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಅದೇ' ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆಡಿದ ಮಾತು, ಜಾರಿದ ಸಮಯವನ್ನು ನಾವು ಎಂದಿಗೂ ಹಿಂಪಡೆಯಲಾಗದು. ಹೀಗಿರುವಾಗ, ಬಹುತೇಕರ ಸಮಯವನ್ನು ಪೋಲು ಮಾಡುವ ಈ ಕ್ರೀಡೆಗೆ ಏಕಿಷ್ಟು ಮಹತ್ವ? ಅಷ್ಟಕ್ಕೂ, ಕೋಟಿಗಟ್ಟಲೆ ಹಣ ಹೋಗುವುದು ಆಟಗಾರರ ಜೇಬಿಗೆ, ಕಳೆದುಕೊಂಡ ಅಮೂಲ್ಯ ಸಮಯ ಮಾತ್ರ ನಮ್ಮ ಪಾಲಿಗೆ.

**ವೀಣಾ ಸುಬ್ರಹ್ಮಣ್ಯ,** ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ–2024ಕ್ಕೆ ವಿರೋಧ

# ‘ನಗರ ನಕ್ಸಲ’ರ ನಿಗ್ರಹಕ್ಕೆ ಪ್ರತ್ಯೇಕ ಕಾಯ್ದೆ ಬೇಕೆ?

• ಬಿ.ವಿ.ಶ್ರೀನಾಥ್

‘ನಕ್ಸಲರು ಕೇವಲ ಗಡ್‌ಚಿರೋಲಿಯಲ್ಲಿ ಇಲ್ಲ. ನಗರ ನಕ್ಸಲರು ಕೆಲವು ಸರ್ಕಾರೇತರ ಸಂಸ್ಥೆಗಳಲ್ಲಿ (ಎನ್‌ಜಿಒ) ಸೇರಿದ್ದಾರೆ. ಅವರು ಸರ್ಕಾರದ ವಿರುದ್ಧ ವ್ಯವಸ್ಥಿತವಾಗಿ ಸುಳ್ಳು ನಿರೂಪಣೆಗಳನ್ನು ಹರಡುತ್ತಿದ್ದಾರೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಜೂನ್‌ನಲ್ಲಿ ಹೇಳಿದ್ದರು. ಆಡಳಿತಾರೂಢ ಮಹಾಯುತಿ ಮೈತ್ರಿಕೂಟವು ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ ಬಗ್ಗೆ ಮಾತನಾಡುವ ವೇಳೆ ನಗರ ನಕ್ಸಲರ ಪ್ರಸ್ತಾಪ ಮಾಡಿದ್ದ ಅವರು, ಅಂಥವರ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಜನರಿಗೆ ಕರೆ ನೀಡಿದ್ದರು. ಅದಾದ ಒಂದು ತಿಂಗಳ ಬಳಿಕ ಅವರ ಸರ್ಕಾರವು ನಗರ ನಕ್ಸಲರನ್ನು ನಿಗ್ರಹಿಸಲು ಕಾಯ್ದೆಯೊಂದನ್ನು ತರಲು ಸಿದ್ಧತೆ ನಡೆಸಿದೆ.

ಮಹಾಯುತಿ ಸರ್ಕಾರ ಮಹಾರಾಷ್ಟ್ರದ ವಿಧಾನಸಭೆಯಲ್ಲಿ ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ-2024 ಮಂಡಿಸಿದೆ. ಗೃಹ, ಕಾನೂನು ಖಾತೆ ಸಚಿವ ದೇವೇಂದ್ರ ಫಡಣವೀಸ್ ಮಸೂದೆ ಮಂಡಿಸಿದ್ದಾರೆ. ನಕ್ಸಲಿಸಂ ಪಿಡುಗು ಮತ್ತು ನಗರ ಪ್ರದೇಶಗಳಲ್ಲಿ ನೆಲಸಿರುವ ನಕ್ಸಲ್ ಪರ ಸಹಾನುಭೂತಿ ಉಳ್ಳವರನ್ನು ನಿಗ್ರಹಿಸುವುದು ಮಸೂದೆಯ ಉದ್ದೇಶ ಎಂದು ಸರ್ಕಾರ ಪ್ರತಿಪಾದಿಸಿದೆ. ಇಂತಹದ್ದೇ ಕಾಯ್ದೆ ಛತ್ತೀಸಗಢ, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ ರಾಜ್ಯಗಳಲ್ಲಿ ಜಾರಿಯಲ್ಲಿದೆ.

> ಯಾವುದೇ ರೀತಿಯಲ್ಲಿ ಕಾನೂನು ಉಲ್ಲಂಘಿಸುವವರನ್ನು ಶಿಕ್ಷೆಗೊಳಪಡಿಸಲು ದೇಶದಲ್ಲಿ ಭಾರತೀಯ ನ್ಯಾಯ ಸಂಹಿತೆಯೂ ಸೇರಿದಂತೆ ಯುಎಪಿಎ, ಪಿಎಂಎಲ್‌ಎ ಮುಂತಾದ ಕಠಿಣ ಕಾಯ್ದೆಗಳು ಈಗಾಗಲೇ ಇವೆ. ಇವು ಸಾಲದು ಎನ್ನುವಂತೆ ಇದೀಗ ಮಹಾರಾಷ್ಟ್ರ ಸರ್ಕಾರವು ವಿಶೇಷ ಸಾರ್ವಜನಿಕ ಭದ್ರತಾ ಕಾಯ್ದೆ ತರಲು ಹೊರಟಿದೆ. ನಗರ ನಕ್ಸಲರನ್ನು ನಿಗ್ರಹ ಮಾಡಲು ಈ ಕಾನೂನು ತರುತ್ತಿರುವುದಾಗಿ ಅಲ್ಲಿನ ಸರ್ಕಾರ ಘೋಷಿಸಿದೆ. ಆದರೆ, ದೇಶದ ರಾಜಕಾರಣ ಮತ್ತು ಹೋರಾಟಗಳ ಸಂದರ್ಭದಲ್ಲಿ ‘ನಗರ ನಕ್ಸಲರು’ ಎನ್ನುವ ಪದಗುಚ್ಛ ಬಳಕೆಯಾದ ರೀತಿಯನ್ನು ಗಮನಿಸಿದವರು, ಮಹಾರಾಷ್ಟ್ರದ ಮಸೂದೆಗೆ ವಿರೋಧ ವ್ಯಕ್ತಪಡಿಸಿದ್ದಾರೆ

ಮಹಾರಾಷ್ಟ್ರದ ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದರೆ, ಅದು ಮತ್ತೊಂದು ದಮನಕಾರಿ ಕಾನೂನಾಗಲಿದೆ; ಮಸೂದೆಯಲ್ಲಿ ದುರುಪಯೋಗಕ್ಕೆ ಹೆಚ್ಚು ಅವಕಾಶ ಇದ್ದು, ಇದು ‘ಕಾನೂನುಬಾಹಿರ ಚಟುವಟಿಕೆ’ ತಡೆಗೆ ಪೊಲೀಸರಿಗೆ ಹೆಚ್ಚು ಅಧಿಕಾರ ನೀಡುತ್ತದೆ ಎನ್ನುವ ವಿಶ್ಲೇಷಣೆ ಕೇಳಿಬರುತ್ತಿದೆ.

‘ಈಗ ಚಾಲ್ತಿಯಲ್ಲಿರುವ ಉಗ್ರರನ್ನು ನಿಗ್ರಹಿಸುವ ಕಾಯ್ದೆಗಳು ನಗರ ನಕ್ಸಲರನ್ನು ಸದೆಬಡಿಯಲು ಹೆಚ್ಚು ಪರಿಣಾಮಕಾರಿಯಾಗಿಲ್ಲ. ಹಾಗಾಗಿ ಹೊಸ ಕಾಯ್ದೆ ತರುತ್ತಿದ್ದೇವೆ’ ಎನ್ನುವುದು ಮಹಾರಾಷ್ಟ್ರ ಸರ್ಕಾರದ ವಾದ. ಇದು ವ್ಯಕ್ತಿಗಳು ಮತ್ತು ಸಂಸ್ಥೆ/ಸಂಘಟನೆಗಳ ಚಟುವಟಿಕೆಗಳನ್ನು ಕ್ರಿಮಿನಲ್ ಚಟುವಟಿಕೆಗಳ ಪರಿಧಿಗೆ ತರುವ ಅಧಿಕಾರವನ್ನು ಸರ್ಕಾರಕ್ಕೆ ನೀಡುವುದಲ್ಲದೇ, ಅದಕ್ಕಾಗಿ ಕಠಿಣ ಶಿಕ್ಷೆಯನ್ನು ವಿಧಿಸುವ ಅಂಶಗಳನ್ನು ಒಳಗೊಂಡಿದೆ.

ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವ, ಅಂಥವನ್ನು ಬೆಂಬಲಿಸುವ, ಸಹಾಯ ಮಾಡುವ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರೋತ್ಸಾಹಿಸುವ ವ್ಯಕ್ತಿ ಅಥವಾ ಸಂಸ್ಥೆ/ಸಂಘಟನೆಯನ್ನು ಕಾನೂನುಬಾಹಿರ ಎಂದು ಮಸೂದೆಯಲ್ಲಿ ವಿವರಿಸಲಾಗಿದೆ. ಇಂಥ ಸಂಸ್ಥೆ/ಸಂಘಟನೆಯ ಜತೆ ಗುರುತಿಸಿಕೊಂಡವರಿಗೆ ಮೂರರಿಂದ ಏಳು ವರ್ಷ ಜೈಲು ಶಿಕ್ಷೆ ಮತ್ತು ₹3 ಲಕ್ಷದಿಂದ ₹5 ಲಕ್ಷದವರೆಗೆ ದಂಡ ವಿಧಿಸಬಹುದು.

ಮಹಾರಾಷ್ಟ್ರದಲ್ಲಿ ‘ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ’ (ಮೋಕಾ) ಈಗಾಗಲೇ ಜಾರಿಯಲ್ಲಿದ್ದು, ಅದನ್ನೂ ಬಹುತೇಕ ಇಂಥದ್ದೇ ಉದ್ದೇಶಗಳಿಗಾಗಿ ಜಾರಿಗೆ ತರಲಾಗಿದೆ. ಕೇಂದ್ರ ಸರ್ಕಾರದ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯನ್ನೂ (ಯುಎಪಿಎ) ಭಯೋತ್ಪಾದನೆ ನಿಗ್ರಹಕ್ಕೆ ಬಳಸಲಾಗುತ್ತಿದೆ.

| ಮಸೂದೆಯ ಸೆಕ್ಷನ್ 2(ಎಫ್) ಪ್ರಕಾರ, ಕಾನೂನುಬಾಹಿರ ಚಟುವಟಿಕೆಯ ವಿವರಣೆ | | | |
|---|---|---|---|
| | ಸಾರ್ವಜನಿಕರ ಶಾಂತಿ, ಸುವ್ಯವಸ್ಥೆಗೆ ಭಂಗ ತರುವುದು | ಕಾನೂನು ಜಾರಿ ಮತ್ತು ಇತರ ಸಂಸ್ಥೆಗಳ ವಿರುದ್ಧ ಜನರನ್ನು ಪ್ರಚೋದಿಸುವುದು | ಸರ್ಕಾರಿ ಸಿಬ್ಬಂದಿಯ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವುದು |
| | ಕಾನೂನು ಸುವ್ಯವಸ್ಥೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡುವುದು | | ಈ ಎಲ್ಲಾ ಕಾನೂನುಬಾಹಿರ ಚಟುವಟಿಕೆ ನಡೆಸಲು ಹಣ ಮತ್ತು ಇತರ ಸಾಮಗ್ರಿ ಸಂಗ್ರಹ ಮಾಡುವುದು |
| | ಸಾರ್ವಜನಿಕರಲ್ಲಿ ಭಯ ಮತ್ತು ಅನುಮಾನ ಮೂಡಿಸುವುದು; ಸ್ಫೋಟಕ, ಬಂದೂಕು ಬಳಸುವುದು | | |

## ಮಸೂದೆ ವಿರೋಧಿಸುವವರ ವಾದವೇನು?

ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ- 2024ಕ್ಕೆ ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳ ಮುಖಂಡರು, ಕಾನೂನು ತಜ್ಞರು, ಮಾನವ ಹಕ್ಕು ರಕ್ಷಣೆಗೆ ಹೋರಾಡುತ್ತಿರುವ ಕೆಲವು ಸಂಸ್ಥೆಗಳವರು ವಿರೋಧ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸ್ ಮುಖಂಡ ಪೃಥ್ವಿರಾಜ್ ಚೌಹಾಣ್, ಇದು ಪ್ರತಿಭಟನೆಗಳನ್ನು ಹತ್ತಿಕ್ಕುವ ಒಂದು ತಂತ್ರ ಎಂದಿದ್ದಾರೆ. ಮಸೂದೆಯನ್ನು ವಾಪಸ್ ಪಡೆಯಬೇಕು ಎಂದು ಸಿಪಿಎಂ ಆಗ್ರಹಿಸಿದೆ.

ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ-2024ರಲ್ಲಿ ‘ಕಾನೂನುಬಾಹಿರ’ ಎನ್ನುವುದರ ವಿವರಣೆ ಸೇರಿದಂತೆ ಹಲವು ಸೆಕ್ಷನ್‌ಗಳು ಅಸ್ಪಷ್ಟವಾಗಿವೆ. ಹಾಗಾಗಿ, ದುರುಪಯೋಗಕ್ಕೆ ಅವಕಾಶ ಇದೆ ಎನ್ನುವುದು ವಿರೋಧಿಗಳ ವಾದ. ಈ ಮಸೂದೆಯ ಪ್ರಕಾರ, ವಿಚಾರಣೆಗೂ ಮುನ್ನವೇ ಆರೋಪಿಯನ್ನು ಪೊಲೀಸರು ಅವರ ಮನೆಯಿಂದ ವಶಕ್ಕೆ ಪಡೆಯಬಹುದಾಗಿದೆ {ಸೆಕ್ಷನ್ 9 (2)} ಮತ್ತು ಅವರ ಚರಾಸ್ತಿ ವಶಕ್ಕೆ ಪಡೆದು, ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಬಹುದಾಗಿದೆ {ಸೆಕ್ಷನ್ 10 (1)}. ಶಂಕಿತ ಸಂಸ್ಥೆಯ ಸದಸ್ಯರಷ್ಟೇ ಅಲ್ಲದೇ ಅದರೊಂದಿಗೆ ಗುರುತಿಸಿಕೊಂಡವರು ಕೂಡ ವಿಚಾರಣೆಗೆ, ಶಿಕ್ಷೆಗೆ ಅರ್ಹರಾಗಿರುತ್ತಾರೆ {(ಸೆಕ್ಷನ್ 8 (2)}. ಈ ಮಸೂದೆಯ ಅಡಿ ದಾಖಲಾಗುವ ಎಲ್ಲ ಪ್ರಕರಣಗಳನ್ನೂ ಜಾಮೀನುರಹಿತ ಎಂದು ಪರಿಗಣಿಸಲಾಗುತ್ತದೆ (ಸೆಕ್ಷನ್ 16).

ಈ ಕಾಯ್ದೆಯ ಅಡಿ ಬಂಧನಕ್ಕೊಳಗಾದವರು, ಪ್ರಕರಣದ ಸಂಬಂಧ ಜಿಲ್ಲಾ ಮಟ್ಟದ ನ್ಯಾಯಾಲಯಗಳನ್ನು ಸಂಪರ್ಕಿಸುವಂತಿಲ್ಲ. ಅವರು ಹೈಕೋರ್ಟ್ ಇಲ್ಲವೇ ಸುಪ್ರೀಂ ಕೋರ್ಟ್‌ನಲ್ಲಿ ಮಾತ್ರ ಬಂಧನವನ್ನು ಪ್ರಶ್ನಿಸಬಹುದಾಗಿದೆ. ಜತೆಗೆ ಈ ಮಸೂದೆಯ 14 ಮತ್ತು 15ನೇ ಸೆಕ್ಷನ್‌ಗಳು ಪೊಲೀಸರಿಗೆ ಮತ್ತು ಅಧಿಕಾರಿಗಳಿಗೆ ಅಧಿಕಾರ ದುರುಪಯೋಗದ ಆರೋಪಗಳಿಂದ ರಕ್ಷಣೆ ಒದಗಿಸುತ್ತವೆ.

ಮಸೂದೆಯ ಸೆಕ್ಷನ್ 5ರ ಪ್ರಕಾರ, ರಾಜ್ಯ ಸರ್ಕಾರವು ಒಂದು ಸಲಹಾ ಮಂಡಳಿಯನ್ನು ರಚಿಸುತ್ತದೆ. ಅದು ಮೂವರು ಸದಸ್ಯರನ್ನು ಒಳಗೊಳ್ಳಲಿದ್ದು, ನಿವೃತ್ತ ಅಥವಾ ಹಾಲಿ ಹೈಕೋರ್ಟ್ ನ್ಯಾಯಾಧೀಶರು ಅಥವಾ ಅವರಿಗೆ ಸಮನಾದ ಹುದ್ದೆಯಲ್ಲಿದ್ದವರನ್ನು ಸರ್ಕಾರ ನೇಮಿಸಬಹುದಾಗಿದೆ. ಅವರ ಪೈಕಿ ಒಬ್ಬರನ್ನು ಸರ್ಕಾರವೇ ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುತ್ತದೆ. ಯಾವುದೇ ಸಂಸ್ಥೆ/ಸಂಘಟನೆಯನ್ನು ಕಾನೂನುಬಾಹಿರ ಎಂದು ತೀರ್ಮಾನಿಸಲು ಅಗತ್ಯ ಕಾರಣಗಳಿವೆಯೇ ಎನ್ನುವುದನ್ನು ಸಲಹಾ ಮಂಡಳಿಯು ನಿರ್ಧರಿಸಲಿದೆ. ಅದು ಮೂರು ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸುತ್ತದೆ. ಸಲಹಾ ಮಂಡಳಿ ರಚನೆಯಲ್ಲೂ ಸರ್ಕಾರದ ಪಾತ್ರವೇ ಪ್ರಮುಖವಾಗಿರುವುದರಿಂದ, ಪಕ್ಷಪಾತಕ್ಕೆ ಅವಕಾಶವಿದೆ ಎನ್ನುವ ದೂರು ಕೇಳಿಬಂದಿದೆ.

‘ನಗರ ನಕ್ಸಲರ ನಿಗ್ರಹ’ಕ್ಕೆ ಒಂದು ಹೊಸ ಕಾಯ್ದೆಯ ಅಗತ್ಯವೇ ಇರಲಿಲ್ಲ ಎನ್ನುವ ವಾದವಿದೆ. ಜನರ ಹಕ್ಕುಗಳನ್ನು ದಮನ ಮಾಡಲು, ಜನರಿಗೆ ಕಿರುಕುಳ ನೀಡಲು ಮತ್ತು ಪ್ರತಿಭಟನೆಗಳನ್ನು, ಭಿನ್ನಮತವನ್ನು, ವಿರೋಧಿಗಳನ್ನು ಹತ್ತಿಕ್ಕಲು ಈ ಕಾಯ್ದೆಯು ಸರ್ಕಾರಕ್ಕೆ ಮತ್ತೊಂದು ಅಸ್ತ್ರವಾಗಲಿದೆ ಎಂದು ‘ಸಿಟಿಜನ್ಸ್ ಫಾರ್ ಜಸ್ಟೀಸ್ ಅಂಡ್ ಪೀಸ್’ ಸೇರಿದಂತೆ ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವ ಹಲವು ಸಂಸ್ಥೆಗಳು ಆತಂಕ ವ್ಯಕ್ತಪಡಿಸಿವೆ.




ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕ ಗಿರೀಶ ಕಾರ್ನಾಡ್ ಅವರು ‘ನಾನು ಕೂಡ ನಗರ ನಕ್ಸಲ್’ ಎನ್ನುವ ಬೋರ್ಡ್ ಅನ್ನು ಕೊರಳಿಗೆ ನೇತು ಹಾಕಿಕೊಂಡು, 2018ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದರು
–ಪ್ರಜಾವಾಣಿ ಸಂಗ್ರಹ ಚಿತ್ರ

## ‘ನಗರ ನಕ್ಸಲರು’ ಪದ ಬಳಕೆ ಇಲ್ಲ ಎಂದಿದ್ದ ಗೃಹ ಸಚಿವಾಲಯ

‘ನಗರ ನಕ್ಸಲರು’ (ಅರ್ಬನ್ ನಕ್ಸಲ್) ಎನ್ನುವುದನ್ನು ಬಲಪಂಥೀಯರು ಹಾಗೂ ಬಿಜೆಪಿ ಮುಖಂಡರು ಹೆಚ್ಚಾಗಿ ಬಳಸುತ್ತಾರೆ. ಎಡಪಂಥೀಯರನ್ನು ಮತ್ತು ಬಿಜೆಪಿ ಸರ್ಕಾರವನ್ನು ಟೀಕಿಸುವವರನ್ನು ‘ನಗರ ನಕ್ಸಲರು’ ಎಂದು ಬಣ್ಣಿಸಿದ ಸಂದರ್ಭಗಳೂ ಇವೆ.

ಲೋಕಸಭಾ ಚುನಾವಣೆ ಪ್ರಚಾರದ ವೇಳೆ ಕಾಂಗ್ರೆಸ್ ಹಾಗೂ ಎಎಪಿ ವಿರುದ್ಧ ವಾಗ್ದಾಳಿ ನಡೆಸಿದ್ದ ಗೃಹ ಸಚಿವ ಅಮಿತ್ ಶಾ, ‘ನಗರ ನಕ್ಸಲರಿಗೆ ಮತ ನೀಡುವಂತಹ ತಪ್ಪು ಮಾಡಬೇಡಿ’ ಎಂದು ಜನರಿಗೆ ಕರೆ ನೀಡಿದ್ದರು. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರಿಂದ ಹಿಡಿದು ಸಂಸದ ತೇಜಸ್ವಿ ಸೂರ್ಯವರೆಗೆ ಬಿಜೆಪಿಯ ಹಲವು ಮುಖಂಡರು ಹಲವು ಸಂದರ್ಭಗಳಲ್ಲಿ ‘ನಗರ ನಕ್ಸಲ್’ ಎಂದು ಕರೆದಿದ್ದಾರೆ.

ರಾಜಕೀಯ ವಿರೋಧಿಗಳನ್ನಷ್ಟೇ ಅಲ್ಲ, ಸರ್ಕಾರದ ನೀತಿಗಳನ್ನು ವಿರೋಧಿಸಿ ವಿದ್ಯಾರ್ಥಿಗಳು, ರೈತರು ಪ್ರತಿಭಟನೆಗಳನ್ನು ನಡೆಸಿದಾಗ, ಅವರನ್ನು ಟೀಕಿಸುವ ಸಂದರ್ಭದಲ್ಲಿ ಬಿಜೆಪಿ ಮುಖಂಡರು ನಗರ ನಕ್ಸಲರು ಎನ್ನುವ ಪದಗುಚ್ಛ ಬಳಸಿದ್ದರು. ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರನ್ನು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ನಗರ ನಕ್ಸಲ್ ಎಂದು ಕರೆದಿದ್ದರು. 2020ರ ಮಾರ್ಚ್‌ನಲ್ಲಿ ಟಿಎಂಸಿ ರಾಜ್ಯಸಭಾ ಸದಸ್ಯೆ ಶಾಂತಾ ಛೇತ್ರಿ ಅವರ ಪ್ರಶ್ನೆಯೊಂದಕ್ಕೆ ರಾಜ್ಯಸಭೆಯಲ್ಲಿ ಉತ್ತರಿಸುವ ವೇಳೆ, ‘ನಗರ ನಕ್ಸಲರು ಎನ್ನುವ ಪದಗುಚ್ಛವನ್ನು ಭಾರತ ಸರ್ಕಾರದ ಗೃಹ ಸಚಿವಾಲಯ ಬಳಸುತ್ತಿಲ್ಲ’ ಎಂದು ಗೃಹ ಖಾತೆಯ ರಾಜ್ಯ ಸಚಿವರಾಗಿದ್ದ ಜಿ.ಕಿಶನ್ ರೆಡ್ಡಿ ಹೇಳಿದ್ದರು.

ನಗರ ನಕ್ಸಲರು ಗ್ರಾಮೀಣ ಮತ್ತು ಬುಡಕಟ್ಟು ಪ್ರದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ನಗರ ಪ್ರದೇಶಗಳಲ್ಲಿಯೂ ಅವರ ಸಂಖ್ಯೆ ಹೆಚ್ಚುತ್ತಿದೆ ಎಂದು ಮಸೂದೆ ಮಂಡನೆಯ ವೇಳೆ ದೇವೇಂದ್ರ ಫಡಣವೀಸ್ ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರವು, ಭಾರತದಲ್ಲಿ ನಕ್ಸಲ್ ಚಟುವಟಿಕೆಗಳು ಕ್ಷೀಣಿಸುತ್ತಿದ್ದು, ಈಗ ಅವರು ಅಪಾಯಕಾರಿಯಾಗಿ ಉಳಿದಿಲ್ಲ ಎಂದು ಪ್ರತಿಪಾದಿಸುತ್ತಿದೆ. ನಕ್ಸಲ್ ಸಮಸ್ಯೆ ಇನ್ನೂ ಇದೆ ಎನ್ನುವುದಾದರೂ ಕಾಡಿನಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಇರುವ ನಕ್ಸಲರಿಗೆ ಅನ್ವಯಿಸುತ್ತಿರುವ ಕಾನೂನನ್ನೇ ನಗರ ನಕ್ಸಲರಿಗೂ ಅನ್ವಯಿಸಬಹುದು ಎನ್ನುವ ವಿಶ್ಲೇಷಣೆಯೂ ನಡೆಯುತ್ತಿದೆ.

ಆಧಾರ: ಪಿಟಿಐ, ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್ ವೆಬ್ ಪೋರ್ಟಲ್, ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಭದ್ರತಾ ಮಸೂದೆ–2024 ಕರಡು

## ಸಿನಿ ಬಿಟ್ಸ್

### ಇದು ‘ಮೃದುಲ’ನ ಹಾಡು

ಹೊಸಬರೇ ಸೇರಿಕೊಂಡು ಸಿದ್ಧಪಡಿಸಿರುವ ‘ಲೈಫ್ ಆಫ್ ಮೃದುಲ’ ಚಿತ್ರದ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮದನ್ ಮೂವೀಸ್ ಬ್ಯಾನರ್ ಅಡಿಯಲ್ಲಿ ಮದನ್‌ಕುಮಾರ್.ಸಿ ಚಿತ್ರವನ್ನು ನಿರ್ಮಿಸುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. ಚೇತನ್ ತ್ರಿವೇಣ್ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ

‘ಮೃದುಲಾಳ ಜೀವನದಲ್ಲಿ ಎದುರಾಗುವ ಮೂರು ವಿಭಿನ್ನ ಕಾಲ ಘಟ್ಟಗಳನ್ನು ಚಿತ್ರದಲ್ಲಿ ಹೇಳಲಾಗಿದೆ. ಆಕೆಗೆ ಬದುಕಲ್ಲಿ ಅನಿರೀಕ್ಷಿತವಾಗಿ ಬರುವ ಸವಾಲನ್ನು ಯಾವ ರೀತಿ ಎದುರಿಸುತ್ತಾಳೆ ಎಂಬುದನ್ನು ಕುತೂಹಲ ತಿರುವುಗಳ ಮೂಲಕ ಥ್ರಿಲ್ಲರ್ ರೂಪದಲ್ಲಿ ತೋರಿಸಲಾಗಿದೆ’ ಎಂದರು ನಿರ್ದೇಶಕರು.

ಪೂಜಾ ಲೋಕಾಪುರ ಚಿತ್ರದ ನಾಯಕಿ. ಆಶಾಸುಜಯ್, ಶಶಾಂಕ್, ಕುಲದೀಪ್, ಯೋಗಿದೇವಗಂಗೆ ಮುಂತಾದವರು ನಟಿಸಿದ್ದಾರೆ. ರಾಹುಲ್. ಎಸ್.ವಾಸ್ತರ್ ಸಂಗೀತ, ಅಚ್ಚುಸುರೇಶ್ ಛಾಯಾಚಿತ್ರಗ್ರಹಣ, ವಸಂತ ಕುಮಾರ್.ಕೆ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಕುಂದಾಪುರ ಮೊದಲಾದೆಡೆ ಚಿತ್ರೀಕರಣಗೊಂಡಿದೆ. ಚಿತ್ರವನ್ನು ಆಗಸ್ಟ್ ತಿಂಗಳಲ್ಲಿ ತೆರೆಗೆ ತರಲು ತಂಡ ಸಿದ್ಧತೆ ನಡೆಸಿದೆ. ❖

ಪೂಜಾ ಲೋಕಾಪುರ

### ‘ಪ್ರಕರಣ ತನಿಖಾ ಹಂತದಲ್ಲಿದೆ’

ಸುಂದರ್, ಚಿಂತನ್ ಕಂಬಣ್ಣ

ರಂಗಭೂಮಿಯಲ್ಲಿ ಕೆಲಸ ಮಾಡಿ ಅನುಭವ ಗಳಿಸಿರುವ ಒಂದಿಷ್ಟು ಯುವಕರೆಲ್ಲ ಒಟ್ಟಾಗಿ ಸಿದ್ಧಪಡಿಸಿರುವ ‘ಪ್ರಕರಣ ತನಿಖಾ ಹಂತದಲ್ಲಿದೆ’ ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕರದಾಯಾಮ ಸ್ಟುಡಿಯೋಸ್ ಸಂಸ್ಥೆಯಡಿ ಚಿಂತನ್ ಕಂಬಣ್ಣ ನಿರ್ಮಿಸಿದರೆ, ಸುಂದರ್ ಎಸ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

‘ಇದೊಂದು ಕ್ರೈಮ್ ಜಾನರ್ ಕುರಿತಾದ ಚಿತ್ರ. ತನಿಖೆಯೊಂದರ ಸುತ್ತ ನಡೆಯುವ ಕಥೆ. ಡ್ರಗ್ಸ್ ಮಾಫಿಯಾ ಹಿನ್ನೆಲೆಯಲ್ಲಿ ಸಾಗುವ ಕಥೆ ಸಾಕಷ್ಟು ತಿರುವುಗಳನ್ನು ಪಡೆಯುತ್ತಾ ಹೋಗುತ್ತದೆ. ಮುಂದೆ ಏನೆಲ್ಲಾ ಆಗುತ್ತದೆ ಎಂಬುದನ್ನು ಚಿತ್ರದಲ್ಲೇ ನೋಡಬೇಕು’ ಎನ್ನುತ್ತಾರೆ ನಿರ್ದೇಶಕರು.

ಮಹಿನ್ ಕುಬೇರ್, ಮುತ್ತುರಾಜ್ ಟಿ, ನಟ ಗಗನ್, ಚಿಂತನ್ ಕಂಬಣ್ಣ ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಬೆಂಗಳೂರು ಮತ್ತು ಕನಕಪುರದಲ್ಲಿ ಚಿತ್ರೀಕರಣವಾಗಿದೆ.

ಚಿತ್ರಕ್ಕೆ ಮೋಹನ್ ಎಂ.ಎಸ್ ಮತ್ತು ಜಗದೀಶ್ ಆರ್ ಛಾಯಾಚಿತ್ರಗ್ರಹಣ, ನಾನಿ ಕೃಷ್ಣ ಸಂಕಲನ ಮತ್ತು ಶಿವೋಂ ಸಂಗೀತವಿದೆ. ಈಗಾಗಲೇ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೊನೆಯ ಹಂತದಲ್ಲಿದ್ದು, ಆಗಸ್ಟ್ ತಿಂಗಳಲ್ಲಿ ಸಿನಿಮಾ ಬಿಡುಗಡೆ ಮಾಡುವ ಯೋಜನೆಯಲ್ಲಿದೆ ಚಿತ್ರತಂಡ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
**9606038256**

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ದೆಹಲಿ ಮೆಟ್ರೊದಲ್ಲಿ ಪ್ರಯಾಣಿಸುತ್ತಿರುವ 27 ಸೆಕೆಂಡ್ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಸಚಿವೆಯೊಂದಿಗೆ ಭದ್ರತಾ ಸಿಬ್ಬಂದಿ ಇರುವುದು ಕೂಡ ವಿಡಿಯೊದಲ್ಲಿ ಇದೆ. ‘ಕೇಂದ್ರ ಹಣಕಾಸು ಸಚಿವೆಯಾಗಿರುವ ನಿರ್ಮಲಾ ಅವರು ಪ್ರತಿದಿನ ಮೆಟ್ರೊದಲ್ಲಿ ಕಚೇರಿಗೆ ಪ್ರಯಾಣಿಸುತ್ತಾರೆ’ ಎನ್ನುವ ಉಲ್ಲೇಖದೊಂದಿಗೆ ಅನೇಕರು ಈ ವಿಡಿಯೊ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಹಳೆಯ ವಿಡಿಯೊ ಆಗಿದ್ದು, ಸಚಿವೆ ಪ್ರತಿ ದಿನ ಮೆಟ್ರೊದಲ್ಲಿ ಕಚೇರಿಗೆ ಹೋಗಿಬರುತ್ತಾರೆ ಎನ್ನುವ ಪ್ರತಿಪಾದನೆ ಸುಳ್ಳು.

ವಿಡಿಯೊ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕೀವರ್ಡ್ ಸರ್ಚ್ ಮಾಡಿದಾಗ, ನಿರ್ಮಲಾ ಸೀತಾರಾಮನ್ ಅವರ ಅಧಿಕೃತ ಎಕ್ಸ್ ಖಾತೆಯಲ್ಲಿ 2024ರ ಮೇ 27ರಂದು ಈ ವಿಡಿಯೊ ಹಂಚಿಕೊಂಡಿರುವುದು ಕಂಡುಬಂತು. ನಿರ್ಮಲಾ ಅವರು ಲಕ್ಷ್ಮಿನಗರಕ್ಕೆ ಮೆಟ್ರೊ ಮೂಲಕ ಪ್ರಯಾಣಿಸಿದ್ದಾಗಿ ಆ ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಈ ಸಂಬಂಧ ಮತ್ತಷ್ಟು ಹುಡುಕಾಟ ನಡೆಸಿದಾಗ, ಕೇಂದ್ರ ಸಚಿವ ಹರ್ಷ ಮಲ್ಹೋತ್ರಾ ಅಧಿಕೃತ ಎಕ್ಸ್ ಖಾತೆಯಲ್ಲಿ ಒಂದು ಪೋಸ್ಟ್ ಕಂಡುಬಂತು. ಅದರಲ್ಲಿ, ಲೋಕಸಭಾ ಚುನಾವಣೆಯಲ್ಲಿ ಹರ್ಷ ಅವರನ್ನು ಬೆಂಬಲಿಸಲು, ಲಕ್ಷ್ಮಿನಗರ ಮೆಟ್ರೊ ಸ್ಟೇಷನ್‌ನಲ್ಲಿ ವಿದ್ಯಾರ್ಥಿಗಳನ್ನು ಭೇಟಿ ಮಾಡಲು ನಿರ್ಮಲಾ ಅವರು ಮೆಟ್ರೊದಲ್ಲಿ ಪ್ರಯಾಣಿಸಿದರು ಎಂದು ಉಲ್ಲೇಖಿಸಲಾಗಿದೆ. ಈ ಹಳೆಯ ವಿಡಿಯೊ ಅನ್ನು ಕೆಲವರು ಸುಳ್ಳು ಪ್ರತಿಪಾದನೆಗಳೊಂದಿಗೆ ಈಗ ಹಂಚಿಕೊಳ್ಳುತ್ತಿದ್ದಾರೆ.

## ಗುಂಡಣ್ಣ

## ಅತ್ತ ದೀಪ ಭವ...

## ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಸಾಹಿತಿ ಹಾಗೂ ಸಾಂಸ್ಕೃತಿಕ ಚಿಂತಕರಾದ ನಟರಾಜ ಬೂದಾಳ್ ಅವರು, ಬೌದ್ಧ ದರ್ಶನದ ಕುರಿತು ಯೂಟ್ಯೂಬ್ ವಾಹಿನಿಯೊಂದಕ್ಕೆ ಉಪನ್ಯಾಸ ಸರಣಿಯನ್ನು ನೀಡಿದ್ದಾರೆ. ಅದರಲ್ಲಿ ಅವರು ಉಲ್ಲೇಖಿಸಿದ ಕಥೆಯೊಂದು ನನ್ನ ಮನಸ್ಸಿಗೆ ತುಂಬಾ ನಾಟಿತು.

ಒಂದೂರಿನಲ್ಲಿ ಒಬ್ಬ ಭಿಕ್ಷುಕ ರಸ್ತೆ ಬದಿ ಹಳೆ ಪೆಟ್ಟಿಗೆಯೊಂದರ ಮೇಲೆ ಕುಳಿತು ದಿನವೂ ಭಿಕ್ಷೆ ಬೇಡುತ್ತಿದ್ದ. ಒಮ್ಮೆ ಆ ದಾರಿಯಲ್ಲಿ ಸಾಗುತ್ತಿದ್ದ ಬುದ್ಧನ ಬಳಿಯೂ ಭಿಕ್ಷೆಗಾಗಿ ತನ್ನ ಪಾತ್ರೆಯನ್ನೊಡ್ಡಿದ. ಬುದ್ಧ ತನ್ನ ಜೇಬನ್ನೆಲ್ಲ ತಡಕಾಡಿದ. ಆದರೆ ಭಿಕ್ಷುಕನಿಗೆ ಹಾಕಲು ಒಂದು ಬಿಡಿಗಾಸೂ ಸಿಗಲಿಲ್ಲ. ಆದರೆ ಅವನಿಗೇಕೋ ಭಿಕ್ಷುಕ ಕುಳಿತಿದ್ದ ಪೆಟ್ಟಿಗೆಯ ಕುರಿತು ಕುತೂಹಲವೆನಿಸಿತು.

‘ಏನಿದೆ ಆ ಪೆಟ್ಟಿಗೆಯಲ್ಲಿ’ ಎಂದು ಪ್ರಶ್ನಿಸಿದ. ‘ಗೊತ್ತಿಲ್ಲ ಸ್ವಾಮಿ, ಹಳೆ ಕಾಲದ ಪೆಟ್ಟಿಗೆ... ಏನಿದ್ದೀತು ಮಣ್ಣು’ ಎಂದು ಉದಾಸೀನದಿಂದ ಉತ್ತರಿಸಿದ ಭಿಕ್ಷುಕ. ‘ನೀನು ಯಾವಾಗಿನಿಂದ ಇದರ ಮೇಲೆ ಕುಳಿತು ಭಿಕ್ಷೆ ಬೇಡುತ್ತಿದ್ದಿ’ ಎಂದು ಪ್ರಶ್ನಿಸಿದ ಬುದ್ಧ. ‘ಸುಮಾರು ಮೂವತ್ತು ವರ್ಷಗಳಿಂದಲೂ ನಾನು ಇದರ ಮೇಲೆ ಕೂತು ಭಿಕ್ಷೆ ಬೇಡ್ತಿದೀನಿ ಸ್ವಾಮಿ’ ಎಂದ ಭಿಕ್ಷುಕ. ‘ಒಮ್ಮೆ ಬೀಗ ಒಡೆದು ಅದರೊಳಗೆ ಏನಿದೆ ಅಂತ ನೋಡು’ ಎಂದ ಬುದ್ಧ. ‘ಅಯ್ಯೋ ಬಿಡಿ ಸ್ವಾಮಿ ಅದರಲ್ಲೇನಿದ್ದೀತು’ ಎಂದು ನಿರ್ಲಕ್ಷ ಮಾಡಿದ ಭಿಕ್ಷುಕ.

ಕೊನೆಗೂ ಬುದ್ಧನ ಒತ್ತಾಯದ ಮೇರೆಗೆ ಭಿಕ್ಷುಕ ಒಂದು ಕಲ್ಲನ್ನೆತ್ತಿ ತುಕ್ಕು ಹಿಡಿದಿದ್ದ ಪೆಟ್ಟಿಗೆಯ ಬೀಗವನ್ನು ಒಡೆದ. ಒಳಗೆ ನೋಡಿದರೆ ಪೆಟ್ಟಿಗೆಯ ತುಂಬಾ ಚಿನ್ನದ ನಾಣ್ಯಗಳು. ಇಂತಹ ಅಪಾರ ಸಂಪತ್ತಿನ ಮೇಲೇ ಕುಳಿತು ಮೂವತ್ತು ವರ್ಷಗಳಿಂದ ಈ ಭಿಕ್ಷುಕ, ಎಲ್ಲರ ಬಳಿ ದರಿದ್ರನಂತೆ ಅಂಗಲಾಚಿ ಭಿಕ್ಷೆ ಬೇಡಿದ್ದಾನೆ.

ಹೀಗೆ ಅಲ್ಲವೇ ನಮ್ಮೆಲ್ಲರ ಬದುಕು? ನಮ್ಮ ಅಂತರಂಗದ ಸಿರಿವಂತಿಕೆಯನ್ನು ನಾವು ಗುರುತಿಸುವುದೇ ಇಲ್ಲ. ಇದು ನಮ್ಮಾಳದಲ್ಲಿದ್ದರೂ ಅದನ್ನು ಪಡೆದುಕೊಳ್ಳುವ ಗೋಜಿಗೆ ಹೋಗದೇ ಬಾಹ್ಯ ಸಂಪತ್ತಿಗಾಗಿ ಎಲ್ಲರೂ ಭಿಕ್ಷುಕರಂತೆ ಈ ಜಗತ್ತಿನಲ್ಲಿ ಕಂಡ ಕಂಡ ಕಡೆ ಕೈ ಚಾಚುವವರೇ. ನಾವು ನಮ್ಮೊಳಗಿರುವ ವ್ಯಕ್ತಿತ್ವವೆಂಬ ಮಹಾಘನದ ಕುರಿತು ಅರಿವನ್ನು ಮೂಡಿಸಿಕೊಳ್ಳುವ ಪ್ರಯತ್ನವನ್ನೇ ಮಾಡುವುದಿಲ್ಲ. ಬುದ್ಧನ ಕಟ್ಟ ಕಡೆಯ ಸಂದೇಶವೂ ಇದೇ ಆಗಿತ್ತು. ಬುದ್ಧ ನಿರ್ವಾಣದ ಹಂತದಲ್ಲಿದ್ದಾಗ ಅವನ ಶಿಷ್ಯ ಆನಂದ ಈ ‘ಜಗತ್ತಿಗೆ ನಿಮ್ಮ ಕೊನೆಯ ಸಂದೇಶವೇನು’ ಎಂದು ಪ್ರಶ್ನಿಸಿದಾಗ ಬುದ್ಧ ‘ಅತ್ತ ದೀಪ ಭವ’ ಎಂದು ಉತ್ತರಿಸಿದ. ಅಂದರೆ ‘ನಿನಗೆ ನೀನೇ ಬೆಳಕು’ ಎಂಬುದಾಗಿತ್ತು. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜುಲೈ 22, 2024

**ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ:** ಆಷಾಢ ಕೃಷ ಪ್ರತಿಪದ್ ಗಂ. 13-12 ನಕ್ಷತ್ರ: ಶ್ರವಣ ಗಂ. 22-21 ಯೋಗ: ಪ್ರೀತಿ ಗಂ. 17-58 ಕರಣ: ಕೌಲವ ಗಂ. 13-12, ಕರ್ಕಾಟಕ ಮಾಸದ 06 ನೇ ದಿನ, ಮಳೆನಕ್ಷತ್ರ: ಪುಷ್ಯ 1.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-17 ಸೂರ್ಯಾಸ್ತ : 06-57

ಮುಸ್ಲಿಂ ದಿನಾಂಕ : 15 ಮೊಹರಮ್

ಅದೃಷ್ಟ ಸಂಖ್ಯೆ : 8, 5

**ಮೇಷ:** ಅವಶ್ಯಕತೆ ಇರುವ ಜಾಗದಲ್ಲಿ ಜಿಪುಣತನವನ್ನು ತೋರಿಸಿ ಸಮಾಜದಲ್ಲಿ ಗೌರವ ಕಳೆದುಕೊಳ್ಳುವಂತಾಗಬಹುದು ಎಚ್ಚರಿಕೆ. ಶತ್ರುಗಳ ಗಾಳಕ್ಕೆ ಸಿಕ್ಕಿಕೊಳ್ಳದಂತೆ ಎಚ್ಚರವಹಿಸಬೇಕು.

**ವೃಷಭ:** ವಂಶಪಾರಂಪರಿಕವಾಗಿ ಬಂದ ವ್ಯವಹಾರ ಅಥವಾ ವೃತ್ತಿಯಲ್ಲಿ ಮತ್ತಷ್ಟು ಏಳಿಗೆ ಕಾಣಲಿದೆ. ಕಾರ್ಮಿಕರ ಸಮಸ್ಯೆಗಳಿಗೆ ಪ್ರತಿಕ್ರಿಯೆ ನೀಡಿ ಅವರ ಮನಸ್ಸಿನಲ್ಲಿ ಉತ್ತಮ ಸ್ಥಾನ ಸಂಪಾದಿಸಿಕೊಳ್ಳುವಿರಿ.

**ಮಿಥುನ:** ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋಗ ಆಗುವುದು. ರಾಜಕಾರಣಿಗಳೊಂದಿಗೆ ಬೆಳೆಸಿಕೊಂಡ ಒಡನಾಟ ಕಾರಾಗೃಹ ವಾಸದಂಥ ಅಪಾಯದ ಪರಿಸ್ಥಿತಿ ತಂದೊಡ್ಡಲಿದೆ. ಸಮ್ಮಿಶ್ರ ಫಲ ಕಾಣುವಿರಿ.

**ಕರ್ಕಾಟಕ:** ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟಿನ ತೊಂದರೆಯನ್ನು ಸೃಷ್ಟಿ ಮಾಡುವುದು. ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ.

**ಸಿಂಹ:** ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಮಾಡುವುದು ಸಮಂಜಸವಲ್ಲ.ಹಾಸ್ಯ ಪ್ರಜ್ಞೆ ಹೆಚ್ಚಾಗುವುದು. ಆದರೆ, ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ.

**ಕನ್ಯಾ:** ಅನಿರೀಕ್ಷಿತ ಅವಕಾಶಗಳನ್ನು ಯಾವುದೇ ಮುಜುಗರವಿಲ್ಲದೆ ಬಳಸಿಕೊಳ್ಳದಿದ್ದರೆ ದಡ್ಡತನ ಪ್ರದರ್ಶಿಸಿದಂತಾಗುವುದು. ವಿಮಾ ಕ್ಷೇತ್ರದಿಂದ ಆಗಬೇಕಾದ ಸಹಕಾರದಲ್ಲಿ ಗೊಂದಲಗಳು ಉದ್ಭವಿಸಬಹುದು.

**ತುಲಾ:** ಮನೆಯಲ್ಲಿ ಶಾಂತ ವಾತಾವರಣವಿದ್ದು ನಿಧಾನಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಅವಿವಾಹಿತ ಹೆಣ್ಣುಮಕ್ಕಳಿಗೆ ಅನಿರೀಕ್ಷಿತ ಕಂಕಣಬಲ ಕೂಡಿಬರುವುದು.

**ವೃಶ್ಚಿಕ:** ಕುಟುಂಬ ವರ್ಗದಲ್ಲಿ ಸಲಹೆಗಳಿಗೆ ಆದ್ಯತೆ ದೊರೆಯಲಿದೆ. ಹೊಂದಾಣಿಕೆಯು ಜಗದ ನಿಯಮ. ಆಸ್ತಿ ಕೊಳ್ಳುವ ನಿರ್ಧಾರದಲ್ಲಿ ಮನೋಭಾವವನ್ನು ಬದಲಿಸಿಕೊಳ್ಳಬೇಕಾಗುತ್ತದೆ.

**ಧನು:** ದವಸ ಧಾನ್ಯ ಹಾಗೂ ಮಸಾಲಾ ಸಾಮಗ್ರಿಗಳ ಸಗಟು ಹಾಗೂ ರಫ್ತು ವ್ಯಾಪಾರಿಗಳಿಗೆ ಈ ದಿನ ವ್ಯವಹಾರದಲ್ಲಿ ಅನುಕೂಲವಾಗುವುದು. ವೃತ್ತಿರಂಗದ ಕೆಲವು ಸೂಕ್ಷ್ಮ ವಿಚಾರಗಳನ್ನು ಅರ್ಥಮಾಡಿಕೊಳ್ಳಿ.

**ಮಕರ:** ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದಿದ್ದರೆ ಎಲ್ಲವನ್ನೂ ಸುಲಭವಾಗಿ ನಿಭಾಯಿಸಬಹುದು. ನಿಮ್ಮ ವೃತ್ತಿ ಜೀವನಕ್ಕೆ ಸಂಬಂಧಪಟ್ಟಂಥ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ.

**ಕುಂಭ:** ರಿಯಲ್ ಎಸ್ಟೇಟುದಾರರಿಗೆ ಉತ್ತಮ ಧನಲಾಭವಿರುವ ಅವಕಾಶಗಳಿಂದ ವ್ಯವಹಾರಗಳು ವೃದ್ಧಿಗೊಳ್ಳಲಿದೆ. ಗುಮಾಸ್ತ ಕೆಲಸದಲ್ಲಿದ್ದವರಿಗೆ ಪೂರ್ಣ ವಿರಾಮ ಸಿಗುವಂತೆ ಆಗುವ ಸಾಧ್ಯತೆ ಇದೆ.

**ಮೀನ:** ಭವಿಷ್ಯದ ದೃಷ್ಟಿಯಿಂದ ಯಾವುದೇ ವಿಷಯವನ್ನು ದೊಡ್ಡದು ಸಣ್ಣದು ಎಂಬ ಭೇದ ಮಾಡದೇ ತಕ್ಷಣ ಕಾರ್ಯೋನ್ಮುಖರಾಗುವುದು ಉತ್ತಮ. ಪೊಲೀಸ್ ವೃತ್ತಿಯಲ್ಲಿರುವವರಿಗೆ ಸಂಚಾರ ಕಂಡುಬರಲಿದೆ.

## ಪದಬಂಧ 5749

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ದರ್ಜಿ ಇಲ್ಲಿದ್ದಾನೆ (3)
5.ಹಲ್ಲುಗಳನ್ನು ತೊಳೆಯುವುದು (5)
6.ನಾಗರಿಕರು ಹಿಡಿದಿರುವ ಗುಂಜು ಉಲ್ಟಾ ಆಗಿದೆ (2)
8.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
9.ತಾರ ನುಡಿಸಿರುವ ತಂತಿ ವಾದ್ಯ (3)
11.ಉಲ್ಟಾ ಕಾಣುತ್ತಿರುವ ಕೊರಳು (2)
12.ಕೆಸರಲ್ಲಿರುವ ಮೆಟ್ಟು (2)
16.ವಾದವನ್ನು ಮಂಡಿಸುವ ಕ್ರಮ (5)
17.ಈತ ಹಳ್ಳಿಯವನು (3)

**ಮೇಲಿಂದ ಕೆಳಕ್ಕೆ**

1.ಬಹು ಕಾಲ ಬಾಳುವವನು (4)
2.ದೇಶದಿಂದ ಹೊರಗೆ ಹಾಕುವುದು (4)
3.ದಂಪತಿ ಹರಡುತ್ತಿರುವ ಗಾಳಿ ಸುದ್ದಿ (3)
4.ನಡುವೆ ಮಂತ್ರವಿದ್ದಾಗಿನ ಆಹ್ವಾನ! (4)
5.ಸಸ್ಯಗಳಿಂದ ತೆಗೆದ ಜಿಡ್ಡು (4)
7.ನಾಕದಲ್ಲಿ ಮೂಗು ಕಾಣುತ್ತಿದೆಯಲ್ಲಾ! (3)
8.ಹರನಿಗೆ ಸಲ್ಲಿಸಿರುವ ಮುಡಿಪು (3)
10.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
11.ವ್ಯಾಯಾಮವಿಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (4)
13.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
14.ವಾರದ ಕೊನೆಗೆ ತೋರಿದ ಡೌಲು (4)
15.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)



### 5748ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಮನಸಿಜ 3.ತಾರಾಪುಂಜ 5.ನಿಯತ್ತು 6.ಕ್ಷಿತಿಜ 8.ಮಾದರಿ 9.ಪತ್ತಲ 10.ಕಲಹ 12.ಬಸದಿ 14.ನವರಂಗ 15.ಕಸರತ್ತು

**ಮೇಲಿಂದ ಕೆಳಕ್ಕೆ:** 1.ಮನಸ್ಸಾಕ್ಷಿ 2.ಜನನಿ 3.ತಾಕತ್ತು 4.ಜರತಾರಿ 7.ಜಟಿಲ 8.ಮಾದಕ 9.ಪರಿಧಾನ 11.ಹಕೀಕತ್ತು 12.ಬಳಗ 13.ದಿನಾಂಕ

## ಸುಡೊಕು 6134

| | | | | | | | | |
|---|---|---|---|---|---|---|---|---|
| 3 | | 6 | | 8 | | 9 | | 1 |
| | | | | | | | 6 | |
| | 4 | | 9 | | | 3 | | 8 |
| 6 | | | | | | | | 9 |
| | 5 | | 7 | | 9 | | 8 | |
| 8 | | | | | | 6 | | |
| 9 | | | 2 | | | 7 | | 6 |
| | 6 | | | 9 | 7 | | 3 | |
| | | 7 | | | | 4 | | 5 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 6133 ಸುಡೊಕು

| | | | | | | | | |
|---|---|---|---|---|---|---|---|---|
| 4 | 5 | 6 | 9 | 7 | 1 | 8 | 3 | 2 |
| 1 | 9 | 2 | 6 | 8 | 3 | 5 | 7 | 4 |
| 8 | 7 | 3 | 4 | 2 | 5 | 9 | 6 | 1 |
| 7 | 2 | 1 | 3 | 4 | 9 | 6 | 5 | 8 |
| 3 | 8 | 5 | 1 | 6 | 2 | 4 | 9 | 7 |
| 6 | 4 | 9 | 7 | 5 | 8 | 2 | 1 | 3 |
| 2 | 3 | 8 | 5 | 1 | 6 | 7 | 4 | 9 |
| 9 | 6 | 4 | 8 | 3 | 7 | 1 | 2 | 5 |
| 5 | 1 | 7 | 2 | 9 | 4 | 3 | 8 | 6 |

## ಹಾಸನ ಜಿಲ್ಲೆಯಲ್ಲಿ ನಿಕ್ಕಲ್, ಕ್ರೋಮಿಯಂ ಗಣಿಗಾರಿಕೆ

# ವೇದಾಂತಕ್ಕೆ ಗಣಿ ಗುತ್ತಿಗೆ

ನವದೆಹಲಿ (ಪಿಟಿಐ): ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಸಚಿವಾಲಯದಿಂದ ನಡೆದ ಇ-ಟೆಂಡರ್‌ನಲ್ಲಿ ಕರ್ನಾಟಕ ಮತ್ತು ಬಿಹಾರದಲ್ಲಿ ಪ್ರಮುಖ ಖನಿಜ ನಿಕ್ಷೇಪದ ಗಣಿಗಾರಿಕೆಗೆ ಗುತ್ತಿಗೆ ಪಡೆಯಲಾಗಿದೆ ಎಂದು ವೇದಾಂತ ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ಕರ್ನಾಟಕದ ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಗೊಲ್ಲರಹಟ್ಟಿ ಮತ್ತು ಮಲ್ಲೇನಹಳ್ಳಿ ಬಳಿ ನಿಕ್ಕಲ್, ಕ್ರೋಮಿಯಂ ಮತ್ತು ಪ್ಲಾಟಿನಂ ಗ್ರೂಪ್‌ಗೆ (ಪಿಜಿಇ ಬ್ಲಾಕ್) ಸೇರಿದ ಲೋಹಗಳ ಗಣಿಗಾರಿಕೆಗೆ ಗುತ್ತಿಗೆ ಪಡೆಯಲಾಗಿದೆ. ಬಿಹಾರದಲ್ಲಿ ಗೆಂಜನಾ ನಿಕ್ಕಲ್, ಕ್ರೋಮಿಯಂ ಮತ್ತು ಪಿಜಿಇ ಬ್ಲಾಕ್‌ಗೆ ಗುತ್ತಿಗೆ ಸಿಕ್ಕಿದೆ ಎಂದು ಕಂಪನಿಯು ತಿಳಿಸಿದೆ.

ಪ್ಲಾಟಿನಂ ಗ್ರೂಪ್‌ನಲ್ಲಿ ಪ್ಲಾಟಿನಂ, ಪಲಾಡಿಯಂ, ರೋಡಿಯಂ, ರುದೇನಿಯಂ, ಆಸ್ಮಿಯಂ ಹಾಗೂ ಇರಿಡಿಯಂ ಅಂಶಗಳು ಸೇರಿವೆ. ಪ್ಲಾಟಿನಂ ಅತ್ಯಮೂಲ್ಯ ಲೋಹವಾಗಿದೆ. ಅತಿಹೆಚ್ಚು ಉಷ್ಣತೆ ತಡೆಯುವ ಲೋಹವೂ ಆಗಿದೆ. ಹಾಗಾಗಿ, ಹಲವು ಲೋಹಸಂಬಂಧಿ ಕೈಗಾರಿಕೆಗಳಲ್ಲಿ ಇದು ಹೆಚ್ಚು ಬಳಕೆಯಲ್ಲಿದೆ ಎಂದು ಭೂಗರ್ಭಶಾಸ್ತ್ರ ತಜ್ಞರು ಹೇಳುತ್ತಾರೆ.

ಖನಿಜ ನಿಕ್ಷೇಪಗಳ ಪರಿಶೋಧನೆಯು ಸ್ಥಳಾನ್ವೇಷಣೆ (ಜಿ4), ಪ್ರಾಥಮಿಕ ಪರಿಶೋಧನೆ (ಜಿ3), ಸಾಮಾನ್ಯ ಪರಿಶೋಧನೆ (ಜಿ2) ಹಾಗೂ ಪರಿಪೂರ್ಣ ಪರಿಶೋಧನೆ (ಜಿ1) ಹಂತಗಳಲ್ಲಿ ನಡೆಯುತ್ತದೆ ಎಂದು ಸಚಿವಾಲಯವು ತಿಳಿಸಿದೆ.

ಹಾಸನ ಜಿಲ್ಲೆಯಲ್ಲಿ ಖನಿಜಗಳ ಬಗ್ಗೆ ಜಿ4 ಹಂತದ ಸ್ಥಳಾನ್ವೇಷಣೆಗಾಗಿ ವೇದಾಂತ ಕಂಪನಿಗೆ ಗುತ್ತಿಗೆ ನೀಡಲಾಗಿದೆ ಎಂದು ಹೇಳಿದೆ.

ಸಚಿವಾಲಯದಿಂದ ನಡೆದ ಖನಿಜ ನಿಕ್ಷೇಪಗಳ ಎರಡನೇ ಸುತ್ತಿನ ಹರಾಜಿನಲ್ಲಿ ಒಂದು ನಿಕ್ಷೇಪ ಮತ್ತು ಮೂರನೇ ಸುತ್ತಿನಲ್ಲಿ ಮತ್ತೊಂದು ನಿಕ್ಷೇಪವನ್ನು ವೇದಾಂತ ಕಂಪನಿಯು ಪಡೆದಿದೆ.

### ಜಿ4 ಹಂತ ಎಂದರೇನು?

ಜಿ4 ಹಂತದಲ್ಲಿ ಗುರುತು ಪಡಿಸಿರುವ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಖನಿಜದ ಸಾಮರ್ಥ್ಯ ಅಥವಾ ಆರಂಭಿಕ ಹಂತದಲ್ಲಿರುವ ಖನಿಜ ಪ್ರಮಾಣದ ಅಸ್ತಿತ್ವವನ್ನು ಗುರುತಿಸಲು ತಳಮಟ್ಟದಲ್ಲಿ ಶೋಧನೆ ನಡೆಸಲಾಗುತ್ತದೆ.

ಗೊಲ್ಲರಹಟ್ಟಿ ಮತ್ತು ಮಲ್ಲೇನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವೇದಾಂತ ಕಂಪನಿಯು ಈ ಲೋಹಗಳ ಬಗ್ಗೆ ಸ್ಥಳಾನ್ವೇಷಣೆ ನಡೆಸಲಿದೆ ಎಂದು ಕೇಂದ್ರ ಗಣಿ ಮತ್ತು ಕಲ್ಲಿದ್ದಲು ಸಚಿವಾಲಯ ತಿಳಿಸಿದೆ.

# ಎಂ.ಎಫ್: ಕಮಿಷನ್ ಲೆಕ್ಕಾಚಾರ ಹೇಗೆ?

**ಹಣಕಾಸು ಸಾಕ್ಷರತೆ**

**ರಾಜೇಶ್ ಕುಮಾರ್ ಟಿ.ಆರ್.**

**ಮ್ಯೂಚುವಲ್** ಫಂಡ್ (ಎಂ.ಎಫ್) ಆಯ್ಕೆ ಮಾಡುವಾಗ ಪ್ರಮುಖವಾಗಿ ಪರಿಗಣಿಸಬೇಕಾದ ಅಂಶಗಳಲ್ಲಿ ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷಿಯೊ) ಪ್ರಮುಖವಾದುದು. ವೆಚ್ಚ ಅನುಪಾತ ಅಂದರೆ ಮ್ಯೂಚುವಲ್ ಫಂಡ್ ನಿರ್ವಹಣೆಗೆ ಪಡೆಯುವ ಕಮಿಷನ್.

ವೆಚ್ಚ ಅನುಪಾತವನ್ನು ಮ್ಯೂಚುವಲ್ ಫಂಡ್ ಕಂಪನಿಗಳು ಹೇಗೆ ಲೆಕ್ಕಾಚಾರ ಮಾಡುತ್ತವೆ. ವೆಚ್ಚ ಅನುಪಾತ ಎಷ್ಟಿದ್ದರೆ ಆ ಫಂಡ್ ಅನ್ನು ಹೂಡಿಕೆಗೆ ಪರಿಗಣಿಸಬಹುದು. ಡೈರೆಕ್ಟ್ ಮ್ಯೂಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ಜಾಸ್ತಿ ಇರುತ್ತದೆಯೇ? ರೆಗ್ಯುಲರ್ ಮ್ಯುಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ದುಬಾರಿಯೋ? ಬನ್ನಿ ಇದರ ಬಗ್ಗೆ ವಿವರವಾಗಿ ತಿಳಿಯೋಣ.

**ವೆಚ್ಚ ಅನುಪಾತ/ ಕಮಿಷನ್:** ಮ್ಯೂಚುವಲ್ ಫಂಡ್ ನಿರ್ವಹಣೆಗೆ ಮ್ಯೂಚುವಲ್ ಫಂಡ್ ಸಂಸ್ಥೆಯು ಅನೇಕ ವೆಚ್ಚಗಳನ್ನು ಮಾಡಬೇಕಾಗುತ್ತದೆ. ನೋಂದಣಿ ಶುಲ್ಕ, ನಿರ್ವಹಣಾ ಶುಲ್ಕ, ಏಜೆಂಟ್ ಶುಲ್ಕ, ಲೆಕ್ಕ ನಿರ್ವಹಣೆ ಶುಲ್ಕ, ಜಾಹಿರಾತು ಶುಲ್ಕ ಹೀಗೆ ಹತ್ತಾರು ಖರ್ಚುಗಳನ್ನು ಫಂಡ್ ಹೌಸ್ ಹೊರಬೇಕಾಗುತ್ತದೆ. ಈ ವೆಚ್ಚ ನಿಭಾಯಿಸಲು ಹೂಡಿಕೆದಾರರಿಂದ ಪಡೆಯುವ ವಾರ್ಷಿಕ ಶುಲ್ಕವೇ ವೆಚ್ಚ ಅನುಪಾತ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಪ್ರತಿ ಮಾದರಿಯ ಮ್ಯೂಚುವಲ್ ಫಂಡ್‌ಗೂ ಗರಿಷ್ಠ ವೆಚ್ಚದ ಮಿತಿಯನ್ನು ಗೊತ್ತುಪಡಿಸಿದೆ. ಇಂಡೆಕ್ಸ್ ಫಂಡ್‌ಗೆ ಶೇ 1.5, ಡೆಟ್ ಫಂಡ್‌ಗೆ ಶೇ 2.25 ಮತ್ತು ಈಕ್ವಿಟಿ ಫಂಡ್‌ಗೆ ಶೇ 2.5ರ ವರೆಗೆ ಶುಲ್ಕ ವಿಧಿಸಬಹುದು. ವೆಚ್ಚ ಅನುಪಾತ ಎಷ್ಟು ಕಡಿಮೆಯೋ ಹೂಡಿಕೆದಾರನಿಗೆ ಅಷ್ಟರ ಮಟ್ಟಿಗೆ ಲಾಭವಾಗುತ್ತದೆ.

ಉದಾಹರಣೆಗೆ ಮ್ಯೂಚುವಲ್ ಫಂಡ್ ಕಂಪನಿಯು ಶೇ 2.50ರಷ್ಟು ಎಕ್ಸ್‌ಪೆನ್ಸ್ ರೇಷಿಯೊ (ಕಮಿಷನ್) ಪಡೆಯುತ್ತದೆ ಎಂದುಕೊಳ್ಳೋಣ. ಅದರಂತೆ ನೀವು ಹೂಡಿಕೆ ಮಾಡುವ ಪ್ರತಿ ₹1 ಲಕ್ಷಕ್ಕೆ ಮ್ಯೂಚುವಲ್ ಫಂಡ್ ಕಂಪನಿಯು ನಿರ್ವಹಣೆ ಶುಲ್ಕವಾಗಿ ₹2,500 ಪಡೆಯುತ್ತದೆ. ಮ್ಯೂಚುವಲ್ ಫಂಡ್ ಕಂಪನಿಗಳು ತ್ರೈಮಾಸಿಕ, ಅರೆ ವಾರ್ಷಿಕ ಅಥವಾ ವಾರ್ಷಿಕ ಲೆಕ್ಕಾಚಾರದಲ್ಲಿ ನಿರ್ವಹಣೆ ಶುಲ್ಕ ಪಡೆಯುವುದಿಲ್ಲ. ಪ್ರತಿದಿನ ಶುಲ್ಕ ತೆಗೆದುಕೊಳ್ಳುತ್ತವೆ.

₹2,500 ನಿರ್ವಹಣೆ ಶುಲ್ಕವನ್ನು ₹365ರೊಂದಿಗೆ ಭಾಗಿಸಿದರೆ (₹2,500/365 = ₹6.85) ಪ್ರತಿದಿನ ₹6.85 ಶುಲ್ಕವಾಗಿ ಪಡೆಯುತ್ತವೆ. ಹೂಡಿಕೆ ಮೇಲೆ ಗಳಿಕೆ ಬರಲಿ ಬಿಡಲಿ ಎಷ್ಟು ದಿನ ಹೂಡಿಕೆ ಮಾಡಿರುತ್ತಿರೋ ಅಲ್ಲಿಯತನಕ ಪ್ರತಿದಿನ ₹6.85 ಶುಲ್ಕವನ್ನು ಮ್ಯೂಚುವಲ್ ಫಂಡ್ ಕಂಪನಿ ಮುರಿದುಕೊಳ್ಳುತ್ತದೆ. ಹಾಗಾಗಿ, ಮ್ಯೂಚುವಲ್ ಫಂಡ್ ಆಯ್ಕೆ ಮಾಡಿಕೊಳ್ಳುವಾಗ ನಿರ್ದಿಷ್ಟ ಫಂಡ್ ಎಷ್ಟರ ಮಟ್ಟಿಗೆ ಲಾಭಾಂಶ ತಂದುಕೊಟ್ಟಿದೆ ಎನ್ನುವ ಅಂಶ ಪರಿಗಣಿಸುವ ಜೊತೆಗೆ, ನಿರ್ವಹಣಾ ಶುಲ್ಕ ಎಷ್ಟು ಪಡೆದುಕೊಳ್ಳುತ್ತಿದೆ ಎನ್ನುವುದನ್ನೂ ತಿಳಿದುಕೊಳ್ಳಬೇಕು. ಯಾವ ಫಂಡ್ ಉತ್ತಮವಾಗಿದ್ದು, ನಿರ್ವಹಣೆ ಶುಲ್ಕ ಕಡಿಮೆಯಿದೆ ಅದನ್ನು ಹೂಡಿಕೆಗೆ ಪರಿಗಣಿಸಬೇಕಿದೆ.

**ಮ್ಯೂಚುವಲ್ ಫಂಡ್ ವೆಚ್ಚ ಅನುಪಾತದ ಲೆಕ್ಕಾಚಾರ**

| ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳು | ವೆಚ್ಚ ಅನುಪಾತ |
|---|---|
| ಐಸಿಐಸಿಐ ಪ್ರುಡೆನ್ಶಿಯಲ್ ಬ್ಲೂಚಿಪ್ ಫಂಡ್ ಡೈರೆಕ್ಟ್ ಗ್ರೋತ್ | ಶೇ 0.9 |
| ನಿಪ್ಪಾನ್ ಇಂಡಿಯಾ ಲಾರ್ಜ್ ಕ್ಯಾಪ್ ಫಂಡ್ ಡೈರೆಕ್ಟ್ ಗ್ರೋತ್ | ಶೇ 0.74 |
| ಕೆನರಾ ರೊಬೆಕೊ ಬ್ಲೂಚಿಪ್ ಈಕ್ವಿಟಿ ಫಂಡ್ ಡೈರೆಕ್ಟ್ ಗ್ರೋತ್ | ಶೇ 0.45 |

(ಗಮನಿಸಿ: ಇದು ಹೂಡಿಕೆಗೆ ಸಲಹೆಯಲ್ಲ. ಉದಾಹರಣೆಗಾಗಿ ಕಂಪನಿಗಳ ಹೆಸರು ಬಳಸಲಾಗಿದೆ)

ಈ ಪಟ್ಟಿಯಲ್ಲಿ ಇರುವಂತೆ ಮೂರು ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಒಂದೊಂದು ರೀತಿಯಿದೆ. ಹಾಗಾಗಿ, ಮ್ಯೂಚುಯಲ್ ಫಂಡ್ ಆಯ್ಕೆ ಮಾಡಿಕೊಳ್ಳುವಾಗ ನಿರ್ದಿಷ್ಟ ಮ್ಯೂಚುಯಲ್ ಫಂಡ್ ಎಷ್ಟು ಲಾಭ ಕೊಟ್ಟಿದೆ ಎನ್ನುವುದರ ಜೊತೆಗೆ ಎಷ್ಟು ವೆಚ್ಚ ಅನುಪಾತ ನಿಗದಿಪಡಿಸಿದೆ ಎಂಬ ಬಗ್ಗೆಯೂ ಗಮನಹರಿಸಬೇಕಿದೆ.

**ಡೈರೆಕ್ಟ್‌ನಲ್ಲಿ ವೆಚ್ಚ ಅನುಪಾತ ಕಡಿಮೆ, ರೆಗ್ಯುಲರ್‌ನಲ್ಲಿ ಜಾಸ್ತಿ:**

ಮ್ಯೂಚುವಲ್ ಫಂಡ್ ಹೂಡಿಕೆಗೆ ಎರಡು ಮಾರ್ಗಗಳಿವೆ. ಒಂದನೆಯದು ಡೈರೆಕ್ಟ್ ಮತ್ತೊಂದು ರೆಗ್ಯುಲರ್ ಮ್ಯೂಚುವಲ್ ಫಂಡ್ ಮಾರ್ಗ. ನೇರವಾಗಿ ನಾವೇ ಮ್ಯೂಚುವಲ್ ಫಂಡ್ ವೆಬ್‌ಸೈಟ್ ಅಥವಾ ಇನ್ವೆಸ್ಟ್‌ಮೆಂಟ್ ಆ್ಯಪ್‌ಗಳಿಗೆ ಹೋಗಿ ಮ್ಯೂಚುವಲ್ ಫಂಡ್‌ಗಳನ್ನು ಖರೀದಿಸೋದು ಡೈರೆಕ್ಟ್ ಮ್ಯೂಚುವಲ್ ಫಂಡ್ ಆಗುತ್ತದೆ. ಮ್ಯೂಚುವಲ್ ಫಂಡ್ ವಿತರಕರು, ಏಜೆಂಟ್ ಮತ್ತಿತರ ಮಧ್ಯವರ್ತಿಗಳ ಸಹಾಯ ಪಡೆದು ಹೂಡಿಕೆ ಮಾಡಿದರೆ ಅದು ರೆಗ್ಯುಲರ್ ಮ್ಯೂಚುವಲ್ ಫಂಡ್ ಆಗುತ್ತದೆ.

ಡೈರೆಕ್ಟ್ ಮ್ಯೂಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ಕಡಿಮೆ. ಆದರೆ, ರೆಗ್ಯುಲರ್ ಮ್ಯೂಚುವಲ್ ಫಂಡ್‌ನಲ್ಲಿ ವೆಚ್ಚ ಅನುಪಾತ ಜಾಸ್ತಿ.

**ಉದಾಹರಣೆ:** ಐಸಿಐಸಿಐ ಪ್ರುಡೆನ್ಶಿಯಲ್ ಬ್ಲೂಚಿಪ್ ಫಂಡ್ ಡೈರೆಕ್ಟ್ ಗ್ರೋತ್ ಪ್ಲಾನ್‌ನ ವೆಚ್ಚ ಅನುಪಾತ ಶೇ 0.9ರಷ್ಟಿದ್ದರೆ, ಐಸಿಐಸಿಐ ಪ್ರುಡೆನ್ಶಿಯಲ್ ಬ್ಲೂಚಿಪ್ ಫಂಡ್ ರೆಗ್ಯುಲರ್ ಪ್ಲಾನ್‌ನ ವೆಚ್ಚ ಅನುಪಾತ ಶೇ 1.46 ರಷ್ಟಿದೆ. ಹಾಗಾಗಿ. ಡೈರೆಕ್ಟ್ ಪ್ಲಾನ್ ಮೂಲಕ ಹೂಡಿಕೆ ಮಾಡಿದರೆ ಲಾಭ ಜಾಸ್ತಿ ಸಿಗಲಿದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

## ಗಳಿಕೆ ಕಂಡ ಸೂಚ್ಯಂಕಗಳು





ಸತತ ಏಳನೇ ವಾರವೂ ಷೇರುಪೇಟೆ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. ಜುಲೈ 19ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಅಲ್ಪ ಮೊತ್ತದ ಹೆಚ್ಚಳ ಕಂಡಿವೆ. 80,604 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.11ರಷ್ಟು ಗಳಿಸಿಕೊಂಡಿದೆ. 24,530 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.12ರಷ್ಟು ಜಿಗಿದಿದೆ.

ಅಮೆರಿಕ, ಚೀನಾ ವ್ಯಾಪಾರ ಬಿಕ್ಕಟ್ಟು, ಮೈಕ್ರೊಸಾಫ್ಟ್‌ನ ಜಾಗತಿಕ ತಾಂತ್ರಿಕ ಅಡಚಣೆ, ಕೇಂದ್ರ ಬಜೆಟ್ ಘೋಷಣೆಗಳ ಬಗ್ಗೆ ಕಾತುರ, ಕಂಪನಿಗಳ ತ್ರೈಮಾಸಿಕ ಫಲಿತಾಂಶ ಸೇರಿ ಹಲವು ಅಂಶಗಳು ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಶೇ 5.36, ಲೋಹ ಶೇ 4.65, ಎನರ್ಜಿ ಶೇ 1.83, ಅನಿಲ ಮತ್ತು ತೈಲ ಶೇ 0.98, ಫಾರ್ಮಾ ಶೇ 0.91 ಮತ್ತು ನಿಫ್ಟಿ ವಾಹನ ವಲಯ ಶೇ 0.72ರಷ್ಟು ಕುಸಿದಿವೆ. ನಿಫ್ಟಿ ಮಾಹಿತಿ ತಂತ್ರಜ್ಞಾನ ಶೇ 2.31, ಎಫ್‌ಎಂಸಿಜಿ ಶೇ 2.28, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 1.38 ಮತ್ತು ರಿಯಲ್ ಎಸ್ಟೇಟ್ ಶೇ 0.27ರಷ್ಟು ಗಳಿಸಿಕೊಂಡಿವೆ.

**ಗಳಿಕೆ–ಇಳಿಕೆ:** ನಿಫ್ಟಿಯಲ್ಲಿ ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಕಂಪನಿ ಶೇ 5.7, ಇನ್ಫೊಸಿಸ್ ಶೇ 4.72, ಒಎನ್‌ಜಿಸಿ ಶೇ 4.14, ಹಿಂದುಸ್ತಾನ್ ಯೂನಿಲಿವರ್ ಶೇ 3.98, ಎಸ್‌ಬಿಐ ಶೇ 3.44, ಐಟಿಸಿ ಶೇ 3.33, ಟಾಟಾ ಕನ್ಸ್ಯೂಮರ್ ಶೇ 3.1, ಟಿಸಿಎಸ್ ಶೇ 2.82, ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 2.18 ಮತ್ತು ಏರ್‌ಟೆಲ್ ಶೇ 2.14ರಷ್ಟು ಗಳಿಸಿಕೊಂಡಿವೆ.

ಟಾಟಾ ಸ್ಟೀಲ್ ಶೇ 6.49, ಜೆಎಸ್‌ಡಬ್ಲ್ಯು ಶೇ 4.8, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ 4.22, ಎನ್‌ಟಿಪಿಸಿ ಶೇ 3.38, ಅಲ್ಟ್ರಾ ಟೆಕ್ ಸಿಮೆಂಟ್ ಶೇ 3.28, ಪವರ್‌ಗ್ರಿಡ್ ಶೇ 3.19, ಗ್ರಾಸಿಮ್ ಇಂಡಸ್ಟ್ರೀಸ್ ಶೇ 3.15, ರಿಲಯನ್ಸ್ ಇಂಡಸ್ಟ್ರೀಸ್ ಶೇ 2.63, ಟಾಟಾ ಮೋಟರ್ಸ್ ಶೇ 2.63ರಷ್ಟು ಕುಸಿದಿವೆ.

**ಮುನ್ನೋಟ:** ಈ ವಾರ ಫೆಡರಲ್ ಬ್ಯಾಂಕ್, ಕರ್ಣಾಟಕ ಬ್ಯಾಂಕ್, ಹಿಂದುಸ್ತಾನ್ ಯೂನಿಲಿವರ್, ಐಸಿಐಸಿಐ ಸೆಕ್ಯುರಿಟೀಸ್, ಐಡಿಬಿಐ ಬ್ಯಾಂಕ್, ಬಜಾಜ್ ಫೈನಾನ್ಸ್, ಬಜಾಜ್ ಫಿನ್‌ಸರ್ವ್, ಎಲ್ ಆ್ಯಂಡ್ ಟಿ, ಎಕ್ಸಿಸ್ ಬ್ಯಾಂಕ್, ಎಸ್‌ಬಿಐ ಲೈಫ್ ಇನ್ಶೂರೆನ್ಸ್, ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶೂರೆನ್ಸ್, ಜೆಕೆ ಪೇಪರ್, ನೆಸ್ಲೆ ಇಂಡಿಯಾ, ಕೆನರಾ ಬ್ಯಾಂಕ್, ವಿ ಗಾರ್ಡ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಸಾಧನೆ ವರದಿ ಪ್ರಕಟಿಸಲಿವೆ.

ಜಾಗತಿಕ ವಿದ್ಯಮಾನಗಳು, ಬಜೆಟ್ ಸೇರಿ ಇನ್ನಿತರ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

# ಲೆಕ್ಕ ಪರಿಶೋಧನೆಗೆ ಕೃತಕ ಬುದ್ಧಿಮತ್ತೆ ಬಳಕೆ: ಸಿಎಜಿ

ಗಿರೀಶ್ ಚಂದ್ರ ಮುರ್ಮು

ನವದೆಹಲಿ (ಪಿಟಿಐ): ‘ಸರ್ಕಾರದ ಆದಾಯ ಮತ್ತು ವೆಚ್ಚಗಳ ಲೆಕ್ಕ ಪರಿಶೋಧನೆಯ ಗುಣಮಟ್ಟದ ಸುಧಾರಣೆಗೆ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುವುದು’ ಎಂದು ಮಹಾ ಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲ (ಸಿಎಜಿ) ಗಿರೀಶ್ ಚಂದ್ರ ಮುರ್ಮು ತಿಳಿಸಿದ್ದಾರೆ.

‘ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಹೆಚ್ಚು ಪ್ರಚಲಿತದಲ್ಲಿದೆ. ಸಾರ್ವಜನಿಕ ವೆಚ್ಚದ ಗುಣಮಟ್ಟ ಹೆಚ್ಚಿಸಲು ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯು ಈ ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳಲು ಸಿದ್ಧವಿದೆ’ ಎಂದು ಹೇಳಿದ್ದಾರೆ.

‘ತಂತ್ರಜ್ಞಾನ ಅಭಿವೃದ್ಧಿಯಾದಂತೆ ನಾವು ಕೂಡ ಅದಕ್ಕೆ ತಕ್ಕಹಾಗೆ ಅಭಿವೃದ್ಧಿ ಹೊಂದಬೇಕು. ಸವಾಲುಗಳನ್ನು ಎದುರಿಸಿ ಮೇಲುಗೈ ಸಾಧಿಸಬೇಕು. ಜಾಗತಿಕ ಮಟ್ಟದ ತಂತ್ರಜ್ಞಾನದ ಅನುಭವ ಪಡೆಯುವ ಜೊತೆಗೆ, ಅದರ ಬಳಕೆಯ ಅಭ್ಯಾಸವನ್ನು ಮಾಡಿಕೊಳ್ಳಬೇಕಿದೆ’ ಎಂದು ತಿಳಿಸಿದ್ದಾರೆ.

ಲೆಕ್ಕ ಪರಿಶೋಧನೆಯಲ್ಲಿ ಎ.ಐ ತಂತ್ರಜ್ಞಾನ ಸೇರಿ ಹೊಸ ತಂತ್ರಜ್ಞಾನ ಗಳ ಬಳಕೆಗೆ ಒತ್ತು ನೀಡಲಾಗಿದೆ. ಈ ನಿಟ್ಟಿನಲ್ಲಿ ಇತ್ತೀಚೆಗೆ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಚಿರಸ್ಮರಣೆ

ಶ್ರೀಮತಿ ನಾಗಮ್ಮನವರು
(ದಿವಂಗತ ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿರವರ ಧರ್ಮಪತ್ನಿ)
ನಿಧನ: 22–07–2010
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ
ಸೊಸೆ: ಕೆ.ಜೆ.ಯಶೋದಾ
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| ಬೆಂಗಳೂರು | |
|---|---|
| 100ಕ್ಕೆ | ₹570 |
| 12 ಕ್ಕೆ | ₹75 |
| ಮೈಸೂರು | |
| 100ಕ್ಕೆ | ₹573 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹246-440 |
| ದ್ವಿತಳಿ (ಬಿ.ವಿ) | ₹236-609 |

## ಎಫ್‌ಪಿಐ: ₹30,722 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಜುಲೈ 19ರ ವರೆಗೆ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹30,772 ಕೋಟಿ ಹೂಡಿಕೆ ಮಾಡಿದ್ದಾರೆ.

ಸರ್ಕಾರದ ಆರ್ಥಿಕ ನೀತಿಗಳ ಸುಧಾರಣೆ, ಸುಸ್ಥಿರ ಆರ್ಥಿಕ ಬೆಳವಣಿಗೆ ಮತ್ತು ಷೇರುಪೇಟೆಯ ಉತ್ತಮ ಗಳಿಕೆಯಿಂದ ಒಳಹರಿವು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಇದೇ ಅವಧಿಯಲ್ಲಿ ಸರ್ಕಾರದ ಸಾಲ ಪತ್ರದಲ್ಲಿ ₹13,573 ಕೋಟಿ ಹೂಡಿಕೆ ಮಾಡಿದ್ದಾರೆ. ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ ಸಾಲ ಪತ್ರದ ಹೂಡಿಕೆ ಮೊತ್ತವು ₹82,197 ಕೋಟಿ ಆಗಿದೆ.

ಜೂನ್ ತಿಂಗಳಲ್ಲಿ ಒಟ್ಟು ₹26,565 ಕೋಟಿ ಬಂಡವಾಳ ಹೂಡಿಕೆಯಾಗಿತ್ತು.

‘ಅಮೆರಿಕದ ಡಾಲರ್ ಮತ್ತು ಬಾಂಡ್ ಮೌಲ್ಯದಲ್ಲಿ ಇಳಿಕೆಯಾಗಿದೆ. ಹಾಗಾಗಿ, ದೇಶೀಯ ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆ ಏರಿಕೆಯಾಗಿದೆ’ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

# ಕ್ಷಮೆ ಕೋರಿದ ಫೋನ್‌ಪೇ ಸಿಇಒ

## ಕನ್ನಡಿಗರಿಗೆ ಉದ್ಯೋಗ ನೀತಿ ಖಂಡಿಸಿದ್ದ ಸಮೀರ್ ನಿಗಮ್

ಸಮೀರ್ ನಿಗಮ್

ನವದೆಹಲಿ (ಪಿಟಿಐ): ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ಸಂಬಂಧ ರಾಜ್ಯ ಸರ್ಕಾರ ರೂಪಿಸಿದ್ದ ನೀತಿಯನ್ನು ಖಂಡಿಸಿದ್ದ ಫೋನ್‌ಪೇ ಸಿಇಒ ಮತ್ತು ಸಂಸ್ಥಾಪಕ ಸಮೀರ್ ನಿಗಮ್ ಭಾನುವಾರ, ಬೇಷರತ್ ಆಗಿ ಕ್ಷಮೆಯಾಚಿಸಿದ್ದಾರೆ.

ಕಂಪನಿಗಳ ‘ಸಿ’ ಮತ್ತು ‘ಡಿ’ ದರ್ಜೆಯ ಹುದ್ದೆಗಳಿಗೆ ಕನ್ನಡಿಗರನ್ನು ನೇಮಕ ಮಾಡಿಕೊಳ್ಳುವ ಸಂಬಂಧ ಸರ್ಕಾರವು ಮಸೂದೆ ಮಂಡಿಸಲು ನಿರ್ಧರಿಸಿತ್ತು. ಖಾಸಗಿ ವಲಯದಿಂದ ವ್ಯಾಪಕ ವಿರೋಧ ವ್ಯಕ್ತವಾದ್ದರಿಂದ ತಾತ್ಕಾಲಿಕವಾಗಿ ತಡೆ ಹಿಡಿದಿದೆ.

ಮಸೂದೆ ಬಗ್ಗೆ ಪ್ರತಿಕ್ರಿಯಿಸಿದ್ದ ನಿಗಮ್, ‘ಸರ್ಕಾರದ ಈ ನಿರ್ಧಾರವು ನಾಚಿಕೆಗೇಡಿನ ಸಂಗತಿಯಾಗಿದೆ’ ಎಂದು ಪ್ರತಿಕ್ರಿಯಿಸಿದ್ದರು. ಇದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ಕನ್ನಡಿಗರು ಆಕ್ರೋಶ ವ್ಯಕ್ತಪಡಿಸಿದ್ದರು. ಫೋನ್ ಪೇ ಬದಲಿಗೆ ಬೇರೆ ಯುಪಿಐ ಆ್ಯಪ್ ಬಳಸುವಂತೆ ಅಭಿಯಾನ ಆರಂಭಿಸಿದ್ದರು. ‘ಬಾಯ್ಕಾಟ್ ಫೋನ್‌ಪೇ’ ಅಭಿಯಾನವು ತೀವ್ರಗೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡಿರುವ ಸಿಇಒ ನಿಗಮ್ ಕನ್ನಡಿಗರ ಕ್ಷಮೆ ಕೋರಿದ್ದಾರೆ.

‘ಫೋನ್‌ಪೇ ಬೆಂಗಳೂರಿನಲ್ಲಿ ಆರಂಭಗೊಂಡಿತು. ಹೆಚ್ಚಿನ ಸಂಖ್ಯೆಯ ಬಳಕೆದಾರರನ್ನು ಹೊಂದಿದೆ.

ಬೆಂಗಳೂರು ವಿಶ್ವದರ್ಜೆಯ ತಂತ್ರಜ್ಞಾನ ಮತ್ತು ವೈವಿಧ್ಯತೆಗೆ ಹೆಸರುವಾಸಿಯಾಗಿರುವ ನಗರವಾಗಿದೆ. ಇಲ್ಲಿ ಫೋನ್‌ಪೇ ತನ್ನ ಬೇರುಗಳನ್ನು ಗಟ್ಟಿಯಾಗಿ ಹೊಂದಿರುವುದು ಹೆಮ್ಮೆಯ ವಿಷಯ’ ಎಂದು ಹೇಳಿದ್ದಾರೆ.

‘ಕನ್ನಡಿಗರಿಗೆ ಉದ್ಯೋಗ ನೀಡುವ ಸಂಬಂಧ ಇತ್ತೀಚೆಗೆ ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಓದಿದೆ. ಇದಕ್ಕೆ ಅನುಗುಣವಾಗಿ ಪ್ರತಿಕ್ರಿಯೆ ನೀಡಿದ್ದೇನೆ. ಕರ್ನಾಟಕ ಮತ್ತು ಕನ್ನಡಿಗರ ಭಾವನೆಗಳಿಗೆ ನೋವುಂಟು ಮಾಡುವ ಯಾವುದೇ ಉದ್ದೇಶ ಹೊಂದಿಲ್ಲ’ ಎಂದು ಹೇಳಿದ್ದಾರೆ.

‘ನನಗೆ ಕನ್ನಡ ಸೇರಿ ದೇಶದ ಎಲ್ಲಾ ಭಾರತೀಯ ಭಾಷೆಗಳ ಬಗ್ಗೆ ಅತೀವ ಗೌರವವಿದೆ. ಭಾಷಾ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಶ್ರೀಮಂತಿಕೆ, ಪರಂಪರೆಯು ದೇಶದ ಆಸ್ತಿಯಾಗಿದೆ. ಇದಕ್ಕೆ ಎಲ್ಲಾ ಭಾರತೀಯರು ಹೆಮ್ಮೆಪಡಬೇಕಿದೆ’ ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ಆರಂಭಗೊಂಡ ಫೋನ್‌ಪೇ ಕಂಪನಿಯ ಬೇರುಗಳು ದೇಶದಾದ್ಯಂತ ವಿಸ್ತರಿಸಿವೆ. 55 ಕೋಟಿಗೂ ಹೆಚ್ಚು ಬಳಕೆದಾರರ ಸುರಕ್ಷಿತ ಡಿಜಿಟಲ್ ಪಾವತಿಗೆ ನೆರವಾಗಿದೆ ಎಂದು ಹೇಳಿದ್ದಾರೆ.

‘ಬೆಂಗಳೂರು ಸೇರಿ ಕರ್ನಾಟಕದಾದ್ಯಂತ ಕನ್ನಡಿಗರಿಗೆ ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸಲು ನಾನು ಸಹಾಯ ಮಾಡಲು ಸಿದ್ಧ. ಸುಸ್ಥಿರವಾದ ಉದ್ಯೋಗದ ದಾರಿಯನ್ನು ಸೃಷ್ಟಿಸಬೇಕಿದೆ. ಇದಕ್ಕಾಗಿ ಎಲ್ಲರೂ ಒಟ್ಟಾಗಿ ಕೆಲಸ ನಿರ್ವಹಿಸಬೇಕಿದೆ’ ಎಂದಿದ್ದಾರೆ.

**ಬೆಂಗಳೂರು ಮುಂಚೂಣಿ:** ಫೋನ್‌ಪೇ ಮೂಲಕ ಅತಿಹೆಚ್ಚು ವಹಿವಾಟು ಮತ್ತು ಬಳಕೆದಾರರನ್ನು ಹೊಂದಿರುವ ದೇಶದ ಪ್ರಮುಖ 10 ಜಿಲ್ಲೆಗಳ ಪೈಕಿ ಬೆಂಗಳೂರು ನಗರ ಮುಂಚೂಣಿಯಲ್ಲಿದೆ.

## ವಿಂಡೋಸ್ ದೋಷ: 85 ಲಕ್ಷ ಸಾಧನಗಳ ಕಾರ್ಯಕ್ಕೆ ಅಡ್ಡಿ

ನವದೆಹಲಿ (ಪಿಟಿಐ): ವಿಂಡೋಸ್‌ನಲ್ಲಿ ಕಾಣಿಸಿಕೊಂಡಿದ್ದ ತಾಂತ್ರಿಕ ಸಮಸ್ಯೆಯನ್ನು ಬಗೆಹರಿಸಲು ನೂರಕ್ಕೂ ಹೆಚ್ಚು ಎಂಜಿನಿಯರ್‌ಗಳು ಮತ್ತು ಪರಿಣತರನ್ನು ನಿಯೋಜಿಸಲಾಗಿತ್ತು ಎಂದು ಅಮೆರಿಕದ ಟೆಕ್ ಕಂಪನಿ ಮೈಕ್ರೊಸಾಫ್ಟ್ ಹೇಳಿದೆ.

ಕ್ರೌಡ್‌ಸ್ಟ್ರೈಕ್ ಕಂಪನಿಯು ವಿಂಡೋಸ್‌ನಲ್ಲಿ ಫಾಲ್ಕನ್ ಸೆನ್ಸಾರ್ ತಂತ್ರಾಂಶವನ್ನು ಅಪ್‌ಡೇಟ್ ಮಾಡುವಾಗ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಇದರಿಂದ ವಿಶ್ವದಾದ್ಯಂತ 85 ಲಕ್ಷ ಎಲೆಕ್ಟ್ರಾನಿಕ್ ಸಾಧನಗಳ ಕಾರ್ಯ ನಿರ್ವಹಣೆಗೆ ಅಡ್ಡಿಯಾಗಿತ್ತು.

ಸಮಸ್ಯೆ ಪರಿಹರಿಸಿ ಯಥಾಸ್ಥಿತಿಗೆ ತರುವ ಬಗ್ಗೆ ಗ್ರಾಹಕರ ಜೊತೆಗೆ ನೇರವಾಗಿ ಸಂಪರ್ಕ ಬೆಸೆಯಲು ಪರಿಣತರನ್ನು ನಿಯೋಜಿಸಲಾಗಿತ್ತು ಎಂದು ಮೈಕ್ರೊಸಾಫ್ಟ್ ತನ್ನ ಬ್ಲಾಗ್ ಬರಹದಲ್ಲಿ ತಿಳಿಸಿದೆ.

ತಾಂತ್ರಿಕ ದೋಷವು ಭಾರತದ ವಿಮಾನಯಾನ ಸೇವೆ ಸೇರಿ ವಿಶ್ವದ ಹಲವು ವಲಯಗಳ ಸೇವೆಯಲ್ಲಿ ವ್ಯತ್ಯಯಕ್ಕೆ ಕಾರಣವಾಗಿತ್ತು.

ಗೂಗಲ್ ಕ್ಲೌಡ್ ಪ್ಲಾಟ್‌ಫಾರ್ಮ್ (ಜಿಪಿಸಿ), ಅಮೆಜಾನ್ ವೆಬ್ ಸರ್ವಿಸ್ (ಎಡಬ್ಲ್ಯುಎಸ್) ಸೇರಿ ಕ್ಲೌಡ್ ಸೇವಾ ಪೂರೈಕೆದಾರರ ಸಹಭಾಗಿತ್ವದ ಮೂಲಕ ಬಳಕೆದಾರರಿಗೆ ಸಮಸ್ಯೆ ಬಗ್ಗೆ ಅರಿವು ಮೂಡಿಸಲಾಯಿತು ಎಂದು ಹೇಳಿದೆ.

**ಟೊಮೆಟೊ** ಹಿಮಾಚಲ ಪ್ರದೇಶದ ಕುಲ್ಲು ಜಿಲ್ಲೆಯ ಭುಂಟರ್ ತರಕಾರಿ ಮಾರುಕಟ್ಟೆಯಲ್ಲಿ ಕಾರ್ಮಿಕರು ಟೊಮೆಟೊವನ್ನು ವಿವಿಧೆಡೆಗೆ ರವಾನಿಸಲು ಕ್ರೇಟ್‌ಗಳಲ್ಲಿ ಭಾನುವಾರ ತುಂಬಿದರು. ಈ ರಾಜ್ಯದಿಂದ ದೆಹಲಿಗೆ ಅತಿಹೆಚ್ಚು ಪ್ರಮಾಣದಲ್ಲಿ ಟೊಮೆಟೊ ಪೂರೈಕೆಯಾಗಲಿದೆ –ಪಿಟಿಐ ಚಿತ್ರ

## ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರ ಷೇರು ಸೂಚ್ಯಂಕಗಳ ಏರಿಕೆಯಿಂದಾಗಿ ಪ್ರಮುಖ 10 ಕಂಪನಿಗಳ ಪೈಕಿ 8 ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹2.10 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಎಂ–ಕ್ಯಾಪ್‌ಗೆ ₹42,639 ಕೋಟಿ ಸೇರ್ಪಡೆಯಾಗಿದ್ದು, ಕಂಪನಿಯ ಒಟ್ಟು ಎಂ–ಕ್ಯಾಪ್ ₹15.56 ಲಕ್ಷ ಕೋಟಿಗೆ ತಲುಪಿದೆ.

ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ₹36,748 ಕೋಟಿ, ಇನ್ಫೊಸಿಸ್ ₹33,569 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹26,372 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹24,494 ಕೋಟಿ, ಐಟಿಸಿ ₹19,420 ಕೋಟಿ, ಭಾರ್ತಿ ಏರ್‌ಟೆಲ್ ₹16,223 ಕೋಟಿ ಮತ್ತು ಐಸಿಐಸಿಐ ಬ್ಯಾಂಕ್ ಮಾರುಕಟ್ಟೆ ಮೌಲ್ಯಕ್ಕೆ ₹10,863 ಕೋಟಿ ಸೇರ್ಪಡೆಯಾಗಿದೆ. ರಿಲಯನ್ಸ್ ಇಂಡಸ್ಟ್ರೀಸ್ ₹56,799 ಕೋಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಎಂ–ಕ್ಯಾಪ್ ₹13,124 ಕೋಟಿ ಇಳಿಕೆಯಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre

IKONTEL HIRING Support Executive Voice process. Good communication, computer skills. Salary+Incentive Call: 7411800015/ 7008230175/ 9845914011 Bangalore.

General

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000-17,000. 8951315839, 9141634619

ಯುವಕ ಯುವತಿಯರಿಗೆ ಹೆಲ್ಪರ್ ಕೆಲಸ ಖಾಲಿಇದೆ. ತಿಂಗಳಿಗೆ ವೇತನ 18000 ರಿಂದ 20000/- ವರೆಗೆ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಬೆಂಗಳೂರು. 9019626612

Multiple Vacancy

REQUIRED EXPERIENCED Telecaller & Field executive For Bank Loan collection Salary + Incentive. 9916276701, 7899040499

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

ಪ್ರವಾಸ

Travel

ಸುಸಜ್ಜಿತ ಪ್ರವಾಸಗಳು: 13.09.2024 06.10.2024 29.10.2024 ರಿಂದ 5/7/11 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ 6 ದಿನಗಳ ದುಬೈ, ಅಬುದಾಬಿ ಶಾರ್ಜಾ/ಬಾಲಿ. 14.10.2024 19.12.2024 ರಿಂದ 10 ದಿನಗಳ ಕಾಂಬೋಡಿಯ ವಿಯಟ್ನಾಂ. 05.10.2024 30.10.2024 ರಿಂದ 11 ದಿನಗಳ ಅಯೋಧ್ಯಾ,ನೇಪಾಳ ಮುಕ್ತಿನಾಥ ಕಾಶಿ. 09.09.2024 18.09.2024 26.09.2024 ರಿಂದ 5/8 ದಿನಗಳ ಕಾಶಿ,ಅಯೋಧ್ಯಾ,ಗಯಾ. 13.09.2024 14.10.2024 ರಿಂದ 15 ದಿನಗಳ ಚಾರ್‌ಧಾಮ್ 17.10.2024 01.11.2024 ರಿಂದ 11 ದಿನಗಳ ಪುರಿ ಕೋಲ್ಕತಾ ಡಾರ್ಜಲಿಂಗ್ ಗ್ಯಾಂಗ್‌ಟಾಕ್. ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

29.08.2024: 6 ದಿನಗಳು ವಿಮಾನದಲ್ಲಿ ಕಾಶಿ,ಅಯೋಧ್ಯ ಗಯಾ,ಅಲಹಾಬಾದ್ 32000/ (ಕೆಲವೇ ಸೀಟುಗಳಿವೆ) 16.09.2024: 12/16 ದಿನಗಳು ದೆಹಲಿ,ಹರಿದ್ವರ್ ಬದ್ರಿನಾಥ್,ಕೇದಾರನಾಥ ಗಂಗೋತ್ರಿ,ಯಮುನೋತ್ರಿ 30000/ 42000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219/ 9886968166

ಕಾಶಿ ಗಯಾ ಬೈದ್ಯನಾಥಧಾಮ್ ಅಯೋಧ್ಯ ನೈಮಿಷಾರಣ್ಯ 20.09.2024 22.09.2024 27.09.2024 14.10.2024 ರಿಂದ 8 ದಿನಗಳು. ದೆಹಲಿ ಯಮುನೋತ್ರಿ,ಗಂಗೋತ್ರಿ ಕೇದಾರನಾಥ್ ಬದರಿನಾಥ್ 13.09.2024 20.09.2024 27.09.2024 14.10.2024 ರಿಂದ 14 ದಿನಗಳು. ಸೋಮನಾಥ್ ದ್ವಾರಕಾ,ಮಾತ್ರುಗಯಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗ ಪ್ರವಾಸ 14.10.2024 ರಿಂದ 15 ದಿನಗಳು. ಕಾಶ್ಮೀರ್,ಗುಲ್ಮಾರ್ಗ್ ಸೋನಾಮಾರ್ಗ ವೈಷ್ಣೋದೇವಿ 04.10.2024 14.10.2024 27.10.2024 ರಿಂದ 10 ದಿನಗಳು. ಸಂಪರ್ಕಿಸಿ. 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು.18

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ವಿಮಾನ/ ರೈಲು ಎಸಿ ಬಸ್ಸಿನಲ್ಲಿ 08.09.2024 23.09.2024 ಚಾರ್‌ಧಾಮ್ ಪ್ರವಾಸ. 14.09.2024 22.09.2024 ಅಯೋಧ್ಯಾ,ಕಾಶಿ ಬುದ್ಧಗಯಾ. 21.09.2024 29.09.2024 ನೇಪಾಳ ಮುಕ್ತಿನಾಥ ಪೋಕ್ರಾ,ಲುಂಬಿನಿ.15.09.2024 26.09.2024 ದ್ವಾರಕಾ ಸೋಮನಾಥ್ ನಿಷ್ಕಳಂಕ ಮಹಾದೇವ ಓಂಕಾರೇಶ್ವರ್ ಮಹಾಕಾಳೇಶ್ವರ ದಕ್ಷಿಣ ಮತ್ತು ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

13 ದಿನಗಳ ಚಾರ್‌ಧಾಮ್. 8 ದಿನಗಳ ನೇಪಾಳ,ಮುಕ್ತಿನಾಥ. 13/7 ದಿನಗಳು ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ ಬಾಲಿ. 6 ದಿನಗಳ ದುಬೈ. 18 ದಿನಗಳ ಯುಕೆ,ಯುರೋಪ್ (10ದೇಶಗಳು). 6 ದಿನಗಳ ಶ್ರೀಲಂಕಾ ಪ್ರವಾಸ. ಸಂಪರ್ಕಿಸಿ: 9900080793 9880079588. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು-04

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER

ಆರ್.ಎಲ್. ಜಾಲಪ್ಪ ಅಕಾಡೆಮಿ, ಸೋಲೂರು
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ-562127 (ನೆಲಮಂಗಲ ದಿಂದ 15 ಕಿ.ಮೀ. (ಕುಣಿಗಲ್ ರಸ್ತೆ ಕಡೆಗೆ)
KAS | PSI | FDA | SDA
ಪರೀಕ್ಷೆಗಾಗಿ ನಾಲ್ಕು ತಿಂಗಳ ಉಚಿತ ತರಬೇತಿ ಜುಲೈ 28 ರಿಂದ ತರಗತಿಗಳು ಪ್ರಾರಂಭವಾಗಲಿದೆ
■ ಪ್ರಖ್ಯಾತ ಮಾರ್ಗದರ್ಶಕರರಿಂದ ಬೋಧನೆ ■ 24x7 ಗ್ರಂಥಾಲಯ ವ್ಯವಸ್ಥೆ, ವಿಶಾಲವಾದ ಆಟದ ಮೈದಾನ ■ ನಿಶಬ್ಧ ಮತ್ತು ಸ್ವಚ್ಛ ಪರಿಸರದಲ್ಲಿ ಅಕಾಡೆಮಿ ■ 4 ತಿಂಗಳಲ್ಲಿ OMR ಸಮೇತ 30 ಮಾದರಿ ಪರೀಕ್ಷೆ ನಡೆಸಲಾಗುವುದು ■ PSI ಪರೀಕ್ಷೆಗೆ ದೈಹಿಕ ಪರೀಕ್ಷೆ ಕುರಿತಂತೆ ಸೂಕ್ತ ಮಾರ್ಗದರ್ಶನ ನೀಡಲಾಗುವುದು ■ ಸ್ನಾನಕ್ಕೆ ಬಿಸಿನೀರಿನ ವ್ಯವಸ್ಥೆ ಇರುತ್ತದೆ ■ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಹಾಗೂ ಸುರಕ್ಷತೆ ಇರುತ್ತದೆ ■ 531ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ
www.rljacademy.in ಕೊನೆಯ ದಿನಾಂಕ 27.07.2024
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 99006 06042 / 97314 80759 73377 05513 / 74833 14717
ವಿ.ಸೂ. ದೂರದಿಂದ ಬರುವ ವಿದ್ಯಾರ್ಥಿಗಳಿಗೆ ವಸತಿ ಹಾಗೂ ಊಟದ ವ್ಯವಸ್ಥೆ ಇರುತ್ತದೆ.

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾವಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರ್ಷದ
ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course
Post Graduation Diploma in Information Technology
6 ತಿಂಗಳ DIT, DCA, DOA ಇತ್ಯಾದಿ ಕೋರ್ಸುಗಳು.
(Qual : SSLC/ PUC) ಸರಕಾರದ PM ವಿಶ್ವಕರ್ಮ ಹಾಗೂ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ
DIPLOMA IN COMPUTER DATA ENTRY OPERATOR
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
Email: info@thercss.com
Website: www.thercss.com
MOB.: 9008419955, 9901520055, 9449198555

ಭವಿಷ್ಯ

Astrology

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರಜಾವಾಣಿ ಕ್ಲಾಸಿಫೈಡ್ಸ್
ಸಾರ್ವಜನಿಕ ಪ್ರಕಟಣೆ
www.dhclassifieds.com BOOK NOW
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9886213331 9901641752

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ನೀಟ್: ದಾವಣಗೆರೆಯ ಎಂಟು ಅಭ್ಯರ್ಥಿಗಳಿಗೆ 700ಕ್ಕಿಂತ ಹೆಚ್ಚು ಅಂಕಗಳು

# 1,404 ಕೇಂದ್ರಗಳಲ್ಲೇ ಹೆಚ್ಚಿನ ಸಾಧಕರು

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ 'ನೀಟ್-ಯುಜಿ' ಪರೀಕ್ಷೆ ಬರೆದವರಲ್ಲಿ 2,321 ಅಭ್ಯರ್ಥಿಗಳು ಒಟ್ಟು 720 ಅಂಕಗಳಿಗೆ 700ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಸಾಧನೆ ಮಾಡಿದ್ದಾರೆ. ಇವರು ದೇಶದ 1,404 ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದು, ಬಹುತೇಕರು 'ಸಾಂಪ್ರದಾಯಿಕವಲ್ಲದ ಟ್ಯೂಷನ್ ತಾಣ'ಗಳಿಗೆ ಸೇರಿದವರಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಸಕ್ತ ವರ್ಷದ ವೈದ್ಯಕೀಯ ಪ್ರವೇಶ ಪರೀಕ್ಷೆಗೆ 23.33 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. 700ಕ್ಕೂ ಹೆಚ್ಚು ಅಂಕ ಪಡೆದಿರುವ ಅಭ್ಯರ್ಥಿಗಳು 25 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 276 ನಗರಗಳಿಗೆ ಸೇರಿದವರಾಗಿದ್ದಾರೆ.

ಸಾಂಪ್ರದಾಯಿಕ ಟ್ಯೂಷನ್ ತಾಣಗಳಾದ ಸಿಕರ್, ಕೋಟಾ ಮತ್ತು ಕೊಟ್ಟಾಯಂನ ಅನೇಕ ಪರೀಕ್ಷಾರ್ಥಿಗಳು 700ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ್ದಾರೆ ಎಂಬುದು ನಿಜ. ಆದರೆ, ದೇಶದ ಇತರ ನಗರಗಳ ಅನೇಕ ಅಭ್ಯರ್ಥಿಗಳೂ ಹೆಚ್ಚು ಅಂಕಗಳನ್ನು ಗಳಿಸಲು ಸಾಧ್ಯವಾಗಿದೆ. ನೀಟ್ ಪಠ್ಯಕ್ರಮವನ್ನು ಹಿರಿಯ ಮಾಧ್ಯಮಿಕ ಪಠ್ಯದೊಂದಿಗೆ ಸಂಯೋಜಿಸಿರುವುದು ಫಲ ನೀಡಲು ಆರಂಭಿಸಿದೆ ಎಂದು ಮೂಲಗಳು ತಿಳಿಸಿವೆ.

ಉದಾಹರಣೆಗೆ, ಲಖನೌದಲ್ಲಿ ಪರೀಕ್ಷೆ ಬರೆದ 35 ಅಭ್ಯರ್ಥಿಗಳು, ಕೋಲ್ಕತ್ತದ 27, ಲಾಥೂರ್‌ನ 25, ನಾಗ್ಪುರದ 20, ಫರಿದಾಬಾದ್‌ನ 19, ನಾಂದೇಡ್‌ನ 18, ಇಂದೋರ್‌ನ 17, ಕಟಕ್ ಮತ್ತು ಕಾನ್ಪುರದ ತಲಾ 16, ಕೊಲ್ಹಾಪುರ, ನೋಯ್ಡಾ, ಸಾಹಿಬ್ಜಾದಾ ಅಜಿತ್ ಸಿಂಗ್ ನಗರಗಳ ತಲಾ 14, ಆಗ್ರಾ, ಅಲಿಗಢದ ತಲಾ 13, ಅಕೋಲಾ, ಪಟಿಯಾಲಾದ ತಲಾ 10, ದಾವಣಗೆರೆಯ ಎಂಟು, ಬನಸ್ಕಾಂತದ ಏಳು ಅಭ್ಯರ್ಥಿಗಳು 700 ಅಥವಾ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಗಣನೀಯ ಸಾಧನೆ ಮಾಡಿದ್ದಾರೆ.

650ರಿಂದ 699 ಅಂಕಗಳನ್ನು ಪಡೆದವರು 509 ನಗರಗಳ 4,044 ಕೇಂದ್ರಗಳಲ್ಲಿ ಪರೀಕ್ಷೆ ಬರೆದವರಾಗಿದ್ದಾರೆ. 600ರಿಂದ 649 ಅಂಕಗಳನ್ನು ಪಡೆದವರು 540 ನಗರಗಳ 4,484 ಕೇಂದ್ರಗಳಲ್ಲಿ ಹಾಗೂ 550ರಿಂದ 599 ಅಂಕಗಳನ್ನು ಪಡೆದವರು 548 ನಗರಗಳ 4,563 ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾದವರಾಗಿದ್ದಾರೆ ಎಂದು ಅಂಕಿ ಅಂಶಗಳು ತಿಳಿಸುತ್ತವೆ.

### '2,250 ಮಂದಿಗೆ ಶೂನ್ಯ, 9,400 ಅಭ್ಯರ್ಥಿಗಳಿಗೆ ನೆಗೆಟಿವ್ ಅಂಕ'

ನವದೆಹಲಿ (ಪಿಟಿಐ): ನೀಟ್-ಯುಜಿ ಪರೀಕ್ಷೆಯಲ್ಲಿ 11 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಶೂನ್ಯ ಅಂಕ ಅಥವಾ ನೆಗೆಟಿವ್ ಅಂಕ ಗಳಿಸಿದ 'ಸಾಧನೆ' ಮಾಡಿದ್ದಾರೆ. ಅತಿ ಕಡಿಮೆ ಅಂಕ –180 ಗಳಿಸಿದ ಅಭ್ಯರ್ಥಿಯು ಬಿಹಾರದ ಕೇಂದ್ರವೊಂದಕ್ಕೆ ಸೇರಿದವರಾಗಿದ್ದಾರೆ.

ನಗರ ಮತ್ತು ಕೇಂದ್ರವಾರು ಫಲಿತಾಂಶದ ವಿಶ್ಲೇಷಣೆ ಪ್ರಕಾರ, 2,250 ಅಭ್ಯರ್ಥಿಗಳು ಶೂನ್ಯಅಂಕ ಗಳಿಸಿದ್ದರೆ, 9,400 ವಿದ್ಯಾರ್ಥಿಗಳು ನೆಗೆಟಿವ್ ಅಂಕಗಳಿಸಿದ್ದಾರೆ.

### ರ್‍ಯಾಂಕ್‌ವಾರು ವಿವರ

1ರಿಂದ 100 ರ್‍ಯಾಂಕ್ ಪಡೆದವರು 56 ನಗರಗಳ 95 ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದಾರೆ. 101ರಿಂದ 1,000 ರ್‍ಯಾಂಕ್ ಪಡೆದವರು 187 ನಗರಗಳ 706 ಕೇಂದ್ರಗಳಲ್ಲಿ, 1,001ರಿಂದ 10,000 ರ್‍ಯಾಂಕ್ ಪಡೆದವರು 431 ನಗರಗಳ 2,959 ಕೇಂದ್ರಗಳಿಂದ, 10,001ರಿಂದ 50,000 ರ್‍ಯಾಂಕ್‌ಗಳನ್ನು ಪಡೆದವರು 523 ನಗರಗಳ 4,283 ಕೇಂದ್ರಗಳಿಂದ ಹಾಗೂ 50,001ರಿಂದ 1,10,000 ರ್‍ಯಾಂಕ್‌ಗಳನ್ನು ಪಡೆದವರು 539 ನಗರಗಳ 4,470 ಕೇಂದ್ರಗಳಲ್ಲಿ ಪರೀಕ್ಷೆ ಬರೆದವರಾಗಿದ್ದಾರೆ ಎಂದು ದತ್ತಾಂಶಗಳಿಂದ ತಿಳಿದು ಬರುತ್ತದೆ.

ರಾಜಸ್ಥಾನದ ಸಿಕರ್‌ನ ವಿವಿಧ ಕೇಂದ್ರಗಳಲ್ಲಿ ಪರೀಕ್ಷೆ ಬರೆದವರ ಪೈಕಿ 2,000 ಅಭ್ಯರ್ಥಿಗಳು 650ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದರೆ, 4,000ಕ್ಕೂ ಹೆಚ್ಚು ಅಭ್ಯರ್ಥಿಗಳು 600ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ.

ಮುಂಬೈನಲ್ಲಿ ಭಾನುವಾರ ಸುರಿದ ಮಳೆಯಿಂದಾಗಿ ರಸ್ತೆಯೊಂದರಲ್ಲಿ ಮೊಣಕಾಲುವರೆಗೆ ನೀರು ನಿಂತಿದ್ದು, ಬಸ್ಸಿನ ಚಕ್ರಗಳು ಭಾಗಶಃ ಮುಳುಗಿದ್ದವು —ಪಿಟಿಐ ಚಿತ್ರ

ಮುಂಬೈ: 36 ವಿಮಾನಗಳ ಕಾರ್ಯಾಚರಣೆ ರದ್ದು

# ಭಾರಿ ಮಳೆ: ಜನಜೀವನ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ/ ಪಿಟಿಐ

ಮುಂಬೈ: ಮಹಾರಾಷ್ಟ್ರದ ಮುಂಬೈ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾನುವಾರ ಧಾರಾಕಾರ ಮಳೆ ಸುರಿದಿದ್ದು, ವಿಮಾನ ಕಾರ್ಯಾಚರಣೆಗೆ ಅಡಚಣೆಯಾಗಿದೆ. ಅಲ್ಲದೆ, ಹಲವು ರಸ್ತೆಗಳು ಜಲಾವೃತವಾಗಿದ್ದು, ಸಂಚಾರಕ್ಕೆ ಅಡ್ಡಿಯಾಗಿದೆ.

ದಟ್ಟ ಮೋಡದಿಂದಾಗಿ ಮಂದ ಬೆಳಕು ಮತ್ತು ಪ್ರಕ್ಷುಬ್ಧ ವಾತಾವರಣದಿಂದಾಗಿ ಛತ್ರಪತಿ ಶಿವಾಜಿ ಮಹಾರಾಜ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 36 ವಿಮಾನಗಳ ಕಾರ್ಯಾಚರಣೆಯನ್ನು ರದ್ದುಗೊಳಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಸಂಜೆ ನಾಲ್ಕು ಗಂಟೆವರೆಗೆ 15 ವಿಮಾನಗಳ ಸಂಚಾರವನ್ನು ಹತ್ತಿರದ ವಿಮಾನ ನಿಲ್ದಾಣಗಳಿಗೆ ಮಾರ್ಗ ಬದಲಾವಣೆ ಮಾಡಲಾಯಿತು ಎಂದು ತಿಳಿದುಬಂದಿದೆ.

ಸಂಜೆ ನಾಲ್ಕು ಗಂಟೆವರೆಗೆ ನಗರದಲ್ಲಿ 82 ಮಿಲಿ ಮೀಟರ್, ಪೂರ್ವ ಉಪನಗರದಲ್ಲಿ 96 ಮಿಲಿ ಮೀಟರ್, ಪಶ್ಚಿಮ ಉಪನಗರದಲ್ಲಿ 90 ಮಿಲಿ ಮೀಟರ್ ಮಳೆಯಾಗಿದೆ ಎಂದು ಬೃಹನ್ ಮುಂಬೈ ಮಹಾನಗರ ಪಾಲಿಕೆ ತಿಳಿಸಿದೆ.

ಪಶ್ಚಿಮ ಮತ್ತು ಕೇಂದ್ರೀಯ ರೈಲ್ವೆ ಮಾರ್ಗದ ಉಪನಗರ ರೈಲು ಸಂಚಾರ ಸೇವೆಯಲ್ಲಿ ಯಾವುದೇ ವ್ಯತ್ಯಯವಾಗಲಿಲ್ಲ. ಆದರೆ, ಮುಂಬೈನ ಹಾರ್ಬರ್ ಲೈನ್‌ನಲ್ಲಿ ರೈಲುಗಳ ಸಂಚಾರದಲ್ಲಿ 15ರಿಂದ 20 ನಿಮಿಷ ವಿಳಂಬವಾಯಿತು.

### 'ಹಿಮಾಚಲ: ಶೇ 43ರಷ್ಟು ಮಳೆ ಕೊರತೆ'

ಶಿಮ್ಲಾ: ಹಿಮಾಚಲ ಪ್ರದೇಶದಲ್ಲಿ ನೈರುತ್ಯ ಮಾನ್ಸೂನ್ ಮಾರುತಗಳು ನಿರೀಕ್ಷಿತ ಪ್ರಮಾಣದ ಮಳೆ ಸುರಿಸಿಲ್ಲ. ಇದರಿಂದಾಗಿ ಈವರೆಗೆ ಶೇ 43ರಷ್ಟು ಪ್ರಮಾಣದ ಮಳೆ ಕೊರತೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಜೂನ್ 1ರಿಂದ ಜುಲೈ 21ರವರೆಗೆ ಸಾಮಾನ್ಯವಾಗಿ 266.4ರಷ್ಟು ಮಿಲಿ ಮೀಟರ್ ಮಳೆಯಾಗಬೇಕಿತ್ತು. ಆದರೆ, 151.6 ಮಿಲಿ ಮೀಟರ್‌ನಷ್ಟು ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

# ಎಲ್ಲ ಗರೀಬ್ ರಥ ಸಂಪೂರ್ಣ 'ಎ.ಸಿ ಎಕಾನಮಿ' ಕೋಚ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಮಾನ್ಯ ಜನರ ಪ್ರಯಾಣವೂ ಸುಖಕರವಾಗಿರಬೇಕು ಎಂಬ ಉದ್ದೇಶದಿಂದ ಎಲ್ಲ ಗರೀಬ್ ರಥ ರೈಲುಗಳಲ್ಲಿ ನೂತನವಾಗಿ ವಿನ್ಯಾಸಗೊಳಿಸಿರುವ, ಕಡಿಮೆ ದರದ ಎ.ಸಿ ಕೋಚ್‌ಗಳನ್ನು (ಎ.ಸಿ ಎಕಾನಮಿ ಕೋಚ್) ಅಳವಡಿಸಲು ಭಾರತೀಯ ರೈಲ್ವೆ ನಿರ್ಧರಿಸಿದೆ.

ಇದೇ ತಿಂಗಳಿನಿಂದ ಅನ್ವಯವಾಗುವಂತೆ ನೂತನ ಕೋಚ್‌ಗಳನ್ನು ಆಯ್ದ ಮಾರ್ಗಗಳ ರೈಲುಗಳಲ್ಲಿ ಅಳವಡಿಸಲಾಗುತ್ತದೆ. ಈ ರೈಲುಗಳಲ್ಲಿ 'ಚೇರ್ ಕಾರ್'ಗಳು ಇರುವುದಿಲ್ಲ ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎ.ಸಿ-3 ಸೀಟುಗಳಿಗೆ ನಿಗದಿಪಡಿಸಿರುವ ದರಕ್ಕಿಂತಲೂ ಎ.ಸಿ ಎಕಾನಮಿ ಪ್ರಯಾಣ ದರ ಕಡಿಮೆ ಇರಲಿದೆ. ಗರೀಬ್ ರಥ ರೈಲಿನ ಎ.ಸಿ ಎಕಾನಮಿ ಕೋಚ್ ಪ್ರಯಾಣ ದರವು ಎ.ಸಿ-3 ದರಕ್ಕಿಂತ ಶೇ 8-10ರಷ್ಟು ಕಡಿಮೆ ನಿಗದಿ ಮಾಡಲಾಗುತ್ತದೆ. ಗರೀಬ್ ರಥ ರೈಲುಗಳು ಎ.ಸಿ-3, ಎ.ಸಿ-2 ಹಾಗೂ ಚೇರ್ ಕಾರ್ ಕೋಚ್‌ಗಳನ್ನು ಹೊಂದಿವೆ. ಈ ರೈಲುಗಳಿಗೆ 20 ಎಲ್‌ಎಚ್‌ಬಿ ಕೋಚ್‌ಗಳನ್ನು ಅಳವಡಿಸಿದ ನಂತರ, 18 ಎ.ಸಿ-3 ಎಕಾನಮಿ ಕೋಚ್ ಹಾಗೂ 2 ಜನರೇಟರ್ ಮೋಟಾರ್ ಕಾರ್‌ಗಳು ಇರಲಿವೆ ಎಂದಿದ್ದಾರೆ ಅಧಿಕಾರಿಗಳು.

ಉಜ್ಜಯಿನಿ ಮೂಲಕ ಹಾದು ಹೋಗುವ 'ಮಧ್ಯರೇಖಾ'

# 'ಭಾರತದ್ದೇ ಪ್ರಧಾನ ರೇಖಾಂಶ ಇತ್ತು'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಗ್ರೀನ್‌ವಿಚ್ ರೇಖಾಂಶಕ್ಕಿಂತ ಮುನ್ನ ಭಾರತವು ತನ್ನದೇ ಆದ ಪ್ರಧಾನ ರೇಖಾಂಶವನ್ನು ಹೊಂದಿತ್ತು. ಅದನ್ನು 'ಮಧ್ಯರೇಖಾ' ಎಂದು ಕರೆಯಲಾಗುತ್ತಿತ್ತು.ಅದು ಮಧ್ಯಪ್ರದೇಶದ ಉಜ್ಜಯಿನಿ ನಗರದ ಮೂಲಕ ಹಾದುಹೋಗುತ್ತದೆ ಎಂದು ಎನ್‌ಸಿಇಆರ್‌ಟಿ 6ನೇ ತರಗತಿಯ ಸಮಾಜ ವಿಜ್ಞಾನ ವಿಷಯದ ಪರಿಷ್ಕೃತ ಪಠ್ಯದಲ್ಲಿ ಉಲ್ಲೇಖಿಸಲಾಗಿದೆ.

'ಎಕ್ಸ್‌ಪ್ಲೋರಿಂಗ್ ಸೊಸೈಟಿ ಇಂಡಿಯಾ ಅಂಡ್ ಬಿಯಾಂಡ್' ಎಂಬ ಶೀರ್ಷಿಕೆಯ ಪಠ್ಯಪುಸ್ತಕದಲ್ಲಿ ಹರಪ್ಪ ನಾಗರಿಕತೆಯನ್ನು 'ಸಿಂಧು- ಸರಸ್ವತಿ' ನಾಗರಿಕತೆ ಎಂದೂ ಕರೆಯಲಾಗಿದೆ. ಜಾತಿ ಆಧಾರಿತ ತಾರತಮ್ಯದ ಬಗ್ಗೆಯೂ ಉಲ್ಲೇಖವಿಲ್ಲ. ಪರಿಷ್ಕರಣೆ ಸಂದರ್ಭದಲ್ಲಿ ಪ್ರಮುಖ ರಾಜವಂಶಗಳ ಪಾಠವನ್ನು ಕೈಬಿಡಲಾಗಿದೆ.

'ಇತಿಹಾಸ, ಭೌಗೋಳಿಕತೆ, ರಾಜ್ಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳ ವಿಭಾಗಗಳನ್ನು ಪುಸ್ತಕದಲ್ಲಿ ಸಂಯೋಜಿಸಲಾಗಿದ್ದು, ಪ್ರಮುಖ ವಿಚಾರಗಳನ್ನು ಕೇಂದ್ರೀಕರಿಸುವ ಮೂಲಕ ಪಠ್ಯದ ಗಾತ್ರವನ್ನು ಕಡಿಮೆಗೊಳಿಸಲು ಪ್ರಯತ್ನಿಸಿದ್ದೇವೆ' ಎಂದುಎನ್‌ಸಿಇಆರ್‌ಟಿನಿರ್ದೇಶಕ ದಿನೇಶ್ ಸಕ್ಲಾನಿ ಅವರು ಪಠ್ಯದ ಪರಿಚಯಾತ್ಮಕ ಬರಹದಲ್ಲಿ ತಿಳಿಸಿದ್ದಾರೆ.

### ಕೈಬಿಟ್ಟಿರುವ ಮಾಹಿತಿ

- ಹಿಂದಿನ ಪಠ್ಯಪುಸ್ತಕದಲ್ಲಿ ಕೆಲ ಪುರೋಹಿತರು ಸಮಾಜವನ್ನು ವರ್ಣವ್ಯವಸ್ಥೆ ಆಧಾರದ ಮೇಲೆ ವಿಭಜಿಸಿದ್ದರು. ಶೂದ್ರರು ಯಾವುದೇ ಆಚರಣೆಗಳನ್ನು ಮಾಡುವಂತಿರಲಿಲ್ಲ. ಮಹಿಳೆಯರು ಮತ್ತು ಶೂದ್ರರು ವೇದಗಳನ್ನು ಅಧ್ಯಯಿಸುವಂತಿರಲಿಲ್ಲ. ಹುಟ್ಟಿನ ಆಧಾರದ ಮೇಲೆ ಗುಂಪುಗಳನ್ನು ನಿರ್ಧರಿಸಲಾಗುತ್ತಿತ್ತು ಎಂದು ಹೇಳಲಾಗಿತ್ತು. ಈ ಅಂಶವನ್ನು ಹೊಸ ಪಠ್ಯದಿಂದ ತೆಗೆಯಲಾಗಿದೆ.
- ಹಳೆ ಪಠ್ಯದಲ್ಲಿ ಇದ್ದ ಅಶೋಕ, ಚಂದ್ರಗುಪ್ತ ಮೌರ್ಯ, ಗುಪ್ತರು, ಪಲ್ಲವರು ಮತ್ತು ಚಾಲುಕ್ಯ ರಾಜವಂಶಗಳ ಪಾಠಗಳನ್ನು ತೆಗೆಯಲಾಗಿದೆ.
- ದೆಹಲಿಯ ಮೆಹ್ರೌಲಿಯಲ್ಲಿನ ಕುತುಬ್ ಮಿನಾರ್ ನಿವೇಶನದಲ್ಲಿ ಇರುವ ಕಬ್ಬಿಣದ ಸ್ತಂಭದ ಉಲ್ಲೇಖವನ್ನು ಕೈಬಿಡಲಾಗಿದೆ.
- ಸಾಂಚಿ ಸ್ತೂಪ, ಮಹಾಬಲಿಪುರಂನ ಏಕಶಿಲಾ ದೇವಾಲಯ, ಅಜಂತಾ ಗುಹೆಗಳಲ್ಲಿನ ವರ್ಣಚಿತ್ರಗಳ ಉಲ್ಲೇಖಗಳನ್ನು ತೆಗೆಯಲಾಗಿದೆ.

**ಪರಿಷ್ಕೃತ ಪಠ್ಯದಲ್ಲಿರುವ ಪ್ರಮುಖ ಉಲ್ಲೇಖಗಳು**

- ಗ್ರೀನ್‌ವಿಚ್ ರೇಖಾಂಶ ಮೊದಲ ರೇಖಾಂಶವಲ್ಲ. ವಾಸ್ತವವಾಗಿ ಯುರೋಪ್‌ಗಿಂತ ಹಲವು ಶತಮಾನಗಳ ಮೊದಲು ಭಾರತ ತನ್ನದೇ ಆದ ಅವಿಭಾಜ್ಯ ರೇಖಾಂಶವನ್ನು ಹೊಂದಿತ್ತು. ಅದನ್ನು 'ಮಧ್ಯರೇಖಾ' (ಅಥವಾ ಮಧ್ಯರೇಖೆ) ಎಂದು ಕರೆಯಲಾಗುತ್ತಿತ್ತು. ಅದು ಉಜ್ಜಯಿನಿ ನಗರವನ್ನು ಹಾದು ಹೋಗುತ್ತಿತ್ತು. ಉಜ್ಜಯಿನಿ ನಗರವು ಅನೇಕ ಶತಮಾನಗಳಿಂದಲೂ ಖಗೋಳ ವಿಜ್ಞಾನದ ಪ್ರಸಿದ್ಧ ಕೇಂದ್ರವಾಗಿದೆ ಎಂದು ಪಠ್ಯದಲ್ಲಿ ಹೇಳಲಾಗಿದೆ.

ಪ್ರಸಿದ್ಧ ಖಗೋಳಶಾಸ್ತ್ರಜ್ಞರಾದ ವರಾಹಮಿಹಿರ ಅವರು ಸುಮಾರು 1,500 ವರ್ಷಗಳ ಹಿಂದೆ ಇಲ್ಲಿ ವಾಸಿಸುತ್ತಿದ್ದರು. ಭಾರತೀಯ ಖಗೋಳ ತಜ್ಞರಿಗೆ ಅಕ್ಷಾಂಶ ಮತ್ತು ರೇಖಾಂಶಗಳ ಪರಿಕಲ್ಪನೆ ತಿಳಿದಿತ್ತು. ಅಲ್ಲದೆ ಶೂನ್ಯ ಅಥವಾ ಪ್ರಧಾನ ರೇಖಾಂಶದ ಅಗತ್ಯದ ಬಗ್ಗೆಯೂ ಅವರಿಗೆ ಗೊತ್ತಿತ್ತು. ಭಾರತದ ಎಲ್ಲ ಖಗೋಳಶಾಸ್ತ್ರದ ಪುಸ್ತಕಗಳಲ್ಲಿ ಉಜ್ಜಯಿನಿ ರೇಖಾಂಶದ ಲೆಕ್ಕಾಚಾರಗಳ ಉಲ್ಲೇಖವಿದೆ ಎಂದು ಪಠ್ಯದಲ್ಲಿ ತಿಳಿಸಲಾಗಿದೆ.

- ಭಾರತೀಯ ನಾಗರಿಕತೆಯ ಆರಂಭಕ್ಕೆ ಸಂಬಂಧಿಸಿದ ಅಧ್ಯಾಯದಲ್ಲಿ ಹಲವು ಬಾರಿ 'ಸರಸ್ವತಿ' ನದಿಯ ಉಲ್ಲೇಖ ಮಾಡಲಾಗಿದೆ.
- ಹರಪ್ಪ ನಾಗರಿಕತೆಯನ್ನು 'ಸಿಂಧು- ಸರಸ್ವತಿ' ನಾಗರಿಕತೆ ಎಂದು ಉಲ್ಲೇಖಿಸಲಾಗಿದ್ದು, 'ಸರಸ್ವತಿ' ಜಲಾನಯನ ಪ್ರದೇಶವು ರಾಖಿಗರ್ಹಿ, ಗನ್ವೇರಿವಾಲಾ ಸೇರಿದಂತೆ ಹಲವು ಸಣ್ಣ ನಗರ, ಪಟ್ಟಣಗಳನ್ನು ಒಳಗೊಂಡಿತ್ತು.
- ಸರಸ್ವತಿ ನದಿಯನ್ನು ಭಾರತದಲ್ಲಿ 'ಘಗ್ಗರ್' ಹೆಸರಿನಲ್ಲಿ, ಪಾಕಿಸ್ತಾನದಲ್ಲಿ 'ಹಕ್ರಾ' ಹೆಸರಿನಲ್ಲಿ ಕರೆಯಲಾಗುತ್ತಿದೆ. ಹೀಗಾಗಿ ಈ ನದಿಗೆ 'ಘಗ್ಗರ್-ಹಕ್ರಾ' ಎಂದೂ ಹೆಸರಿದೆ.
- ಜಾತಿ ವ್ಯವಸ್ಥೆಯ ಉಲ್ಲೇಖಿಸದೆ ವೇದಗಳ ವಿವರಗಳನ್ನು ತಿಳಿಸಲಾಗಿದೆ. ಕೃಷಿಕ, ನೇಕಾರ, ಕುಂಬಾರ, ಕಟ್ಟಡ ನಿರ್ಮಾಪಕ, ಬಡಗಿ, ವೈದ್ಯ, ನರ್ತಕರು, ಕ್ಷೌರಿಕ, ಪುರೋಹಿತ ಸೇರಿದಂತೆ ಅನೇಕ ವೃತ್ತಿಗಳನ್ನು ವೈದಿಕ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.
- 'ಇಂಡಿಯಾ ದಟ್ ಇಸ್ ಭಾರತ್' ಎಂಬ ಪಾಠದಲ್ಲಿ ಇಂಡಿಯಾ ಮತ್ತು ಭಾರತ ಹೆಸರುಗಳು ಹೇಗೆ ಬಂದಿವೆ ಎಂಬುದರ ವಿಸ್ತೃತ ವಿವರಣೆ ನೀಡಲಾಗಿದೆ.

# ಸಭೆಯಲ್ಲಿದ್ದಾಗಲೇ 'ಎಕ್ಸ್'ನಲ್ಲಿ ಪೋಸ್ಟ್ ಜೈರಾಮ್ ವಿರುದ್ಧ ಬಿಜೆಪಿ, ಜೆಡಿಯು ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್‌ನ ಬಜೆಟ್ ಅಧಿವೇಶನ ಕುರಿತು ಭಾನುವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಸಭೆಯಲ್ಲಿ ಪ್ರಸ್ತಾಪಗೊಂಡ ಕೆಲ ವಿಚಾರಗಳ ಬಗ್ಗೆ 'ಎಕ್ಸ್'ನಲ್ಲಿ ನೇರ ಪೋಸ್ಟ್ ಮಾಡುತ್ತಿದ್ದರಿಂದ ಬಿಜೆಪಿ ಹಾಗೂ ಜೆಡಿಯುನಿಂದ ಟೀಕೆ ಎದುರಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದವರ ಪೈಕಿ ಜೈರಾಮ್ ರಮೇಶ್ ಅವರೇ, ಸಭೆಯಲ್ಲಿ ಪ್ರಸ್ತಾಪಗೊಂಡ ವಿಚಾರಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಮೊದಲು ಹೇಳಿಕೆ ಪೋಸ್ಟ್ ಮಾಡಿದ್ದರು.

'ಎಲ್ಲರೂ ಸಂಸದೀಯ ಸಂಪ್ರದಾಯಗಳನ್ನು ಗೌರವಿಸಬೇಕು' ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಜೈರಾಮ್ ರಮೇಶ್ ಅವರನ್ನು ಕುಟುಕಿದರು.

'ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಸಭೆಯಲ್ಲಿದ್ದಾಗಲೇ, ಅಲ್ಲಿನ ವಿಷಯಗಳ ಕುರಿತು ನೇರ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದರು. ಸಂಸದೀಯ ನಡಾವಳಿಯನ್ನು ಅವರು ಗೌರವಿಸಬೇಕಿತ್ತು' ಎಂದು ಜೆಡಿಯು ಸಂಸದ ಸಂಜಯಕುಮಾರ್ ಝಾ ಹೇಳಿದ್ದಾರೆ.

'ವಿರೋಧ ಪಕ್ಷವು (ಕಾಂಗ್ರೆಸ್) ಮುಂದಿನ ಸಭೆಗೆ ಹೆಚ್ಚು ಅನುಭವಿ ವ್ಯಕ್ತಿಯನ್ನು ಕಳುಹಿಸಲು ಯೋಚಿಸಬೇಕು' ಎಂದು ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಪ್ರತಿಕ್ರಿಯಿಸಿದ್ದಾರೆ.

### ಕೇರಳದ ನೆರವಿಗೆ ಕೇಂದ್ರದ ತಂಡ

ನವದೆಹಲಿ (ಪಿಟಿಐ): ಮಲಪ್ಪುರ ಜಿಲ್ಲೆಯಲ್ಲಿ ಪತ್ತೆಯಾಗಿರುವ ನಿಫಾ ವೈರಸ್ ಕುರಿತ ಪರಿಶೀಲನೆಗಾಗಿ ಕೇರಳಕ್ಕೆ ಬಹು ಸದಸ್ಯರು ಇರುವ ಜಂಟಿ ತಂಡವನ್ನು ನಿಯೋಜಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಈ ತಂಡವು ಕೇರಳ ಸರ್ಕಾರಕ್ಕೆ ರೋಗ ಪತ್ತೆಗೆ ತಾಂತ್ರಿಕ ಸಹಕಾರ ನೀಡಲಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

'ಬಾಲಕ ನಿಫಾ ವೈರಸ್ ಸೋಂಕಿಗೆ ಒಳಗಾಗಿದ್ದ ಎಂದು ಪುಣೆಯಲ್ಲಿರುವ 'ರಾಷ್ಟ್ರೀಯ ವೈರಾಣು ಸಂಸ್ಥೆ'ಯು ದೃಢಪಡಿಸಿದೆ' ಎಂದು ಕೇಂದ್ರ ಆರೋಗ್ಯ ಇಲಾಖೆಯು ತಿಳಿಸಿದೆ.

ಹೀಗಾಗಿ, ಬಾಲಕನ ಕುಟುಂಬಸ್ಥರು, ಸುತ್ತಮುತ್ತಲಿನ ಜನರನ್ನು ಪರೀಕ್ಷೆಗೊಳಪಡಿಸಬೇಕು. ಕಳೆದ 12 ದಿನಗಳಿಂದ ಆ ಬಾಲಕನ ಸಂಪರ್ಕಕ್ಕೆ ಬಂದಿರುವ ಪ್ರತಿಯೊಬ್ಬರನ್ನು ಗುರುತಿಸಬೇಕು. ಅವರನ್ನು ಕಡ್ಡಾಯವಾಗಿ ಪ್ರತ್ಯೇಕವಾಗಿ ಇರಿಸಬೇಕು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

# ವಿಶ್ವಾಸಮತ ಗೆದ್ದ ನೇಪಾಳ ಪ್ರಧಾನಿ ಕೆ.ಪಿ. ಶರ್ಮಾ ಓಲಿ

ಕಠ್ಮಂಡು(ಪಿಟಿಐ): ನೇಪಾಳದ ನೂತನ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಅವರು ಭಾನುವಾರ ಸಂಸತ್ತಿನಲ್ಲಿ ನಡೆದ ವಿಶ್ವಾಸಮತ ಯಾಚನೆ ವೇಳೆ ಬಹುಮತ ಸಾಬೀತುಪಡಿಸಿದರು.

ಓಲಿ ಅವರು ಮಂಡಿಸಿದ ವಿಶ್ವಾಸಮತ ನಿರ್ಣಯದ ಪರವಾಗಿ 188 ಮತಗಳು ಹಾಗೂ 74 ಮತಗಳು ವಿರುದ್ಧವಾಗಿ ಚಲಾವಣೆಯಾದವು.

275 ಸ್ಥಾನಗಳನ್ನು ಹೊಂದಿರುವ ನೇಪಾಳ ಸಂಸತ್ತಿನಲ್ಲಿ ಸರ್ಕಾರ ರಚನೆಗೆ ಕನಿಷ್ಠ 138 ಸದಸ್ಯರ ಬೆಂಬಲದ ಅಗತ್ಯವಿತ್ತು.

ಸಂಸತ್ತಿನ ಅಧಿವೇಶನ ಶುರುಗೊಳ್ಳುತ್ತಿದ್ದಂತೆ, ಓಲಿ ವಿಶ್ವಾಸಮತ ಯಾಚಿಸಿದರು. 2 ಗಂಟೆಗಳ ಆಡಳಿತ ಹಾಗೂ ವಿರೋಧಪಕ್ಷಗಳ ಸದಸ್ಯರು ಚರ್ಚೆ ನಡೆಸಿದರು. ಚರ್ಚೆಯ ಬಳಿಕ ಪ್ರಧಾನಿ ಕೆ.ಪಿ. ಶರ್ಮಾ ಓಲಿ ವಿಶ್ವಾತಮತ ಸಾಬೀತುಪಡಿಸಿದ್ದಾರೆ ಎಂದು ಮತ ಎಣಿಕೆ ಬಳಿಕ ಸ್ಪೀಕರ್ ದೇವ್‌ರಾಜ್ ಗಿಮೆರೆ ಘೋಷಿಸಿದರು.

# ಪವಾರ್, ಉದ್ಧವ್ ವಿರುದ್ಧ ಶಾ ವಾಗ್ದಾಳಿ

ಅವರು 'ಹಗರಣಗಳ ಸರದಾರ', ಇವರು 'ಔರಂಗಜೇಬ್ ಅಭಿಮಾನಿಗಳ ನಾಯಕ'

ಪ್ರಜಾವಾಣಿ ವಾರ್ತೆ

ಅಮಿತ್ ಶಾ

ಮುಂಬೈ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಶಿವಸೇನೆ (ಯು ಬಿ ಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ವಾಗ್ದಾಳಿ ನಡೆಸಿದ್ದು, ಈ ಮೂಲಕ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಬಿಜೆಪಿಯ ಸಿದ್ಧತೆಗೆ ಚಾಲನೆ ನೀಡಿದರು.

ಪವಾರ್ ಅವರನ್ನು 'ಹಗರಣಗಳ ಸರದಾರ' ಎಂದು ಟೀಕಿಸಿದ ಶಾ, ಉದ್ಧವ್ ಅವರನ್ನು 'ಔರಂಗಜೇಬ್ ಅಭಿಮಾನಿಗಳ ಸಂಘದ ನಾಯಕ' ಎಂದು ಬಣ್ಣಿಸಿದರು.

ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್‌ಗಾಂಧಿ ಅವರ ವಿರುದ್ಧವೂ ಹರಿಹಾಯ್ದರು. 'ಮಹಾರಾಷ್ಟ್ರ, ಹರಿಯಾಣ, ಜಾರ್ಖಂಡ್ ರಾಜ್ಯಗಳಲ್ಲಿ ಕಾಂಗ್ರೆಸ್ ಪರಾಭವದ ಬಳಿಕ ರಾಹುಲ್ ಅಹಂಕಾರ ಪತನವಾಗಲಿದೆ' ಎಂದರು.

'ಬಿಜೆಪಿ ನೇತೃತ್ವದ ಮೈತ್ರಿ ಸರ್ಕಾರವು ರಾಜ್ಯದಲ್ಲಿ ಅನೇಕ ಜನಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದೆ. ಮರಾಠರಿಗೆ ಮೀಸಲಾತಿ ನೀಡಿದ್ದು ಏಕನಾಥ ಶಿಂಧೆ, ದೇವೇಂದ್ರ ಫಡಣವೀಸ್, ಅಜಿತ್ ಪವಾರ್ ಜೋಡಿ ಮಾತ್ರ' ಎಂದರು.

ಪುಣೆಯಲ್ಲಿ ನಡೆದ ಬಿಜೆಪಿ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು. ಈಚೆಗೆ ನಡೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮೈತ್ರಿಗೆ, ರಾಜ್ಯದಲ್ಲಿ ಮಹಾಯುತಿ ಮೈತ್ರಿ ಹೋರಾಟದಿಂದ ಹಿನ್ನಡೆಯಾಗಿತ್ತು.

'ಶರದ್ ಪವಾರ್ ಅವರು ಹಗರಣಗಳ ಸರದಾರ. ದೇಶದಲ್ಲಿ ಭ್ರಷ್ಟಾಚಾರವನ್ನು ಸಾಂಸ್ಥಿಕರಣಗೊಳಿಸಿದ ಯಾರಾದರೂ ನಾಯಕರಿದ್ದರೆ ಅದು ಶರದ್ ಪವಾರ್ ಮಾತ್ರ. ಇನ್ನು ಅದಕ್ಕೆ ಅವಕಾಶ ಇರುವುದಿಲ್ಲ' ಎಂದು ಹೇಳಿದರು.

'ಈ ಹಿಂದೆ ಬಿಜೆಪಿ ಜೊತೆಗೆ ಮೈತ್ರಿಯನ್ನು ಹೊಂದಿದ್ದ ಉದ್ಧವ್ ಠಾಕ್ರೆ ಅವರನ್ನೂ ಗುರಿಯಾಗಿಸಿದ ಶಾ, 'ಇಲ್ಲಿ, ಔರಂಗಜೇಬ್ ಅಭಿಮಾನಿಗಳ ಸಂಘವಿದೆ. ಅದು, ಭಾರತಕ್ಕೆ ರಕ್ಷಣೆಯ ಭರವಸೆ ನೀಡುವುದಿಲ್ಲ. ಅದರ ಬಗ್ಗೆ ನಿಮಗೆ ಗೊತ್ತಿದೆಯಾ? ಉದ್ಧವ್ ಠಾಕ್ರೆ ಅವರು ಆ ಅಭಿಮಾನಿಗಳ ಸಂಘದ ನಾಯಕರು' ಎಂದು ಟೀಕಿಸಿದರು.

'ಮೊಹಮ್ಮದ್ ಅಜ್ಮಲ್ ಕಸಬ್ (ಮುಂಬೈ ಉಗ್ರರ ದಾಳಿ ಕೃತ್ಯದ ಆರೋಪಿ) ಜೊತೆಗೆ ಗುರುತಿಸಿಕೊಂಡಿದ್ದವರ ಜೊತೆಗೂಡಿ ಉದ್ಧವ್ ಊಟ ಮಾಡುತ್ತಾರೆ. ಪಿಎಫ್‌ಐ ಬೆಂಬಲಿಸಿದವರಿಗೂ ಬೆಂಬಲಿಸುತ್ತಾರೆ. ಈ ಅಭಿಮಾನಿಗಳ ಸಂಘವು ಮಹಾರಾಷ್ಟ್ರ, ಭಾರತ ಸುರಕ್ಷತೆಯನ್ನು ನೀಡುವುದಿಲ್ಲ' ಎಂದು ಹೇಳಿದರು.

'ಲೋಕಸಭೆ ಚುನಾವಣೆಗೆ ಮುನ್ನ ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷಗಳು ದೇಶದಲ್ಲಿ ಸಂವಿಧಾನ, ಮೀಸಲಾತಿ ಇರುವುದಿಲ್ಲ ಎಂದು ನಕಲಿ ಸಂಕಥನ ಸೃಷ್ಟಿಸಿದ್ದವು. ದೇಶದಲ್ಲಿ ಮೀಸಲಾತಿ ಬಲಪಡಿಸಿದವರು ಮೋದಿ ಮಾತ್ರ' ಎಂದರು.

ಮಹಾರಾಷ್ಟ್ರದಲ್ಲಿಯೂ ಯಾವಾಗ ಬಿಜೆಪಿ ಸರ್ಕಾರ ಇದೆಯೋ ಆಗ ಮರಾಠರಿಗೆ ಮೀಸಲಾತಿ ನೀಡಲಾಗಿದೆ. ಯಾವಾಗ ಪವಾರ್ ಇರುವ ಸರ್ಕಾರ ಇತ್ತೋ ಆಗ ಮೀಸಲಾತಿ ರದ್ದುಪಡಿಸಲಾಗಿದೆ ಎಂದು ಶಾ ಹೇಳಿದರು.

### 'ಭ್ರಷ್ಟಾಚಾರ ಸಕ್ರಮಗೊಳಿಸಿದ್ದೇ ಬಿಜೆಪಿ'

ಮುಂಬೈ: 'ಭ್ರಷ್ಟಾಚಾರವನ್ನು ಕಾನೂನುಬದ್ಧ ಗೊಳಿಸಿದ್ದೇ ಬಿಜೆಪಿ. ಆ ಪಕ್ಷ ರಾಜಕೀಯ ನಾಯಕರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುತ್ತದೆ. ಅವರು ಬಿಜೆಪಿ ಸೇರುತ್ತಿದ್ದಂತೆಯೇ ಪರಿಶುದ್ಧರು ಎಂಬ ಹಣೆಪಟ್ಟಿ ನೀಡುತ್ತದೆ' ಎಂದು ಎನ್‌ಸಿಪಿ ತಿರುಗೇಟು ನೀಡಿದೆ. ಅಮಿತ್ ಶಾ ಹೇಳಿಕೆಗೆ ಪ್ರತಿಕ್ರಿಯಿಸಿರುವ ಎನ್‌ಸಿಪಿ (ಶರದ್ ಪವಾರ್) ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಅವರು, 'ಇದು, ಭ್ರಷ್ಟಾಚಾರವನ್ನು ಕಾನೂನುಬದ್ಧಗೊಳಿಸುವ ಬಿಜೆಪಿಯ ವಾಷಿಂಗ್ ಮಷಿನ್ ಪ್ರಕ್ರಿಯೆಯೂ ಆಗಿದೆ' ಎಂದು ಟೀಕಿಸಿದ್ದಾರೆ.

**ಹಾಲಿನ ಪೌಡರ್ ಆಮದು ಮಾಡಿಕೊಳ್ಳುವ ಯಾವುದೇ ಚಿಂತನೆ ಕೇಂದ್ರ ಸರ್ಕಾರದ ಮುಂದಿಲ್ಲ. ಮಹಾವಿಕಾಸ ಆಘಾಡಿ ಮಿತ್ರ ಪಕ್ಷಗಳು ಈ ಬಗ್ಗೆ ತಪ್ಪು ಮಾಹಿತಿ ಹರಡುತ್ತಿವೆ**

**ಅಮಿತ್ ಶಾ,** ಕೇಂದ್ರ ಗೃಹ ಸಚಿವ

### ಅಮೆರಿಕ ಅಧ್ಯಕ್ಷ ಸ್ಥಾನದ ಚುನಾವಣೆ ಸ್ಪರ್ಧೆಯಿಂದ ಹಿಂದೆ ಸರಿದ ಬೈಡನ್

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಮರು ಆಯ್ಕೆ ಬಯಸಿದ್ದ ಅಧ್ಯಕ್ಷ ಜೋ ಬೈಡನ್, ಭಾನುವಾರ ಸ್ಪರ್ಧೆಯಿಂದ ಹಠಾತ್ ಹಿಂದೆ ಸರಿದಿದ್ದಾರೆ.

ಚುನಾವಣಾ ಕಣದಿಂದ ಹಿಂದೆ ಸರಿದು, ಯುವ ಅಭ್ಯರ್ಥಿಗೆ ಅವಕಾಶ ಕಲ್ಪಿಸುವಂತೆ ಪ್ರಮುಖ ಸೆನೆಟರ್ ಒಬ್ಬರು ಆಗ್ರಹಪಡಿಸಿದ ಕೆಲವೇ ಗಂಟೆಗಳಲ್ಲಿ ಜೋ ಬೈಡನ್ ಈ ನಿರ್ಧಾರ ಪ್ರಕಟಿಸಿದ್ದಾರೆ.

ಸ್ಪರ್ಧೆಯಿಂದ ಬೈಡನ್ ಹಿಂದೆ ಸರಿಯಬೇಕೆಂದು ಕೆಲವು ದಿನಗಳಿಂದ ಡೆಮಾಕ್ರಟಿಕ್ ಪಕ್ಷದ ಸದಸ್ಯರೇ ಒತ್ತಾಯಿಸುತ್ತಿದ್ದರು.

'ಎಕ್ಸ್'ನಲ್ಲಿ ತಮ್ಮ ನಿರ್ಧಾರ ಘೋಷಿಸಿರುವ ಬೈಡನ್, 'ಪಕ್ಷ ಮತ್ತು ದೇಶದ ಹಿತವನ್ನು ಬಯಸಿ ಈ ತೀರ್ಮಾನ ಕೈಗೊಂಡಿದ್ದೇನೆ. ಅಧಿಕಾರಾವಧಿ ಪೂರ್ಣಗೊಳ್ಳುವವರೆಗೆ ಅಂದರೆ ಜನವರಿ 2025ರವರೆಗೆ ಅಧ್ಯಕ್ಷ ಮತ್ತು ಕಮಾಂಡರ್ ಇನ್ ಚೀಫ್ ಆಗಿ ಮುಂದುವರಿಯುವೆ. ಈ ವಾರ ದೇಶವನ್ನು ಉದ್ದೇಶಿಸಿ ಮಾತನಾಡುವೆ' ಎಂದಿದ್ದಾರೆ.

'ಅಮೆರಿಕದ ಅಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಲಭಿಸಿದ್ದು ನನಗೆ ಜೀವಮಾನದಲ್ಲಿ ಸಿಕ್ಕ ಅತಿ ದೊಡ್ಡ ಗೌರವ. ಅಧ್ಯಕ್ಷ ಹುದ್ದೆಗೆ ಮರು ಆಯ್ಕೆಯಾಗಲು ಬಯಸಿದ್ದೆ. ಆದರೆ, ಪಕ್ಷ ಮತ್ತು ದೇಶದ ಹಿತಕ್ಕಾಗಿ ನನ್ನ ನಿಲುವನ್ನು ಬದಲಾಯಿಸಿದ್ದೇನೆ. ಅಧಿಕಾರಾವಧಿಯ ಉಳಿದ ಅವಧಿಗೆ ಅಧ್ಯಕ್ಷ ಹುದ್ದೆಯ ಕರ್ತವ್ಯಗಳನ್ನು ಪೂರ್ಣಗೊಳಿಸುವತ್ತ ಗಮನಹರಿಸುವೆ' ಎಂದು ಅವರು ಹೇಳಿದ್ದಾರೆ.

ನವೆಂಬರ್ 5ರಂದು ಅಮೆರಿಕ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಯು ನಡೆಯಲಿದೆ.

**2020ರಲ್ಲಿ ಉಪಾಧ್ಯಕ್ಷೆಯಾಗಿ ಕಮಲಾ ಹ್ಯಾರಿಸ್ ಅವರನ್ನು ಆಯ್ಕೆ ಮಾಡಿದ್ದೆ. ಈಗ ಕಮಲಾ ಅವರನ್ನು ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿ ಮಾಡಲು ನನ್ನ ಪೂರ್ಣ ಬೆಂಬಲ ಇದೆ.**

**ಜೋ ಬೈಡನ್,** ಅಮೆರಿಕ ಅಧ್ಯಕ್ಷ

# ನಿಫಾ ಸೋಂಕಿತ ಬಾಲಕ ಸಾವು

ಒಂದನೇ ಪುಟದಿಂದ...

ನಿಫಾ ಸೋಂಕಿನ ಕೇಂದ್ರಸ್ಥಾನ ಎಂದು ಗುರುತಿಸಲಾಗಿರುವ ಪಾಂಡಿಕ್ಕಾಡ್ ಸೇರಿದಂತೆ ಎರಡು ಪಂಚಾಯಿತಿ ವ್ಯಾಪ್ತಿಗಳಲ್ಲಿ 'ಜ್ವರ ಕಣ್ಗಾವಲು' ಸಮೀಕ್ಷೆ ನಡೆಸಲು ಆರೋಗ್ಯ ಇಲಾಖೆ ನಿರ್ಧರಿಸಿದೆ. ಈ ಮೂಲಕ 33 ಸಾವಿರ ಮನೆಗಳಲ್ಲಿ ಈ ಪರೀಕ್ಷೆ ನಡೆಸಲಾಗುತ್ತದೆ. ಪಾಂಡಿಕ್ಕಾಡ್ ಸ್ಥಳದಿಂದ 3 ಕಿ.ಮೀ ವ್ಯಾಪ್ತಿಯಲ್ಲಿ ನಿರ್ಬಂಧ ಜಾರಿಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2018, 2021 ಮತ್ತು 2023ರಲ್ಲಿ ಕೋಯಿಕ್ಕೋಡ್, 2019ರಲ್ಲಿ ಎರ್ನಾಕುಲಂ ಜಿಲ್ಲೆಯಲ್ಲಿ ನಿಫಾ ವೈರಸ್ ಕಂಡು ಬಂದಿತ್ತು. ಅಲ್ಲದೆ, ಕೋಯಿಕ್ಕೋಡ್, ವಯನಾಡ್, ಇಡುಕ್ಕಿ, ಮಲಪ್ಪುರ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಬಾವಲಿಗಳಲ್ಲಿ ನಿಫಾ ವೈರಸ್‌ನ ರೋಗ ನಿರೋಧಕ ಶಕ್ತಿ ಕಂಡುಬಂದಿತ್ತು ಎನ್ನಲಾಗಿದೆ.

ನಿಫಾದಿಂದ ಮೃತಪಟ್ಟ ಬಾಲಕನ ಸಂಪರ್ಕಕ್ಕೆ ಬಂದವರನ್ನು ಪ್ರತ್ಯೇಕವಾಗಿ ಇರಿಸಲು ಮಂಜೇರಿ ವೈದ್ಯಕೀಯ ಕಾಲೇಜಿನಲ್ಲಿ 30 ಪ್ರತ್ಯೇಕ ಕೊಠಡಿ ಸಿದ್ಧಪಡಿಸಲಾಗಿದೆ. ಜೊತೆಗೆ ಅಗತ್ಯ ಚಿಕಿತ್ಸೆ ಕಲ್ಪಿಸಲು 6 ಐಸಿಯು ಹಾಸಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವೆ ವೀಣಾ ಜಾರ್ಜ್ ತಿಳಿಸಿದರು.

ಬಾಂಗ್ಲಾದೇಶ: ಪ್ರತಿಭಟನೆ ನಿರತ ವಿದ್ಯಾರ್ಥಿಗಳಿಗೆ ಭಾಗಶಃ ಗೆಲುವು

# 'ಸುಪ್ರೀಂ'ನಿಂದ ಉದ್ಯೋಗದಲ್ಲಿ ಕೋಟಾ ಕಡಿತ

ಢಾಕಾ(ಎಪಿ): ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ವಿವಾದಾತ್ಮಕ ನೀತಿ ವಿರೋಧಿಸಿ ವಿದ್ಯಾರ್ಥಿಗಳು ದೇಶವ್ಯಾಪಿ ಪ್ರತಿಭಟನೆ ನಡೆಸುತ್ತಿರುವ ನಡುವೆಯೇ, ಕೋಟಾ ಕಡಿತಗೊಳಿಸಿ ಬಾಂಗ್ಲಾದೇಶ ಸುಪ್ರೀಂ ಕೋರ್ಟ್ ಭಾನುವಾರ ಆದೇಶಿಸಿದೆ.

ಕೋಟಾ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಸೇನೆಯ ನಿವೃತ್ತ ಸಿಬ್ಬಂದಿಯ ಮಕ್ಕಳು, ಸಂಬಂಧಿಕರಿಗೆ ನೀಡಿದ್ದ ಕೋಟಾವನ್ನು ಶೇ 5ಕ್ಕೆ ಇಳಿಕೆ ಮಾಡಿ ಆದೇಶಿಸಿದೆ.

ಅರ್ಹತೆ ಆಧಾರದಲ್ಲಿ ಶೇ 93ರಷ್ಟು ಹುದ್ದೆಗಳನ್ನು ಭರ್ತಿ ಮಾಡಬೇಕು. ಉಳಿದ ಶೇ 2ರಷ್ಟು ಹುದ್ದೆಗಳನ್ನು ಅಲ್ಪಸಂಖ್ಯಾತರು, ಅಂಗವಿಕಲರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲಿಡುವಂತೆಯೂ ಆದೇಶಿಸಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು, ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಸಂದ ಭಾಗಶಃ ಗೆಲುವು ಎಂದೇ ಹೇಳಲಾಗುತ್ತಿದೆ.

ಸರ್ಕಾರಿ ಹುದ್ದೆಗಳ ನೇಮಕಾತಿ ವೇಳೆ, 1971ರಲ್ಲಿ ಬಾಂಗ್ಲಾದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸೇನೆ ಸಿಬ್ಬಂದಿಯ ಮಕ್ಕಳು- ಸಂಬಂಧಿಕರಿಗೆ ಶೇ 30ರಷ್ಟು ಕೋಟಾ ನೀಡಲಾಗಿತ್ತು. ವಿದ್ಯಾರ್ಥಿಗಳಿಂದ ತೀವ್ರ ಪ್ರತಿರೋಧ ವ್ಯಕ್ತವಾದ ಕಾರಣಕ್ಕೆ, ಈ ಹಿಂದಿನ ಸರ್ಕಾರ 2018ರಲ್ಲಿ ಈ ಕೋಟಾ ಪದ್ಧತಿಯನ್ನು ಸ್ಥಗಿತಗೊಳಿಸಿತ್ತು.

ಬಾಂಗ್ಲಾದೇಶದ ಹೈಕೋರ್ಟ್ ಈ ಕೋಟಾ ಪದ್ಧತಿಯನ್ನು ಜೂನ್‌ನಲ್ಲಿ ಮತ್ತೆ ಜಾರಿಗೊಳಿಸಿ ಆದೇಶ ನೀಡಿತು. ಇದನ್ನು ವಿರೋಧಿಸಿ ಪ್ರತಿಭಟನೆ ಆರಂಭಗೊಂಡಿತ್ತು.

ಅದರಲ್ಲೂ, ಢಾಕಾ ವಿಶ್ವವಿದ್ಯಾಲಯದಲ್ಲಿ ಪ್ರತಿಭಟನೆನಿರತ ವಿದ್ಯಾರ್ಥಿಗಳು ಪೊಲೀಸರೊಂದಿಗೆ ಸಂಘರ್ಷಕ್ಕೆ ಇಳಿದಿದ್ದರಿಂದ, ಹಿಂಸಾಚಾರ ಭುಗಿಲೆದ್ದಿತು. ಈ ಘಟನೆಗಳಲ್ಲಿ, ಈವರೆಗೆ ಕನಿಷ್ಠ 103 ಜನರು ಮೃತಪಟ್ಟಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸಾವಿನ ಸಂಖ್ಯೆ ಕುರಿತು ಸರ್ಕಾರ ಈ ವರೆಗೆ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿಲ್ಲ.

ಸುಪ್ರೀಂ ಕೋರ್ಟ್ ತೀರ್ಪನ್ನು ಪ್ರಕಟಿಸಲಿದ್ದ ಹಿನ್ನೆಲೆಯಲ್ಲಿ ಸರ್ಕಾರ ಭಾನುವಾರ ರಜೆ ಘೋಷಿಸಿತ್ತು. ಸೋಮವಾರವೂ ರಜೆ ಘೋಷಿಸಿದೆ.

### ಪ್ರಮುಖ ಅಂಶಗಳು

- ಕೋಟಾ ಪದ್ಧತಿ ತಾರತಮ್ಯದಿಂದ ಕೂಡಿದ್ದು, ಆಡಳಿತಾರೂಢ ಪಕ್ಷದ ಬೆಂಬಲಿಗರಿಗೆ ಪ್ರಯೋಜನವಾಗುವಂತೆ ರೂಪಿಸಲಾಗಿದೆ– ವಿದ್ಯಾರ್ಥಿಗಳ ಆರೋಪ
- ಬಾಂಗ್ಲಾದೇಶಕ್ಕೆ ಪ್ರಯಾಣಿಸದಂತೆ ಅಮೆರಿಕ ವಿದೇಶಾಂಗ ಇಲಾಖೆ ತನ್ನ ಪ್ರಜೆಗಳಿಗೆ ಸಲಹೆ ನೀಡಿದೆ
- ಬಾಂಗ್ಲಾದೇಶದಲ್ಲಿರುವ ಕೆಲ ರಾಜತಾಂತ್ರಿಕ ಸಿಬ್ಬಂದಿ ಹಾಗೂ ಅವರ ಕುಟುಂಬಗಳನ್ನು ವಾಪಸು ಕರೆಸಿಕೊಳ್ಳುವುದಾಗಿ ಅಮೆರಿಕ ಹೇಳಿದೆ

### 'ಪ್ರತಿಭಟನೆ ನಿಲ್ಲದು' ವಿದ್ಯಾರ್ಥಿ ಸಂಘಟನೆಗಳ ಹೇಳಿಕೆ

ಢಾಕಾ(ಎಎಫ್‌ಪಿ): ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿನ ಕೋಟಾವನ್ನು ಕಡಿತಗೊಳಿಸಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿದ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ವಿದ್ಯಾರ್ಥಿ ಸಂಘಟನೆ 'ಸ್ಟುಡೆಂಟ್ಸ್ ಅಗೇನ್ಸ್ಟ್ ಡಿಸ್‌ಕ್ರಿಮಿನೇಷನ್', 'ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಹೇಳಿದೆ.

'ಸುಪ್ರೀಂ ಕೋರ್ಟ್ ತೀರ್ಪಿನಿಂದ ನಮ್ಮ ಬೇಡಿಕೆಗಳು ಭಾಗಶಃ ಈಡೇರಿದಂತಾಗಿವೆ ಎಂದು ಈ ಸಂಘಟನೆಗಳು ಪ್ರತಿಕ್ರಿಯಿಸಿವೆ.

ಆದರೆ, ನಮ್ಮ ಎಲ್ಲ ಬೇಡಿಕೆಗಳನ್ನು ಈಡೇರಿಸುವ ಕುರಿತು ಸರ್ಕಾರ ಸ್ಪಷ್ಟ ಆದೇಶ ಹೊರಡಿಸುವವರಿಗೆ ಈ ಸಂಬಂಧ ನಡೆಯುತ್ತಿರುವ ಪ್ರತಿಭಟನೆಯನ್ನು ಹಿಂತೆಗೆದುಕೊಳ್ಳುವುದಿಲ್ಲ' ಎಂದು ಸಂಘಟನೆಯ ವಕ್ತಾರರೊಬ್ಬರು ಹೇಳಿದ್ದಾರೆ.

ಬಾಂಗ್ಲಾದೇಶದ ಪರಿಸ್ಥಿತಿ ಬಗ್ಗೆ ಸಿ.ಎಂ ಮಮತಾ ಬ್ಯಾನರ್ಜಿ

# 'ಸಂಕಷ್ಟದಲ್ಲಿರುವವರಿಗೆ ಆಶ್ರಯ'

ಪ್ರಜಾವಾಣಿ ವಾರ್ತೆ/ ಪಿಟಿಐ

ಕೋಲ್ಕತ್ತ: ಬಾಂಗ್ಲಾದೇಶದಲ್ಲಿ ಭುಗಿಲೆದ್ದಿರುವ ಪ್ರತಿಭಟನೆ, ಹಿಂಸಾಚಾರ ಕುರಿತು ಪ್ರತಿಕ್ರಿಯಿಸಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸಂಕಷ್ಟದಲ್ಲಿರುವವರು ನೆರವು ಕೋರಿ ಬಂದಾಗ ರಾಜ್ಯದಲ್ಲಿ ಅವರಿಗೆ ಆಶ್ರಯ ನೀಡಲು ಸಿದ್ಧ ಎಂದು ಭಾನುವಾರ ಹೇಳಿದ್ದಾರೆ.

ನೆರೆಯ ರಾಷ್ಟ್ರದಿಂದ ಬರುವವರಿಗೆ ಆಶ್ರಯ ನೀಡುವ ಕುರಿತು ತಮ್ಮ ನಿಲುವು ಸಮರ್ಥಿಸುವುದಕ್ಕಾಗಿ ಅವರು ನಿರಾಶ್ರಿತರಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ನಿರ್ಣಯವನ್ನು ಉಲ್ಲೇಖಿಸಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಟಿಎಂಸಿಯ 'ಹುತಾತ್ಮರ ದಿನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಾಂಗ್ಲಾದೇಶ ಸಾರ್ವಭೌಮ ರಾಷ್ಟ್ರ. ಅದರ ಆಂತರಿಕ ವಿಷಯಗಳ ಕುರಿತು ನಾನು ಮಾತನಾಡುವುದಿಲ್ಲ. ಆದರೆ, ಸಂಕಷ್ಟದಲ್ಲಿರುವ ಆ ರಾಷ್ಟ್ರದ ಜನರು ನೆರವು ಕೋರಿ ಇಲ್ಲಿಗೆ ಬಂದಾಗ, ನಾವು ಅವರಿಗೆ ಆಶ್ರಯ ನೀಡುತ್ತೇವೆ' ಎಂದು ಹೇಳಿದ್ದಾರೆ.

'ಬಾಂಗ್ಲಾದೇಶದಲ್ಲಿನ ವಿದ್ಯಮಾನಗಳಿಗೆ ಸಂಬಂಧಿಸಿ ನಾವು ಪ್ರಚೋದನೆಗೆ ಒಳಗಾಗದೇ, ಸಂಯಮ ಕಾಪಾಡಿಕೊಳ್ಳಬೇಕು' ಎಂದೂ ಅವರು ರಾಜ್ಯದ ಜನರಿಗೆ ಮನವಿ ಮಾಡಿದರು.

**ಮಮತಾ ವಿರುದ್ಧ ಬಿಜೆಪಿ ಟೀಕೆ:** ಬಾಂಗ್ಲಾದೇಶದಿಂದ ಬರುವವರಿಗೆ ರಾಜ್ಯದಲ್ಲಿ ಆಶ್ರಯ ನೀಡಲು ಸಿದ್ಧ ಎಂದು ಹೇಳಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಬಿಜೆಪಿ ಭಾನುವಾರ ಟೀಕಿಸಿದೆ.

'ಮಮತಾ ಬ್ಯಾನರ್ಜಿ ಅವರ ಹೇಳಿಕೆ, ದೇಶದೊಳಗೆ ಅಕ್ರಮವಾಗಿ ಬರುವ ಬಾಂಗ್ಲಾದೇಶ ಪ್ರಜೆಗಳಿಗೆ ಆಶ್ರಯ ಕಲ್ಪಿಸಿ ಚುನಾವಣೆಗಳನ್ನು ಗೆಲ್ಲುವ 'ಇಂಡಿಯಾ' ಒಕ್ಕೂಟದ ದುಷ್ಟ ಯೋಜನೆಯ ಭಾಗ' ಎಂದು ಬಿಜೆಪಿಯ ಐ.ಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಆರೋಪಿಸಿದ್ದಾರೆ.

### 4.5 ಸಾವಿರ ವಿದ್ಯಾರ್ಥಿಗಳು ಭಾರತಕ್ಕೆ

ಅಗರ್ತಲಾ/ಗುವಾಹಟಿ(ಪಿಟಿಐ): ಹಿಂಸಾಚಾರ ಪೀಡಿತ ಬಾಂಗ್ಲಾದೇಶದಿಂದ 4,500ಕ್ಕೂ ಅಧಿಕ ಭಾರತ, ನೇಪಾಳ, ಭೂತಾನ್ ದೇಶದ ವಿದ್ಯಾರ್ಥಿಗಳು ರಸ್ತೆ ಮಾರ್ಗದ ಮೂಲಕ ಮೇಘಾಲಯ, ತ್ರಿಪುರಾ ಪ್ರವೇಶಿಸಿದ್ದಾರೆ.

1000ಕ್ಕೂ ಅಧಿಕ ವಿದ್ಯಾರ್ಥಿಗಳು ದಾವಕಿಯಲ್ಲಿ ಭೂಗಡಿ ದಾಟುವ ಮೂಲಕ ಭಾರತ ಪ್ರವೇಶಿಸಿದ್ದು, ಎಲ್ಲರೂ ಸುರಕ್ಷಿತವಾಗಿ ಅವರ ಮನೆಗಳಿಗೆ ತಲುಪಲು ಅಗತ್ಯ ನೆರವು ನೀಡಲಾಗಿದೆ ಮೇಘಾಲಯ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಬಂದವರ ಪೈಕಿ ಅರ್ಧಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾರತೀಯರಾಗಿದ್ದು, ಉಳಿದವರು ನೇಪಾಳ, ಭೂತಾನ್ ವಿದ್ಯಾರ್ಥಿಗಳಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. 379 ವಿದ್ಯಾರ್ಥಿಗಳು ತ್ರಿಪುರಾ ಗಡಿ ಮೂಲಕ ಭಾರತಕ್ಕೆ ಮರಳಿದ್ದಾರೆ ಎಂದು ಬಿಎಸ್‌ಎಫ್ ಭಾನುವಾರ ಹೇಳಿದೆ.

ಅಸ್ಸಾಂನ 120 ವಿದ್ಯಾರ್ಥಿಗಳು ಬಾಂಗ್ಲಾದೇಶದಿಂದ ಭಾರತಕ್ಕೆ ಮರಳಿದ್ದಾರೆ ಎಂದು ಅಸ್ಸಾಂನ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಜಯ್ ತಿವಾರಿ ತಿಳಿಸಿದ್ದಾರೆ.

ಭಾರತದ ಹಲವು ಚಾರಿತ್ರಿಕ ಗೆಲುವುಗಳಿಗೆ ಕಾರಣರಾದ ಟೆನಿಸ್ ದಿಗ್ಗಜರು

# ವಿಜಯ್ ಅಮೃತರಾಜ್, ಪೇಸ್‌ಗೆ 'ಹಾಲ್ ಆಫ್ ಫೇಮ್' ಗೌರವ

ನ್ಯೂಪೋರ್ಟ್ (ಅಮೆರಿಕ), (ಪಿಟಿಐ): ಭಾರತದ ಟೆನಿಸ್ ಇತಿಹಾಸದಲ್ಲಿ ಚಾರಿತ್ರಿಕ ಗೆಲುವುಗಳಿಗೆ ಮುನ್ನುಡಿ ಬರೆದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತರಾಜ್ ಅವರನ್ನು ಇಂಟರ್‌ನ್ಯಾಷನಲ್ ಹಾಲ್ ಆಫ್ ಫೇಮ್‌ಗೆ ಭಾನುವಾರ ಸೇರ್ಪಡೆಗೊಳಿಸಲಾಯಿತು. ಈ ಗೌರವಕ್ಕೆ ಪಾತ್ರರಾದ ಏಷ್ಯಾದ ಮೊದಲ ಟೆನಿಸ್ ಆಟಗಾರರೆಂಬ ಗೌರವ ಅವರದಾಯಿತು.

ಹಲವು ಐತಿಹಾಸಿಕ ಗೆಲುವುಗಳ ಮೂಲಕ ಇವರಿಬ್ಬರು ತಲೆಮಾರುಗಳನ್ನು ಪ್ರಭಾವಿಸಿದ್ದರು. ರೋಡ್ಸ್ ಐಲ್ಯಾಂಡ್‌ನ ನ್ಯೂಪೋರ್ಟ್‌ನಲ್ಲಿ ಸಮಾರಂಭ ನಡೆಯಿತು.

1996ರ ಅಟ್ಲಾಂಟಾ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ, ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಪುರುಷರ ಡಬಲ್ಸ್‌ನಲ್ಲಿ ಎಂಟು, ಮಿಶ್ರ ಡಬಲ್ಸ್‌ನಲ್ಲಿ 10 ಪ್ರಶಸ್ತಿಗಳನ್ನು ಗೆದ್ದಿರುವ ಜೊತೆಗೆ ಡೇವಿಸ್ ಕಪ್‌ನಲ್ಲಿ ಅವರು ಅಮೋಘ ಗೆಲುವುಗಳನ್ನು ಪಡೆದಿದ್ದಾರೆ. 51 ವರ್ಷ ವಯಸ್ಸಿನ ಪೇಸ್ ಅವರಿಗೆ 'ಆಟಗಾರರ ವಿಭಾಗ'ದಲ್ಲಿ ಈ ವಿರಳ ಗೌರವ ಒಲಿದಿದೆ.

70 ವರ್ಷ ವಯಸ್ಸಿನ ವಿಜಯ್ ಅಮೃತರಾಜ್ ಅವರು ವಿಂಬಲ್ಡನ್ ಮತ್ತು ಅಮೆರಿಕ ಓಪನ್‌ನಲ್ಲಿ ತಲಾ ಎರಡು ಬಾರಿ ಕ್ವಾರ್ಟರ್‌ಫೈನಲ್ ತಲುಪಿದ ಸಾಧಕ. ಎರಡು ಬಾರಿ (1974 ಮತ್ತು 1987ರಲ್ಲಿ) ಭಾರತ ತಂಡ ಡೇವಿಸ್ ಕಪ್ ಫೈನಲ್ ತಲುಪುವಲ್ಲಿ ಅವರ ಆಟ ನೆರವಾಗಿತ್ತು. ಟೆನಿಸ್ ಜೀವನದ ಉತ್ತುಂಗದಲ್ಲಿದ್ದಾಗ ಅವರು ಸಿಂಗಲ್ಸ್‌ನಲ್ಲಿ 18ನೇ ಕ್ರಮಾಂಕ ಮತ್ತು ಡಬಲ್ಸ್‌ನಲ್ಲಿ 23ನೇ ಕ್ರಮಾಂಕ ಪಡೆದಿದ್ದರು.

ವಿಜಯ್ ಅಮೃತರಾಜ್ ಮತ್ತು ರಿಚರ್ಡ್ ಇವಾನ್ಸ್ ಅವರನ್ನು ಆಟಕ್ಕೆ ನೀಡಿದ ಕೊಡುಗೆಗಾಗಿ ಕಾಂಟ್ರಿಬ್ಯೂಟರ್ಸ್ ವಿಭಾಗದಲ್ಲಿ ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಮಾಡಲಾಗಿದೆ.

'ಪೇಸ್ ಅವರನ್ನು ಆಟಗಾರರ ವಿಭಾಗದಲ್ಲಿ, ಅಮೃತರಾಜ್ ಮತ್ತು ಇವಾನ್ಸ್ ಅವರನ್ನು ಟೆನಿಸ್‌ಗೆ ನೀಡಿದ ಗಣನೀಯ ಕೊಡುಗೆಗಾಗಿ 'ಕಾಂಟ್ರಿಬ್ಯೂಟರ್ ಕೆಟಗರಿ'ಯಲ್ಲಿ ಆಯ್ಕೆ ಮಾಡಲಾಗಿದೆ. ದೂರದೃಷ್ಟಿ ಹೊಂದಿದ ಮತ್ತು ಆಟವನ್ನು ಗಣನೀಯವಾಗಿ ಪ್ರಭಾವಿಸಿದ ಆಟಗಾರರನ್ನು ಗೌರವಿಸುತ್ತಿದ್ದೇವೆ. ಈ ಮೂವರ ಸೇರ್ಪಡೆಯಿಂದ ಹಾಲ್ ಆಫ್ ಪೇಮ್‌ಅನ್ನು 28 ರಾಷ್ಟ್ರಗಳ 267 ಆಟಗಾರರು ಪ್ರತಿನಿಧಿಸಿದಂತಾಗಿದೆ' ಎಂದು ಇಂಟರ್‌ನ್ಯಾಷನಲ್ ಟೆನಿಸ್ ಹಾಲ್ ಆಫ್ ಫೇಮ್ ಪ್ರಕಟಣೆ ತಿಳಿಸಿದೆ.

ಪೇಸ್ 37 ವಾರಗಳ ಕಾಲ ಡಬಲ್ಸ್ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದ್ದರು. ಎಟಿಪಿ ಟೂರ್‌ನಲ್ಲಿ 54 ಡಬಲ್ಸ್ ಪ್ರಶಸ್ತಿಗಳನ್ನು ಅವರು ಗೆದ್ದಿದ್ದಾರೆ. ಅವರು ಸತತ ಏಳು ಒಲಿಂಪಿಕ್ಸ್‌ಗಳಲ್ಲಿ (1992 ರಿಂದ 2016) ಭಾರತವನ್ನು ಪ್ರತಿನಿಧಿಸಿದ್ದಾರೆ. ಟೆನಿಸ್ ಇತಿಹಾಸದಲ್ಲಿ ಯಾರೂ ಇಷ್ಟು ಸಂಖ್ಯೆಯ ಒಲಿಂಪಿಕ್ಸ್‌ನಲ್ಲಿ ಆಡಿಲ್ಲ.

ತಮ್ಮ ಪಯಣದ ಬಗ್ಗೆ ಮಾತನಾಡಿದ ಪೇಸ್, ತಾವು ಕ್ರೀಡಾಪರಂಪರೆಯ ಕುಟುಂಬದಲ್ಲಿ ಬೆಳೆದುಬಂದಿದ್ದನ್ನು ವಿವರಿಸಿದರು. 'ನಾನು ಇಂದು ಇಲ್ಲಿ ಹಾಲ್ ಆಫ್ ಫೇಮ್ ಸ್ಥಾನದಲ್ಲಿ ಕುಳಿತಿದ್ದೇನೆ. ಆದರೆ ಇದನ್ನು ಕನಸಿನಲ್ಲೂ ಯೋಚಿಸಿರಲಿಲ್ಲ. ಟೆನಿಸ್ ಆಡುವುದಕ್ಕೆ ಮೊದಲು ಕೋಲ್ಕತ್ತದ ಬೀದಿಗಳಲ್ಲಿ ಬರಿಗಾಲಿನಲ್ಲಿ ಕ್ರಿಕೆಟ್ ಮತ್ತು ಫುಟ್‌ಬಾಲ್ ಆಡುತ್ತಿದ್ದೆ' ಎಂದು ಬಾಲ್ಯದ ದಿನಗಳನ್ನು ನೆನಪಿಸಿಕೊಂಡರು.

ಮಹೇಶ್ ಭೂಪತಿ ಅವರೊಂದಿಗೆ ಡಬಲ್ಸ್ ಆಡಿದ್ದ ಪೇಸ್ ಭಾರತದ ಟೆನಿಸ್‌ಅನ್ನು ವಿಶ್ವ ದರ್ಜೆಗೆ ಏರಿಸಿದ್ದರು. ಮಿಶ್ರ ಡಬಲ್ಸ್‌ನಲ್ಲಿ ಇಬ್ಬರು ದಿಗ್ಗಜ ಆಟಗಾರ್ತಿಯರು– ಮಾರ್ಟಿನಾ ನವ್ರಾಟಿಲೋವಾ ಮತ್ತು ಮಾರ್ಟಿನಾ ಹಿಂಗಿಸ್– ಅವರ ಜೊತೆಗಾರ್ತಿಯರಾಗಿ ಆಡಿದ್ದರು.

ಭಾರತದ ಚಾಂಪಿಯನ್ ಆಟಗಾರನಿಗೆ ಗೌರವ ಸಲ್ಲಿಸಿದ ನವ್ರಾಟಿಲೋವಾ, 'ನಾವೆಲ್ಲಾ ಆಡುತ್ತಿದ್ದ ರೀತಿಯಲ್ಲೇ ಇಷ್ಟಪಟ್ಟು ಆಡುತ್ತಿದ್ದರು. ಚಿರತೆಯಷ್ಟೇ ವೇಗದಲ್ಲಿ ಹೊಡೆತಗಳಿಗೆ ಹೋಗುತ್ತಿದ್ದರು. ತಮಗೆಟಕುವ ಹೊಡೆತಗಳನ್ನು ಬಿಡುತ್ತಿರಲಿಲ್ಲ. ಎಟಕ ಲಾಗದ ವೇಳೆ ಡೈವ್ ಮಾಡುತ್ತಿದ್ದರು. ಕ್ರೀಡೆಯ ಬಗ್ಗೆ ಅವರ ಪ್ರೀತಿ ವರ್ಣಿಸಲಸದಳ' ಎಂದು ಶ್ಲಾಘಿಸಿದ್ದಾರೆ. ನವ್ರಾಟಿಲೋವಾ ಸ್ವತಃ 24 ವರ್ಷ ಹಿಂದೆ ಹಾಲ್ ಆಫ್ ಫೇಮ್‌ಗೆ ಇಂಡಕ್ಟ್ ಆಗಿದ್ದರು.

ಅಮೃತರಾಜ್ 1970ರಲ್ಲಿ ಎಟಿಪಿ ಟೂರ್‌ನಲ್ಲಿ ಭಾಗವಹಿಸಲು ಆರಂಭಿಸಿದ್ದರು. ಹಲವಾರು ವರ್ಷ ಡೇವಿಸ್ ಕಪ್ ತಂಡದಲ್ಲಿ ಆಡಿದ್ದರು. ನಿವೃತ್ತಿಯ ನಂತರ ಅವರು ಟೆನಿಸ್ ವೀಕ್ಷಕ ವಿವರಣೆಯಲ್ಲಿ ತೊಡಗಿಸಿಕೊಂಡರು. ತಮ್ಮ ಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರಿದ ಪೋಷಕರನ್ನು ಅವರು ಸ್ಮರಿಸಿದರು. ಆಟಗಾರನಾಗಿ ನಿವೃತ್ತನಾದ ನಂತರ ಇವಾನ್ಸ್ ಅವರು ಟೆನಿಸ್ ಪತ್ರಕರ್ತ, ಲೇಖಕರಾಗಿ ಪ್ರಸಿದ್ಧಿ ಪಡೆದಿದ್ದಾರೆ.

ಇಂಟರ್‌ನ್ಯಾಷನಲ್ ಹಾಲ್ ಆಫ್ ಫೇಮ್ ಗೌರವ ಪಡೆದ ಲಿಯಾಂಡರ್ ಪೇಸ್ ಮತ್ತು ವಿಜಯ್ ಅಮೃತರಾಜ್ (ಚಿತ್ರ ಕೃಪೆ: ಎಟಿಪಿ ವೆಬ್‌ಸೈಟ್)

ಭಾರತದ ಯುಕಿ ಭಾಂಬ್ರಿ –ಪಿಟಿಐ ಚಿತ್ರ

## ಎಟಿಪಿ ಡಬಲ್ಸ್: ಭಾಂಬ್ರಿಗೆ ಪ್ರಶಸ್ತಿ

ಗಸ್ಟಾಡ್ (ಸ್ವಿಟ್ಜರ್ಲೆಂಡ್), (ಪಿಟಿಐ): ಭಾರತದ ಯುಕಿ ಭಾಂಬ್ರಿ ಮತ್ತು ಅವರ ಫ್ರೆಂಚ್ ಜೊತೆಗಾರ ಅಲ್ಬನೊ ಒಲಿವಿಟ್ ಅವರು ಸ್ವಿಸ್ ಓಪನ್ ಎಟಿಪಿ ಟೂರ್ ಎನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ನಡೆದ ಎಟಿಪಿ 250 ಕ್ಲೇಕೋರ್ಟ್ ಟೂರ್ನಿಯ ಫೈನಲ್‌ನಲ್ಲಿ ಈ ಜೋಡಿ ಫ್ರಾನ್ಸ್‌ನ ಉಗೊ ಹಂಬರ್ಟ್– ಫ್ಯಾಬ್ರಿಸ್ ಮಾರ್ಟಿನ್ ಜೋಡಿಯನ್ನು 3–6, 6–3, 10–6 ರಿಂದ ಸೋಲಿಸಿತು. ಫೈನಲ್ ಒಂದು ಗಂಟೆ ಆರು ನಿಮಿಷಗಳವರೆಗೆ ನಡೆಯಿತು.

ಇದು 32 ವರ್ಷದ ಭಾಂಬ್ರಿ ಅವರಿಗೆ ಮೂರನೇ ಎಟಿಪಿ ಡಬಲ್ಸ್ ಪ್ರಶಸ್ತಿಯಾಗಿದೆ. ಮತ್ತು ಒಲಿವಿಟ್ ಜೊತೆಗೂಡಿ ಗೆದ್ದ ಎರಡನೇ ಪ್ರಶಸ್ತಿ. ಲಾಯ್ಡ್ ಹ್ಯಾರಿಸ್ ಜೊತೆಗೂಡಿ ಅವರು 2023ರಲ್ಲಿ ಮಲೋರ್ಕಾ ಚಾಂಪಿಯನ್‌ಷಿಪ್ಸ್‌ನಲ್ಲಿ ಪ್ರಶಸ್ತಿ ಗೆದ್ದಿದ್ದರು. ಏಪ್ರಿಲ್‌ನಲ್ಲಿ ನಡೆದ ಬಿಎಂಡಬ್ಲ್ಯು ಓಪನ್‌ನಲ್ಲಿ ಒಲಿವಿಟ್ಟ್ ಜೊತೆ ಪ್ರಶಸ್ತಿ ಜಯಿಸಿದ್ದರು.

ಜೂನ್ 24ರಂದು ಭಾಂಬ್ರಿ ಅವರು ಎಟಿಪಿ ಡಬಲ್ಸ್‌ನಲ್ಲಿ ಅಗ್ರ 50ರೊಳಗೆ ಕ್ರಮಾಂಕ ಪಡೆದಿದ್ದರು. ಅವರು ಈಗ ರ‍್ಯಾಂಕಿಂಗ್ ಅನ್ನು ಮತ್ತಷ್ಟು ಸುಧಾರಿಸಲಿದ್ದಾರೆ.

ಏಷ್ಯಾ ಕಪ್ ಟಿ20: ಹರ್ಮನ್‌ಪ್ರೀತ್, ರಿಚಾ ಅರ್ಧಶತಕಗಳ ಸೊಬಗು • ದೀಪ್ತಿ ಸ್ಪಿನ್ ಮೋಡಿ

# ನಾಲ್ಕರ ಹಂತಕ್ಕೆ ಲಗ್ಗೆಯಿಟ್ಟ ಭಾರತ

ದಂಬುಲಾ (ಪಿಟಿಐ): ಹಾಲಿ ಚಾಂಪಿಯನ್ ಭಾರತ ಮಹಿಳೆಯರ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ನಾಲ್ಕರ ಘಟ್ಟದ ಪ್ರವೇಶವನ್ನು ಖಚಿತಪಡಿಸಿಕೊಂಡಿದೆ.

ಮಹಿಳೆಯರ ಏಷ್ಯಾ ಕಪ್ 2024

ಭಾನುವಾರ ಇಲ್ಲಿ ನಡೆದ ಎ ಗುಂಪಿನ ಎರಡನೇ ಪಂದ್ಯದಲ್ಲಿ ಭಾರತ ತಂಡವು 78 ರನ್‌ಗಳಿಂದ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಯುಎಇ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಹರ್ಮನ್ ಪ್ರೀತ್ ಕೌರ್ (66; 47ಎ, 4x7, 6X1) ಮತ್ತು ರಿಚಾ ಘೋಷ್ (ಔಟಾಗದೆ 64; 29ಎ, 4X12, 6X1) ಅವರ ಅರ್ಧಶತಕಗಳ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 201 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಯುಎಇ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 123 ರನ್ ಗಳಿಸಿತು. ತಂಡದ ಕವೀಶಾ ಎಗೊಡಗೆ (ಔಟಾಗದೆ 40; 32ಎ, 4X3, 6X1) ಅವರ ಆಲ್‌ರೌಂಡ್ ಆಟವು ಗಮನ ಸೆಳೆಯಿತು.

ಭಾರತದ ಸ್ಪಿನ್ನರ್ ದೀಪ್ತಿ ಶರ್ಮಾ (23ಕ್ಕೆ2) ತಮ್ಮ ಉತ್ತಮ ಬೌಲಿಂಗ್‌ನಿಂದ ಯುಎಇ ತಂಡವನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಮಿಂಚಿದ್ದ ಆರಂಭಿಕ ಜೋಡಿ ಶಫಾಲಿ ವರ್ಮಾ ಮತ್ತು ಸ್ಮೃತಿ ಮಂದಾನ ಅವರಿಂದ ದೊಡ್ಡ ಜೊತೆಯಾಟ ದಾಖಲಾಗಲಿಲ್ಲ. 3ನೇ ಓವರ್‌ನಲ್ಲಿ ಕವೀಶಾ ಎಸೆತದಲ್ಲಿ ಸ್ಮೃತಿ ಮಂದಾನ ಔಟಾದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ಕೇವಲ 23 ರನ್‌ಗಳು ಗಳಿಕೆಯಾದವು.

6ನೇ ಓವರ್ ಮುಗಿಯುವ ಮುನ್ನವೇ ಶಫಾಲಿ ವರ್ಮಾ ಮತ್ತು ಹೇಮಲತಾ ದಯಾಳನ್ ಕೂಡ ಪೆವಿಲಿಯನ್ ಸೇರಿದರು. ಆಗ ತಂಡದ ಮೊತ್ತವು (3ಕ್ಕೆ52) ಅರ್ಧಶತಕ ದಾಟಿತ್ತಷ್ಟೇ. ಈ ಹಂತದಲ್ಲಿ ಜವಾಬ್ದಾರಿಯುತ ಆಟವಾಡಿದ ಕೌರ್ ಅವರು ಜೆಮಿಮಾ ರಾಡ್ರಿಗಸ್ (14; 13ಎ) ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಇದರೊಂದಿಗೆ ತಂಡವು ಶತಕದ ಗಡಿ ದಾಟಿತು.

ಮತ್ತೆ ಮಿಂಚಿದ ಕವೀಶಾ ಎಸೆತದಲ್ಲಿ ಜೆಮಿಮಾ ಔಟಾದರು. ಇದರೊಂದಿಗೆ ಜೊತೆಯಾಟ ಮುರಿಯಿತು. ಯುಎಇ ಆಟಗಾರ್ತಿಯರ ಸಂಭ್ರಮಿಸಿದರು. ಆದರೆ ಕ್ರೀಸ್‌ನಲ್ಲಿದ್ದ ಕೌರ್ ಅವರೊಂದಿಗೆ ರಿಚಾ ಘೋಷ್ ಜೊತೆಯಾದ ನಂತರ ಯುಎಇಗೆ ಸಂಭ್ರಮಿಸುವ ಅವಕಾಶ ಸಿಗಲಿಲ್ಲ. ಕೌರ್ ಮತ್ತು ರಿಚಾ (ಔಟಾಗದೆ 64; 29ಎ, 4X12, 6X1) ಐದನೇ ವಿಕೆಟ್ ಜೊತೆಯಾಟದಲ್ಲಿ 75 ರನ್ ಸೇರಿಸಿದರು. ಕೊನೆಯ ಓವರ್‌ನಲ್ಲಿ ಹರ್ಮನ್ ರನೌಟ್ ಆಗುವುದರೊಂದಿಗೆ ಈ ಜೊತೆಯಾಟ ಮುರಿದುಬಿತ್ತು.

ಭಾರತ ತಂಡವು ಎ ಗುಂಪಿನಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಜಯಿಸಿದೆ. ಒಟ್ಟು 4 ಅಂಕ ಮತ್ತು +3.298 ನೆಟ್ ರನ್‌ರೇಟ್ ಗಳಿಸಿದೆ. ತನ್ನ ಪಾಲಿನ ಇನ್ನೊಂದು ಮತ್ತು ಕೊನೆಯ ಪಂದ್ಯದಲ್ಲಿ ಭಾರತವು ನೇಪಾಳದ ವಿರುದ್ಧ ಮಂಗಳವಾರ ಆಡಲಿದೆ.

**ಸಂಕ್ಷಿಪ್ತ ಸ್ಕೋರು: ಭಾರತ:** 20 ಓವರ್‌ಗಳಲ್ಲಿ 5ಕ್ಕೆ 201 (ಶಫಾಲಿ ವರ್ಮಾ 37, ಹರ್ಮನ್‌ಪ್ರೀತ್ ಕೌರ್ 66, ರಿಚಾ ಘೋಷ್ ಔಟಾಗದೆ 64, ಕವೀಶಾ ಎಗೊಡಗೆ 36ಕ್ಕೆ2) **ಯುಎಇ:** 20 ಓವರ್‌ಗಳಲ್ಲಿ 7ಕ್ಕೆ123 (ಇಶಾ ರೋಹಿತ್ ಒಝಾ 38, ಕವೀಶಾ ಎಗೊಡಗೆ ಔಟಾಗದೆ 40, ದೀಪ್ತಿ ಶರ್ಮಾ 23ಕ್ಕೆ2) **ಫಲಿತಾಂಶ:** ಭಾರತ ತಂಡಕ್ಕೆ 78 ರನ್‌ಗಳ ಜಯ.

ಭಾರತ ಮಹಿಳೆಯರ ಕ್ರಿಕೆಟ್ ತಂಡದ ರಿಚಾ ಘೋಷ್ ಮತ್ತು ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ

### ಇಂದಿನ ಪಂದ್ಯಗಳು

| | | |
|---|---|---|
| ಶ್ರೀಲಂಕಾ Vs ಮಲೇಷ್ಯಾ | | ಮಧ್ಯಾಹ್ನ 2 |
| ಬಾಂಗ್ಲಾದೇಶ Vs ಥಾಯ್ಲೆಂಡ್ | | ರಾತ್ರಿ 7 |
| ಲೈವ್ | ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್ | |

## ಶ್ರೇಯಾಂಕಾಗೆ ಗಾಯ, ತನುಜಾಗೆ ಅವಕಾಶ

ದಂಬುಲಾ (ಪಿಟಿಐ): ಭಾರತದ ಯುವ ಸ್ಪಿನ್ನರ್, ಕನ್ನಡತಿ ಶ್ರೇಯಾಂಕಾ ಪಾಟೀಲ ಅವರು ಬೆರಳಿನ ಮೂಳೆ ಮುರಿತದಿಂದ ಮಹಿಳಾ ಏಷ್ಯಾ ಕಪ್ ಟಿ20 ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಕ್ಯಾಚ್ ಒಂದನ್ನು ಪಡೆಯುವ ಪ್ರಯತ್ನದಲ್ಲಿ ಅವರ ಉಂಗುರದ ಬೆರಳಿಗೆ ಗಾಯವಾಗಿದೆ. ಅವರ ಬದಲಿಗೆ ತನುಜಾ ಕನ್ವರ್ ತಂಡವನ್ನ ಸೇರಿಕೊಳ್ಳಲಿದ್ದಾರೆ ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಪ್ರಕಟಣೆಯಲ್ಲಿ ತಿಳಿಸಿದೆ. 21 ವರ್ಷದ ಶ್ರೇಯಾಂಕಾ, ಪಾಕ್ ವಿರುದ್ಧದ ಆ ಪಂದ್ಯದಲ್ಲಿ 3.2 ಓವರುಗಳಲ್ಲಿ 14 ರನ್ನಿಗೆ 2 ವಿಕೆಟ್ ಪಡೆದಿದ್ದರು. ಎಡಗೈ ಸ್ಪಿನ್ನರ್ ಆಗಿರುವ ತನುಜಾ ಕನ್ವರ್ ಅವರು ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಗುಜರಾತ್ ಜೈಂಟ್ಸ್‌ಗೆ ಆಡಿದ್ದರು. 26 ವರ್ಷದ ಈ ಆಟಗಾರ್ತಿ ಇದುವರೆಗೆ ರಾಷ್ಟ್ರೀಯ ತಂಡಕ್ಕೆ ಆಡಿಲ್ಲ.

## ಪಾಕ್ ವನಿತೆಯರಿಗೆ ಸುಲಭ ಜಯ

ದಂಬುಲಾ (ಪಿಟಿಐ): ಆರಂಭ ಆಟಗಾರ್ತಿಯರಾದ ಗುಲ್ ಫಿರೋಜಾ ಅವರ ಅರ್ಧ ಶತಕ (57, 35ಎ, 4x10) ಮತ್ತು ಮುನೀಬಾ ಅಲಿ (ಔಟಾಗದೇ 46) ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಪಾಕಿಸ್ತಾನ ತಂಡ ಮಹಿಳಾ ಏಷ್ಯಾ ಕಪ್ ಟಿ20 ಲೀಗ್ ಪಂದ್ಯದಲ್ಲಿ ನೇಪಾಳ ತಂಡದ ಮೇಲೆ 9 ವಿಕೆಟ್‌ಗಳ ನಿರಾಯಾಸ ಜಯ ಸಾಧಿಸಿತು.

ಭಾನುವಾರ ನಡೆದ ಈ ಪಂದ್ಯದಲ್ಲಿ ಮೊದಲು ಆಡಿದ ನೇಪಾಳ 20 ಓವರುಗಳಲ್ಲಿ 6 ವಿಕೆಟ್‌ಗೆ 108 ರನ್ ಗಳಿಸಲಷ್ಟೇ ಶಕ್ತವಾಯಿತು. ಆರಂಭ ಆಟಗಾರ್ತಿ ಸೀತಾ ರಾಣಾ (26), ಪೂಜಾ ಮಹತೊ (25) ಮತ್ತು ಕೊನೆಯಲ್ಲಿ ಕಬಿತಾ ಜೋಶಿ (ಔಟಾಗದೇ 31, 23ಎ) ಅಲ್ಪ ಕೊಡುಗೆ ನೀಡಿದರು. ಪಾಕ್ ಕಡೆ ಎಡಗೈ ಸ್ಪಿನ್ನರ್ ಸಾದಿಯಾ ಇಕ್ಬಾಲ್ 19 ರನ್ನಿಗೆ 2 ವಿಕೆಟ್ ಉರುಳಿಸಿದರು.

ಆದರೆ ಪಾಕಿಸ್ತಾನ ಕೇವಲ 11.5 ಓವರುಗಳಲ್ಲಿ 1 ವಿಕೆಟ್‌ಗೆ 110 ರನ್ ಹೊಡೆದು ರನ್ ರೇಟ್ ಅನ್ನು ಸಾಕಷ್ಟು ಸುಧಾರಿಸಿಕೊಂಡಿತು. ಫಿರೋಜಾ ಮತ್ತು ಮುನೀಬಾ ಮೊದಲ ವಿಕೆಟ್‌ಗೆ ಕೇವಲ 67 ಎಸೆತಗಳಲ್ಲಿ 105 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ನೇಪಾಳ: 20 ಓವರುಗಳಲ್ಲಿ 6 ವಿಕೆಟ್‌ಗೆ 108 (ಕಬಿತಾ ಜೋಶಿ ಔಟಾಗದೇ 41, ಸೀತಾ ರಾಣಾ ಮಾಗರ್ 26; ಸಾದಿಕ್ ಇಕ್ಬಾಲ್ 19ಕ್ಕೆ2); ಪಾಕಿಸ್ತಾನ: 11.5 ಓವರುಗಳಲ್ಲಿ 1 ವಿಕೆಟ್‌ಗೆ 110 (ಗುಲ್ ಫಿರೋಜಾ 57, ಮುನೀಬಾ ಅಲಿ ಔಟಾಗದೇ 46). ಪಂದ್ಯದ ಆಟಗಾರ್ತಿ: ಗುಲ್ ಫಿರೋಜಾ.

ಗೌರವ ಸಲ್ಲಿಕೆ

## ಒಲಿಂಪಿಕ್ಸ್ ಜ್ಯೋತಿ

ಪ್ಯಾರಿಸ್‌ನಲ್ಲಿ ಭಾನುವಾರ ನಡೆದ ಒಲಿಂಪಿಕ್ ಜ್ಯೋತಿ ರಿಲೆಯಲ್ಲಿ ಎಎಫ್‌ಪಿ ಫೋಟೊ ಜರ್ನಲಿಸ್ಟ್ ಕ್ರಿಸ್ಟಿನಾ ಅಸ್ಸಿ ಪಾಲ್ಗೊಂಡರು. ಗಾಲಿಕುರ್ಚಿಯಲ್ಲಿದ್ದ ಅವರಿಗೆ ಎಎಫ್‌ಪಿ ಪತ್ರಕರ್ತ ಡೈಲನ್ ಕಾಲಿನ್ಸ್ ನೆರವಾದರು. 2023ರ ಅಕ್ಟೋಬರ್ 13ರಂದು ದಕ್ಷಿಣ ಲೆಬನಾನ್‌ನಲ್ಲಿದ್ದ ಪತ್ರಕರ್ತರ ಗುಂಪಿನ ಮೇಲೆ ಇಸ್ರೇಲ್ ಟ್ಯಾಂಕ್ ನಡೆಸಿದ್ದ ದಾಳಿಯಲ್ಲಿ ಕ್ರಿಸ್ಟಿನಾ ಮತ್ತು ಕಾಲಿನ್ಸ್ ಗಾಯಗೊಂಡಿದ್ದು, ಅವರಿಗೆ ಗೌರವ ಸಲ್ಲಿಸಲಾಯಿತು –ಎಎಫ್‌ಪಿ ಚಿತ್ರ

ಗಾಯದ ಸಮಸ್ಯೆ ಕಾಡುತ್ತಿಲ್ಲ ಎಂದ ಕೋಚ್ ಕ್ಲಾಸ್

# 'ಚೋಪ್ರಾ ಸಂಪೂರ್ಣ ಫಿಟ್'

ನವದೆಹಲಿ (ಪಿಟಿಐ): ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರನ್ನು ಕಾಡುತ್ತಿದ್ದ ತೊಡೆ ಸಂಧುವಿನ ನೋವು ಈಗ ಇಲ್ಲ. ಅವರು ಚೆನ್ನಾಗಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ಅಂತಿಮ ಹಂತದ ತರಬೇತಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ ಎಂದು ಅವರ ತರಬೇತುದಾರ, ಜರ್ಮನಿಯ ಕ್ಲಾಸ್ ಬಾರ್ಟೊನೀಜ್ ಹೇಳಿದ್ದಾರೆ.

ನೀರಜ್ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ (2020) ಜಾವೆಲಿನ್ ಥ್ರೋನಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ್ದರು. ಇದೇ 26ರಿಂದ ಶುರುವಾಗಲಿರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿಯೂ ಅವರು ಚಿನ್ನ ಗೆಲ್ಲುವ ನೆಚ್ಚಿನ ಅಥ್ಲೀಟ್ ಆಗಿದ್ದಾರೆ. ಆದರೆ ಈಚೆಗೆ ಅವರಿಗೆ ತೊಡೆಯ ಗಾಯ ಕಾಡಿತ್ತು. ಆದ್ದರಿಂದ ಅವರ ಸಾಮರ್ಥ್ಯದ ಕುರಿತ ಆತಂಕವೂ ಎದುರಾಗಿತ್ತು. ಇದೀಗ ಕ್ಲಾಸ್ ಅವರು 'ಯಾವುದೇ ತೊಂದರೆ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ನಾವು ಯೋಜಿಸಿದಂತೆಯೇ ಎಲ್ಲವೂ ನಡೆದಿದೆ. ಈ ಕ್ಷಣದಲ್ಲಿಯೂ ಅವರಿಗೆ ತೊಂದರೆ (ತೊಡೆ ಸಂಧುವಿನ ಲಘು ನೋವು) ಇಲ್ಲ. ಒಲಿಂಪಿಕ್ಸ್ ಮುಗಿಯುವವರೆಗೂ ಇದೇ ಸ್ಥಿತಿ ಮುಂದುವರೆಯುವ ಭರವಸೆ ಇದೆ' ಎಂದು ಕ್ಲಾಸ್ ಹೇಳಿದ್ದಾರೆ.

ಹೋದ ಮೇ 28ರಂದು ಒಸ್ತಾವಾ ಗೋಲ್ಡನ್ ಸ್ಪೈಕ್ ಅಥ್ಲೆಟಿಕ್ಸ್‌ನಿಂದ ನೀರಜ್ ಹಿಂದೆ ಸರಿದಿದ್ದರು. ತೊಡೆ ಸಂಧುವಿನ ಸ್ನಾಯುವಿನಲ್ಲಿ ಸಣ್ಣಪ್ರಮಾಣದ ಸೆಳೆತವಿದ್ದ ಕಾರಣ ಅವರು ಈ ನಿರ್ಧಾರ ಕೈಗೊಂಡಿದ್ದರು. ಅದಾದ ನಂತರ ಅವರು ಜೂನ್ 18ರಂದು ಫಿನ್ಲೆಂಡ್‌ನಲ್ಲಿ ನಡೆದ ಪಾವೊ ನುರ್ಮಿ ಗೇಮ್ಸ್‌ನಲ್ಲಿ ಸ್ಪರ್ಧಿಸಿ, ಚಿನ್ನ ಜಯಿಸಿದ್ದರು. ಆದರೆ ಜುಲೈ 7ರಂದು ನಡೆದ ಪ್ಯಾರಿಸ್ ಡೈಮಂಡ್ ಲೀಗ್‌ನಿಂದ ಹೊರಗುಳಿದರು. ಈ ವರ್ಷದ ಕ್ಯಾಲೆಂಡರ್‌ನಲ್ಲಿ ಪೂರ್ವನಿಗದಿತ ಸ್ಪರ್ಧೆ ಇದಾಗಿರಲಿಲ್ಲ. ಒಲಿಂಪಿಕ್ ಕೂಟದಲ್ಲಿ ಚೋಪ್ರಾ ಅವರ ಸ್ಪರ್ಧೆಯು ಆಗಸ್ಟ್ 6ರಂದು ನಡೆಯಲಿದೆ.

'ಸ್ಪ್ರಿಂಟಿಂಗ್, ಜಂಪಿಂಗ್ ಮತ್ತು ಥ್ರೋಯಿಂಗ್ ವಿಭಾಗಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಬೆಳಿಗ್ಗೆಯ ಅವಧಿಯಲ್ಲಿ ಥ್ರೋಯಿಂಗ್ ಅಥವಾ ವೇಟ್‌ಲಿಫ್ಟಿಂಗ್ ತಾಲೀಮು ನಡೆಸಲಾಗುತ್ತದೆ. ಸಂಜೆಯೂ ಒಂದು ಅವಧಿಯಲ್ಲಿ ತರಬೇತಿ ನಡೆಸಲಾಗುತ್ತದೆ. ಪ್ರತಿ ಅವಧಿಯೂ ಎರಡರಿಂದ ಎರಡೂವರೆ ಗಂಟೆಯದ್ದಾಗಿರುತ್ತದೆ' ಎಂದು ಕ್ಲಾಸ್ ವಿವರಿಸಿದರು.

'ಈ ಕ್ರೀಡೆಯಲ್ಲಿ ನಿಧಾನವಾಗಿ ಓಡಿ ಹೋಗಿ ಜಾವೆಲಿನ್ ಅನ್ನು ದೂರದವರೆಗೆ ಎಸೆಯುವುದು ಸಾಧ್ಯವಿಲ್ಲ. ಆದ್ದರಿಂದ ವೇಗದ ಓಟವೊಂದೇ ಪರಿಹಾರ. ಅದಕ್ಕಾಗಿ ತೊಡೆಯಲ್ಲಿ ಅಪಾರ ಸಾಮರ್ಥ್ಯ ಇರಬೇಕು. ಆದ್ದರಿಂದ ಅವರ ಗಾಯ ಶಮನವಾಗಿರುವುದು ಒಳ್ಳೆಯ ಲಕ್ಷಣ' ಎಂದೂ ಅವರು ಹೇಳಿದರು.

ಕ್ಲಾಸ್ ಅವರು ಬಯೋ ಮೆಕ್ಯಾನಿಕ್ಸ್ ಪರಿಣತರೂ ಆಗಿದ್ದಾರೆ.

ನೀರಜ್ ಚೋಪ್ರಾ –ಎಎಫ್‌ಪಿ ಚಿತ್ರ

## ಭಾರತದ ಕ್ರೀಡಾಪಟುಗಳಿಗೆ ಬಿಸಿಸಿಐ ₹8.5 ಕೋಟಿ ನೆರವು

ನವದೆಹಲಿ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಕ್ರೀಡಾಪಟುಗಳಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ₹ 8.5 ಕೋಟಿ ಪ್ರೋತ್ಸಾಹಧನ ಘೋಷಿಸಿದೆ.

ಈ ಕುರಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಭಾನುವಾರ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ನಮ್ಮ ಕ್ರೀಡಾಪಟುಗಳನ್ನು ಬೆಂಬಲಿಸಲು ಬಿಸಿಸಿಐ ಹೆಮ್ಮೆಪಡುತ್ತದೆ. ಭಾರತದ ಅಭಿಯಾನಕ್ಕಾಗಿ ನಾವು ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ₹8.5 ಕೋಟಿ ನೆರವನ್ನು ಒದಗಿಸುತ್ತೇವೆ. ನಮ್ಮ ಇಡೀ ತಂಡಕ್ಕೆ ಶುಭ ಹಾರೈಕೆಗಳು ಮತ್ತು ಭಾರತ ಹೆಮ್ಮೆಪಡುವಂತೆ ಮಾಡಿ' ಎಂದು ಅವರು ಬರೆದಿದ್ದಾರೆ.

ಇದೇ 26ರಂದು ಆರಂಭವಾಗುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ 117 ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಜೊತೆಗೆ 140 ನೆರವು ಸಿಬ್ಬಂದಿ ಇದ್ದಾರೆ.

## ಕುಸ್ತಿ: ಡಿಪ್ಲೊಮಾ ಕೋಚಿಂಗ್ ಕೋರ್ಸ್‌ಗೆ ರಫೀಕ್ ಹೊಳಿ ಆಯ್ಕೆ

ದಾವಣಗೆರೆ: ಕಾಮನ್‌ವೆಲ್ತ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿಯ ಪದಕ ಗೆದ್ದಿರುವ ಕರ್ನಾಟಕದ ಪೈಲ್ವಾನ ರಫೀಕ್ ಹೊಳಿ ಅವರು ಭಾರತ ಕ್ರೀಡಾ ಪ್ರಾಧಿಕಾರದಿಂದ ಆಯೋಜಿಸುವ ಡಿಪ್ಲೊಮಾ ಕೋಚಿಂಗ್ ಕೋರ್ಸ್‌ಗೆ ಆಯ್ಕೆಯಾಗಿದ್ದಾರೆ.

ದೇಶದ ವಿವಿಧ ರಾಜ್ಯಗಳ ಕ್ರೀಡಾಪಟುಗಳು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಪೈಕಿ 25 ಮಂದಿಯನ್ನು ಅವರ ಸಾಧನೆಯ ಮಾನದಂಡದ ಆಧಾರದಲ್ಲಿ ಆಯ್ಕೆ ಮಾಡಲಾಗಿದೆ. ಅದರಲ್ಲಿ ಕರ್ನಾಟಕದಿಂದ ಆಯ್ಕೆಯಾಗಿರುವ ಏಕೈಕ ಕ್ರೀಡಾಪಟು ರಫೀಕ್ ಆಗಿದ್ದಾರೆ. ಪಂಜಾಬ್‌ನ ಪಟಿಯಾಲದಲ್ಲಿ ಸೋಮವಾರದಿಂದ ತರಬೇತಿ ಆರಂಭವಾಗಲಿದೆ ಎಂದು ಸಾಯ್ ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ. ಧಾರವಾಡದ ರಫೀಕ್ ಅವರು ದಾವಣಗೆರೆಯ ಕ್ರೀಡಾ ಶಾಲೆಯಲ್ಲಿದ್ದುಕೊಂಡು ಕುಸ್ತಿ ತರಬೇತಿ ಪಡೆದಿದ್ದರು. ವಿಶ್ವ ಚಾಂಪಿಯನ್‌ಷಿಪ್ ಸೇರಿದಂತೆ ಹಲವು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದರು. ಇವರು ಸದ್ಯ ಪುಣೆಯ ಡಿಫೆನ್ಸ್ ಅಕಾಡೆಮಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

## ಮೌಂಟ್ಸ್ ಕ್ಲಬ್ ತಂಡಕ್ಕೆ ಗೆಲುವು

ಬೆಂಗಳೂರು: ಪಾವನಿ (26), ನಿಲಯಾ (17) ಮತ್ತು ನಿಹಾರಿಕಾ (18) ಅವರ ಆಟದ ಬಲದಿಂದ ಮೌಂಟ್ಸ್ ಕ್ಲಬ್ ತಂಡವು ರಾಜ್ಯ ಮಹಿಳೆಯರ ಬ್ಯಾಸ್ಕೆಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಲೀಗ್‌ನ ಪಂದ್ಯದಲ್ಲಿ 84–65ರಿಂದ ಡಿವೈಇಎಸ್ ಮೈಸೂರು ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬೀಗಲ್ಸ್ ಬಿ.ಸಿ. ತಂಡವು 65–49ರಿಂದ ಜೆಎಸ್‌ಸಿ ತಂಡವನ್ನು ಸೋಲಿಸಿತು. ಸೋಮವಾರ ಫೈನಲ್ ಲೀಗ್ ಪಂದ್ಯಗಳು ನಡೆಯಲಿವೆ.

## ಫಾರ್ಮುಲಾ 2: ಕುಶ್‌ಗೆ ಪ್ರಶಸ್ತಿ

ಬುಡಾಪೆಸ್ಟ್ (ಪಿಟಿಐ): ಭಾರತದ ಯುವ ಚಾಲಕ ಕುಶ್ ಮೈನಿ ಅವರು ಹಂಗೇರಿಯನ್ ಗ್ರ್ಯಾನ್‌ಪ್ರೀ ರೇಸ್‌ನಲ್ಲಿ ತಮ್ಮ ವೃತ್ತಿಜೀವನದಲ್ಲೇ ಚೊಚ್ಚಲ ಫಾರ್ಮುಲಾ 2 ಸ್ಪ್ರಿಂಟ್ ರೇಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ನೆದರ್ಲೆಂಡ್ಸ್‌ನ ರಿಚರ್ಡ್ ವರ್ಸ್ಚೂರ್ ಅವರನ್ನು ಆರಂಭದಲ್ಲಿ ವಿಜೇತರೆಂದು ಘೋಷಿಸಲಾಗಿತ್ತು. ಆದರೆ, ತಾಂತ್ರಿಕ ಉಲ್ಲಂಘನೆಯ ಕಾರಣ ಅವರು ಅನರ್ಹಗೊಂಡಿದ್ದರಿಂದ ನಂತರದ ಸ್ಥಾನದಲ್ಲಿದ್ದ 23 ವರ್ಷದ ಕುಶ್ ಅವರಿಗೆ ಪ್ರಶಸ್ತಿ ಒಲಿಯಿತು.

ಪ್ರಸಕ್ತ ಋತುವಿನಲ್ಲಿ ಕುಶ್ ಅವರು ಐದನೇ ಬಾರಿ 'ಪೋಡಿಯಂ ಫಿನಿಷ್' ಮಾಡಿದ್ದು, ಎಫ್2 ಗ್ರಿಡ್‌ನಲ್ಲಿರುವ ಭಾರತದ ಏಕೈಕ ಚಾಲಕ ಅವರಾಗಿದ್ದಾರೆ. ಈ ಪ್ರಶಸ್ತಿಯೊಂದಿಗೆ ಅವರು ಋತುವಿನ ಪಾಯಿಂಟ್ಸ್‌ಗೆ 10 ಅಂಕಗಳನ್ನು ಸೇರಿಸಿದರು.

ಟ್ರೋಫಿಯೊಂದಿಗೆ ಕುಶ್ ಮೈನಿ –ಎಕ್ಸ್ ಚಿತ್ರ

'ನನ್ನ ಮತ್ತು ತಂಡದ ಹೋರಾಟಕ್ಕೆ ದೊರೆತ ಪ್ರತಿಫಲ ಇದಾಗಿದೆ. ನನ್ನೊಂದಿಗೆ ಉತ್ತಮ ತಂಡ ಇರುವುದರಿಂದ ಈ ಸಾಧನೆ ಸಾಧ್ಯವಾಗಿದೆ' ಎಂದು ಬೆಂಗಳೂರಿನ ಕುಶ್ ಮೈನಿ ಹೇಳಿದ್ದಾರೆ.

ಟ್ರೋಫಿಯೊಂದಿಗೆ ಶಾಂತಿನಗರ ವಿಧಾನಸಭಾ ಕ್ಷೇತ್ರ ತಂಡದ ಆಟಗಾರರು ಸಂಭ್ರಮಿಸಿದರು.

## ಶಾಂತಿನಗರ ತಂಡಕ್ಕೆ ಮುಖ್ಯಮಂತ್ರಿ ಕಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಂತಿನಗರ ವಿಧಾನಸಭಾ ಕ್ಷೇತ್ರ ತಂಡವು ಕೆಎಸ್‌ಎಫ್‌ಎ ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಸಿ.ವಿ.ರಾಮನ್‌ನಗರ ವಿಧಾನಸಭಾ ಕ್ಷೇತ್ರ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಸೋಲಿಸಿ, ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ರೋಚಕ ಪಂದ್ಯವು 1–1 ಗೋಲುಗಳಿಂದ ಡ್ರಾಗೊಂಡಿತ್ತು. ನಂತರ ಪೆನಾಲ್ಟಿ ಶೂಟೌಟ್‌ನಲ್ಲಿ 5–4ರಿಂದ ಶಾಂತಿನಗರ ತಂಡವು ಜಯ ಸಾಧಿಸಿತು. ಶಾಂತಿನಗರ ತಂಡದ ಪರ ವಿಘ್ನೇಶ್ (61ನೇ ನಿಮಿಷ) ಮತ್ತು ಸಿ.ವಿ. ರಾಮನ್‌ನಗರ ತಂಡದ ಪರ ನಿಖಿಲ್ ರಾಜ್ ಎಂ. (35+2ನೇ ನಿ) ಗೋಲು ಗಳಿಸಿದರು.

ಕೆಎಸ್‌ಎಫ್‌ಎ ಅಧ್ಯಕ್ಷ ಎನ್.ಎ. ಹ್ಯಾರಿಸ್, ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜು ಮತ್ತು ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಸುನಿಲ್ ಚೆಟ್ರಿ ಅವರು ವಿಜೇತ ತಂಡಕ್ಕೆ ಟ್ರೋಫಿ ಹಸ್ತಾಂತರಿಸಿದರು.

## ಟೆಸ್ಟ್: ಇಂಗ್ಲೆಂಡ್‌ಗೆ ಸರಣಿ ಮುನ್ನಡೆ

ನಾಟಿಂಗ್‌ಹ್ಯಾಮ್ (ಎಎಫ್‌ಪಿ): ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಪಡೆದಿದ್ದ ವೆಸ್ಟ್‌ಇಂಡೀಸ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ ನಾಟಕೀಯ ಕುಸಿತಕ್ಕೆ ಒಳಗಾಗಿ ಇಂಗ್ಲೆಂಡ್ ವಿರುದ್ಧದ ಎರಡನೇ ಟೆಸ್ಟ್‌ನಲ್ಲಿ 241 ರನ್‌ಗಳ ಸೋಲು ಅನುಭವಿಸಿತು.

ಮೂರು ಪಂದ್ಯಗಳ ಸರಣಿಯನ್ನು ಆತಿಥೇಯ ತಂಡವು ಒಂದು ಪಂದ್ಯ ಬಾಕಿ ಇರುವಂತೆ ಗೆದ್ದುಕೊಂಡಿತು. ಮೊದಲ ಟೆಸ್ಟ್‌ನಲ್ಲಿ ಇಂಗ್ಲೆಂಡ್ ಇನಿಂಗ್ಸ್ ಮತ್ತು 114 ರನ್‌ಗಳಿಂದ ಜಯ ಸಾಧಿಸಿತ್ತು. ಅಂತಿಮ ಟೆಸ್ಟ್ ಶುಕ್ರವಾರ ಆರಂಭವಾಗಲಿದೆ.

ಪಂದ್ಯದ ನಾಲ್ಕನೇ ದಿನವಾದ ಭಾನುವಾರ ಗೆಲುವಿಗೆ 385 ರನ್‌ಗಳ ಗುರಿಯನ್ನು ಪಡೆದ ವಿಂಡೀಸ್ ತಂಡವು 36.1 ಓವರ್‌ಗಳಲ್ಲಿ 143 ರನ್ ಗಳಿಸಿ ಆಲೌಟ್ ಆಯಿತು. ಆಫ್ ಸ್ಪಿನ್ನರ್ ಶೋಯೆಬ್ ಬಶೀರ್ 41 ರನ್‌ಗೆ ಐದು ವಿಕೆಟ್ ಪಡೆದು ಮಿಂಚಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ ಆಗಿದೆ.

ಮೊದಲ ಇನಿಂಗ್ಸ್‌ನಲ್ಲಿ 41 ರನ್‌ಗಳ ಹಿನ್ನಡೆ ಅನುಭವಿಸಿದ್ದ ಇಂಗ್ಲೆಂಡ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 425 ರನ್ ಕಲೆಹಾಕಿತು. ಜೋ ರೂಟ್ (122) ಮತ್ತು ಹ್ಯಾರಿ ಬ್ರೂಕ್ (109) ಶತಕದೊಂದಿಗೆ ಅಬ್ಬರಿಸಿದರು. ಒಟ್ಟು 172 ರನ್ ಗಳಿಸಿದ ಓಲಿ ಪೋಪ್ ಪಂದ್ಯದ ಆಟಗಾರ ಗೌರವಕ್ಕೆ ಪಾತ್ರವಾದರು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್: ಇಂಗ್ಲೆಂಡ್: 88.3 ಓವರ್‌ಗಳಲ್ಲಿ 416. ವೆಸ್ಟ್ ಇಂಡೀಸ್: 111.5 ಓವರ್‌ಗಳಲ್ಲಿ 457. ಎರಡನೇ ಇನಿಂಗ್ಸ್: ಇಂಗ್ಲೆಂಡ್: 92.2 ಓವರ್‌ಗಳಲ್ಲಿ 425 (ಜೋ ರೂಟ್ 122, ಹ್ಯಾರಿ ಬ್ರೂಕ್ 109; ಜೇಡನ್ ಸೀಲ್ಸ್ 97ಕ್ಕೆ 4). ವೆಸ್ಟ್‌ಇಂಡೀಸ್: 36.1 ಓವರ್‌ಗಳಲ್ಲಿ 143 (ಕ್ರೈಗ್ ಬ್ರಾಥ್‌ವೈಟ್ 47; ಶೋಯೆಬ್ ಬಶೀರ್ 41ಕ್ಕೆ 5). **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 241 ರನ್ ಜಯ, ಸರಣಿ 2–0 ಮುನ್ನಡೆ.

## ಟಿಟಿ: 3ನೇ ಪದಕಕ್ಕೆ ಮುತ್ತಿಟ್ಟ ತನಿಷ್ಕಾ

ಮೈಸೂರು: ಅಗ್ರ ಶ್ರೇಯಾಂಕದ ಆಟಗಾರ್ತಿ ಬೆಳಗಾವಿಯ ತನಿಷ್ಕಾ ಕಪಿಲ್ ಕಾಲಭೈರವ ಭಾನುವಾರ ಇಲ್ಲಿ ಮುಕ್ತಾಯಗೊಂಡ 3ನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ 13 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಪ್ರದರ್ಶನದ ಮೂಲಕ ಟೂರ್ನಿಯಲ್ಲಿ ತಮ್ಮ ಮೂರನೇ ಪದಕಕ್ಕೆ ಮುತ್ತಿಟ್ಟರು.

ಫೈನಲ್ ಪಂದ್ಯದಲ್ಲಿ ತನಿಷ್ಕಾ 11-1, 11-7, 11-1 ಅಂತರದಿಂದ ಮಿಹಿಕಾ ಉಡುಪ ಎದುರು ಅಧಿಕಾರಯುತ ಗೆಲುವು ದಾಖಲಿಸಿದರು. ಪಂದ್ಯದ ಯಾವ ಹಂತದಲ್ಲೂ ತಮ್ಮ ಎದುರಾಳಿಗೆ ಪ್ರತಿರೋಧ ತೋರುವ ಅವಕಾಶವನ್ನೇ ನೀಡಲಿಲ್ಲ. ಸೆಮಿಫೈನಲ್‌ನಲ್ಲಿ ತನಿಷ್ಕಾ ಸಾಕ್ಷ್ಯ ಸಂತೋಷ್‌ರನ್ನು ಹಾಗೂ ಮಿಹಿಕಾ ಇರಾನೆ ಸುಭಾಷ್‌ರನ್ನು ಮಣಿಸಿ ಫೈನಲ್ ಪ್ರವೇಶಿಸಿದ್ದರು. ಟೂರ್ನಿಯ ಬಾಲಕಿಯರ 15 ಹಾಗೂ 17 ವರ್ಷದ ಒಳಗಿನವರ ವಿಭಾಗದಲ್ಲೂ ತನಿಷ್ಕಾ ಅಗ್ರ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು.

ಇದೇ ವಯೋಮಾನದ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಶ್ರೀರಾಮ್ ಕಿರಣ್ 11-7, 9-11, 11-6, 11-3ರಿಂದ ಎಂ. ಸಿದ್ಧಾರ್ಥರನ್ನು ಮಣಿಸಿ ಪ್ರಶಸ್ತಿ ಎತ್ತಿ ಹಿಡಿದರು. ತೀವ್ರ ಪೈಪೋಟಿಯಿಂದ ಕೂಡಿದ್ದ ಹೋಪ್ಸ್ (11 ವರ್ಷದೊಳಗಿನವರ) ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಎಂ. ಆದ್ಯಾ 11-5, 10-12, 15-13, 11-13, 11-7ರಿಂದ ಸಾಕ್ಷ್ಯ ಸಂತೋಷ್ ಅವರನ್ನು ಪರಾಭವಗೊಳಿಸಿ ಪ್ರಶಸ್ತಿ ಎತ್ತಿ ಹಿಡಿದರು. ಇದೇ ವಿಭಾಗದ ಬಾಲಕರ ಫೈನಲ್‌ನಲ್ಲಿ ಸುಚೇತ್ ಧರೆಣ್ಣವರ 7-11, 11-4, 11-8, 13-11 ರಲ್ಲಿ ಆರ್ಣವ್ ಮಿಥುನ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಟೂರ್ನಿಯ ವಿಜೇತರಾದ ಆದ್ಯಾ, ಸುಚೇತ್ ಧರೆಣ್ಣವರ್, ಶ್ರೀರಾಂ ಕಿರಣ್ ಹಾಗೂ ತನಿಷ್ಕಾ ಕಪಿಲ್ ಕಾಲಭೈರವ ಪ್ರಶಸ್ತಿಯೊಂದಿಗೆ – ಪ್ರಜಾವಾಣಿ ಚಿತ್ರ